ಹೇಳಿಕೆಯನ್ನು ವಿರೋದಿಸುತ್ತೇನೆ. ತಾವು ಸರಿಯಾದ ಪ್ರಾಮಾಣಿಕವಾದ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ. ಇದು ಸರಿಯಲ್ಲ, ನಿಜವಾಗಿಯೂ, ಇದು ನೋವಾದ ಪ್ರಸಂಗ. ಅತ್ಯಂತ ನೋವಿನಿಂದ ಈ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಶೂನ್ಯವೇಳೆಯು ಸಮಾಪ್ತವಾಯಿತು. ಈಗ ತಾವು ಒಂದು ಪ್ರಸ್ತಾವನೆ ಮಾಡಬೇಕು.

ದ ಅ ॥ ಪ್ರಸ್ತಾವನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31 ನೇ ಜೂನ್ 1993 ರ ವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವವೇನೆಂದರೆ 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 31ನೇ ಜೂನ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ದ ಅ ॥ ವಿತ್ತೀಯ ಕಾರ್ಯಕಲಾಪ

1993-94ನೇ ಸಾಲಿನ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ(ಮುಂದುವರೆದುದು)

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಏನು 28 ಇಲಾಖೆ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಿದ್ದಾರೆ ಅದನ್ನು ಸ್ವಾಗತ ಮಾಡುತ್ತಾ.....

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಮುಖ್ಯ ಮಂತ್ರಿಗಳೇ, ಈ ಒಂದು ಮೆಸೇಜ್ ಬಂದಿದೆ ನಮ್ಮ ಅಶ್ವತ್ಥನಾರಾಯಣ ರೆಡ್ಡಿಯವರು, ನಮ್ಮ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷರು, ತಮಗೆ ಗೊತ್ತು ವರ್ತೂರು ಕಾನ್‌ಸ್ಟಿಯುನ್ಸಿಯಲ್ಲಿ ಸೈಟ್‌ಗಳನ್ನು ಕೊಡುವ ವಿಚಾರದಲ್ಲಿ ಒಂದು ಎಜಿಟೇಷನ್ ನಡೆಯುತ್ತಿದೆ. ಪುನಃ ಅವರನ್ನು ಪೋಲೀಸಿನವರು ಆರೆಸ್ಟ್ ಮಾಡಿಕೊಂಡು ಹೋಗಿರುತ್ತಾರೆ. ಹಾಗಾಗಿ ತಮ್ಮ ತಮ್ಮ ಸರ್ಕಾರ ಡೆಮಾಕ್ರೆಟಿಕಲಿ agitation ಮಾಡುವವರನ್ನು ಬಂಧಿಸುವುದಿಲ್ಲ ಎಂದು ಭಾವಿಸುತ್ತೇನೆ. ಹಾಗಾಗಿ ತಾವು ಇಮೆಡಿಯೇಟ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ ಸಿದ್ಧಯ್ಯ ರೋಡಿನಲ್ಲಿ ಒಂದು ಶಾಲಾ ಕಟ್ಟಡ ಬಿದ್ದು ಹೋಗಿ ಇಬ್ಬರು ಮಕ್ಕಳು ಸತ್ತಿದ್ದಾರೆ, ನೂರಾರು ಮಕ್ಕಳಿಗೆ ಗಾಯವಾಗಿವೆ ಎಂದು ತಿಳಿದುಬಂದಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಾ ಅದನ್ನ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ :(ಮೂಡಿಗೆರೆ) ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸಭೆಯ ಮುಂದೆ 47 ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಅದರಲ್ಲಿ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆ ಮಾಡದೆ ಕೆಲವೇ ಬೇಡಿಕೆಗಳ ಬಗ್ಗೆ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಈ ದಿನ ನನಗೆ ಚರ್ಚೆ ಮಾಡುವುದಕ್ಕೆ ಮನಸ್ಸು ಇಲ್ಲ. ಆದರೆ ಹೆಸರು ಕೊಟ್ಟು ಹೆಸರು ಕರೆದಾಗ ನಾನು ಇಲ್ಲಿ ಕುಳಿತುಕೊಂಡು ಮಾತನಾಡುವುದಿಲ್ಲವೆಂದರೆ ಸರಿಹೋಗುವುದಿಲ್ಲವೆಂದು ಕೆಲವೇ ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಜಿಲ್ಲಾಪರಿಷತ್ತಿನ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ನಾವು ಬಹಳ ಮುಖ್ಯವಾಗಿ ನೋಡಬೇಕಾಗಿರುವುದು ಕುಡಿಯುವ ನೀರು, ರಸ್ತೆ, ಪಶ್ಚಿಮಘಟ್ಟಗಳ ಯೋಜನೆಗಳು, ಮನೆ

ಕಟ್ಟುವ ವಿಷಯ, ಮತ್ತು ವಿಶೇಷ ಘಟಕ ಯೋಜನೆಗಳನ್ನು ಇಲ್ಲಿ ನಾವು ವಿಚಾರ ಮಾಡಬೇಕಾಗುತ್ತದೆ. ಇದಕ್ಕೂ ಮೊದಲು ಒಂದು ಮಾತು ಹೇಳಬೇಕೆಂದರೆ ನಾವು ಜಿಲ್ಲಾ ಪರಿಷತ್ತು ಅಂದಾಕ್ಷಣ ಗ್ರಾಮೀಣ ಅಭಿವೃದ್ಧಿ. ಗ್ರಾಮೀಣಾಭಿವೃದ್ಧಿ ಬಗ್ಗೆ ಬಹಳ ಕಾಲದಿಂದ ಮಾತನಾಡಿಕೊಂಡು ಬಂದಿದ್ದೇವೆ ಮತ್ತು ಅದಕ್ಕಾಗಿ ಹಲವಾರು ಯೋಜನೆಗಳನ್ನು ಹಾಕಿದ್ದೇವೆ. ಆದರೆ ಗ್ರಾಮೀಣಾಭಿವೃದ್ಧಿ ನಿಜವಾಗಿ ಆಗಿದೆಯೇ ಎಂದರೆ ಸ್ವಾತಂತ್ರ್ಯ ಬಂದು 45 ವರ್ಷವಾದರೂ ಜನರಿಗೆ ಸರಿಯಾಗಿ ಕುಡಿಯುವುದಕ್ಕೆ ನೀರು ಕೊಟ್ಟಿಲ್ಲ. 50 ಪರ್ಸೆಂಟ್ ಹಳ್ಳಿಗಳಿಗೆ ನೀರು ಕೊಡುವುದಕ್ಕಾಗಿಲ್ಲ. ರಸ್ತೆಗಳ ವಿಚಾರ ಮಾಡಿದರೆ ಅಲ್ಲಿ ನಿಜವಾಗಿ ಜನರು ಜಾನುವಾರುಗಳು ಓಡಾಡಲಿಕ್ಕೆ ಯೋಗ್ಯವಲ್ಲದ ರಸ್ತೆಗಳನ್ನು ಇಟ್ಟುಕೊಂಡಿದ್ದೇವೆ. ಅದೇ ರೀತಿ ಈ ಒಂದು ಗ್ರಾಮೀಣ ಅಭಿವೃದ್ಧಿಯಲ್ಲಿ ವಿಶೇಷ ಘಟಕ ಯೋಜನೆ ಬರುತ್ತದೆ. ಅದರಲ್ಲಿ ಏನು ಇವತ್ತು 18 ಪರ್ಸೆಂಟ್ ಹಣ ಹರಿಜನ ಗಿರಿಜನರ ಅಭಿವೃದ್ಧಿಗೆ ಖರ್ಚು ಮಾಡಬೇಕೆಂದು ಇದ್ದರೂ ಅದರ ಸದುಪಯೋಗ ಸರಿಯಾಗಿ ಆಗಿಲ್ಲ. ಇದು ಏತಕ್ಕೆ ಎಂದು ವಿಚಾರ ಮಾಡಬೇಕಾಗುತ್ತದೆ. ಪಟ್ಟಣದ ಜನರು ಮನುಷ್ಯರೆ, ಗ್ರಾಮದಲ್ಲಿ ವಾಸಿಸುವವರು ಮನುಷ್ಯರೆ, ಆದರೆ ಸರಿಯೋ ತಪ್ಪೋ ಪಟ್ಟಣದ ಜನರಿಗೆ ಎಲ್ಲಾ ಸವಲತ್ತುಗಳು ತಕ್ಷಣ ಸಿಗುತ್ತವೆ. ಕುಡಿಯುವ ನೀರಿನ ಯೋಜನೆ ಆಗುತ್ತದೆ. ರಸ್ತೆಗಳಲ್ಲಿ ಟಾರ್ ಆಗಿರುತ್ತವೆ. ವಿಶೇಷವಾದ ಕಟ್ಟಡಗಳು, ಶಾಲಾ ಕಾಲೇಜುಗಳು ಇವು ಮಂಜೂರಾತಿ ಪಡೆಯುತ್ತವೆ ಮತ್ತು ಅವುಗಳ ಒಂದು ಉಪಯೋಗ ಚೆನ್ನಾಗಿ ಆಗಿರುತ್ತದೆ. ಆದರೆ ಗ್ರಾಮಾಂತರ ಜನರ ವಿಷಯಕ್ಕೆ ಬಂದರೆ ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ವಿಚಾರ ಮಾಡಿದರೆ ನಾವು ಅಷ್ಟಾಗಿ ಗಮನ ಹರಿಸುವುದಿಲ್ಲ. ಬಹಳವಾಗಿ ಗ್ರಾಮಾಂತರ ಪ್ರದೇಶಗಳನ್ನು ಕಡೆಗಣಿಸಿದ್ದೇವೆ. ಶಾಲಾ ಕಟ್ಟಡಗಳನ್ನು ತೆಗೆದುಕೊಳ್ಳಿ, ಆಸ್ಪತ್ರೆ ಕಟ್ಟಡಗಳನ್ನು ತೆಗೆದುಕೊಳ್ಳಿ, ಅವೆಲ್ಲ ಬಹಳ ದುಸ್ಥಿತಿಯಲ್ಲಿವೆ. ಹೋದ ಸಾರಿ ಹಾಗೆ ಎರಡು ಸಾರಿ ಮಳೆ ಬಂದರೆ ಎಲ್ಲಾ ಕಟ್ಟಡಗಳು ನೆಲಸಮವಾಗುತ್ತವೆ. ಹೋದ ಸಾರಿ ಮಳೆ ಬಂದಾಗ ಸಾಕಷ್ಟು ಶಾಲಾ ಕಟ್ಟಡಗಳು ಬಿದ್ದುಹೋಗಿವೆ. ರಸ್ತೆಗಳೆಲ್ಲ ಕೊಚ್ಚಿಕೊಂಡು ಹೋಗಿವೆ. ಮೋರಿಗಳು ಕೊಚ್ಚಿಹೋಗಿವೆ. ಇವತ್ತು ಸಹ ಅವುಗಳನ್ನು ರಿಪೇರಿ ಮಾಡುವುದಕ್ಕಾಗುತ್ತಿಲ್ಲ. ಏತಕ್ಕೆ ಈ ತಾರತಮ್ಯ ಎಂಬುದನ್ನು ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ನಮಗನ್ನಿಸುತ್ತದೆ, ಪಟ್ಟಣ ಪ್ರದೇಶದ ಜನರು ವಿದ್ಯಾವಂತರು, ಬುದ್ಧಿವಂತರು, ಅವರಿಗೆ ಸವಲತ್ತು, ಸೌಲಭ್ಯ ಇಲ್ಲದಿದ್ದರೆ ಅವರು ಬದುಕುವುದೇ ಕಷ್ಟ ಎನ್ನುವ ರೀತಿಯಲ್ಲಿ ಸವಲತ್ತು, ಸೌಲಭ್ಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಗ್ರಾಮಾಂತರ ಜನರದ್ದು ಏನಾಗುತ್ತದೆಂದರೆ ಸರಿಯೋ ತಪ್ಪೋ ಕುಡಿಯುವುದಕ್ಕೆ ನೀರಿಲ್ಲದಿದ್ದರೆ ಒಂದು-ಒಂದೂವರೆ ಮೈಲಿ ದೂರ ಹೋಗಿ ಕೆರೆಯಿಂದ ಹಳ್ಳದಿಂದ ನೀರನ್ನು ತೆಗೆದುಕೊಂಡು ಬರೋಣ ಎಂಬ ಮನೋಭಾವ ಇರುವುದರಿಂದ 50 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುತ್, ನೀರು, ರಸ್ತೆ ಒದಗಿಸದೆ ಇದ್ದರೂ ಅವರೆಲ್ಲ ಸಮಾಧಾನದಿಂದ ಇದ್ದಾರೆ. ಓಟಿಂಗ್ ಸಮಯದಲ್ಲಿ ಮಾತ್ರ ಹಳ್ಳಿಗಳಿಗೆ ಹೋದಾಗ ಯೋಚನೆ ಮಾಡುತ್ತಾರೆ. ಹೋದ ಸಾರಿ ಓಟು ತೆಗೆದುಕೊಂಡು ಹೋದಿರಿ, ಈಗ ಮತ್ತೆ ಚುನಾವಣೆಗೆ ಬಂದಿದ್ದೀರಿ, ನಮ್ಮ ಊರಿಗೆ ನೀರು ಕೊಟ್ಟಿಲ್ಲ, ರಸ್ತೆ ಕೊಟ್ಟಿಲ್ಲ, ಶಾಲೆ ಕೊಡಿ, ಆಸ್ಪತ್ರೆ ಕೊಡಿ ಅನ್ನುತ್ತಾರೆ. ಯಾವುದಾದರೂ ಕಾರ್ಯಕ್ರಮಕ್ಕೆ ಹೋದರೆ ಬನ್ನಿ ಚುನಾವಣೆಗೆ ಹೇಗೆ ಬರುತ್ತೀರಿ ನಾವು ನೋಡುತ್ತೇವೆ ಅನ್ನುತ್ತಾರೆ. ಅದಕ್ಕೆ ನಾವು ಹೆದರಿಕೊಳ್ಳಬೇಕಾಗಿದೆ. ನಾವು ಇಲ್ಲಿ ಶಾಸನ ಸಭೆಯಲ್ಲಿ ಗಂಟಲು ಹರಿಯುವಂತೆ ಮಾತನಾಡಿದರೂ ಪರಿಹಾರ ಸಿಗುವುದಿಲ್ಲ. ಹಾಗಾಗಿ ಒಂದೊಂದು ಸಾರಿ ಇಲಾಖೆಗಳ ಚರ್ಚೆಯಲ್ಲಿ ಭಾಗವಹಿಸುವುದು ತಪ್ಪೋ, ಕ್ಷೇತ್ರದ ಬಗ್ಗೆ ಜಿಲ್ಲೆಯ ಬಗ್ಗೆ ಮಾತನಾಡುವುದು ತಪ್ಪೋ ಏನೋ ಅನ್ನಿಸುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಗಮನಹರಿಸದಿದ್ದರೆ ಹೇಗೆ ಎಂದು ಹೇಳುತ್ತಿದ್ದೇನೆ. ಈ ಇಲಾಖೆಯ ಬಗ್ಗೆ ಚರ್ಚೆ ಮಾಡುವುದು ತಪ್ಪೇನೋ ಎಂದು ಅನಿಸುತ್ತದೆ ನಮ್ಮ ಮಾತು ವ್ಯರ್ಥ. ನಾವು ಹೇಳುತ್ತೇನೆ ಇಂತಹದ್ದು ಆಗಬೇಕೆಂದು, ನಮ್ಮ ಜಿಲ್ಲೆಯ ಪರಿಸ್ಥಿತಿ ಹೀಗಿದೆ, ನಮ್ಮ ತಾಲ್ಲೂಕಿನ ಪರಿಸ್ಥಿತಿ ಹೀಗಿದೆಯೆಂದು ನಮ್ಮ ಗ್ರಾಮದ ಪರಿಸ್ಥಿತಿ ಹೀಗೆ ಇದೆಯೆಂದು ನಾವು ಮಾತನಾಡಬೇಕಾಗುತ್ತದೆ. ಏಕೆಂದರೆ ಜನರು ಓಟು ತೆಗೆದುಕೊಂಡು ಹೋಗಿ ಶಾಸನಸಭೆಯಲ್ಲಿ ನಮ್ಮ ಶಾಸಕರು ನಿದ್ದೆ ಹೊಡೆಯುತ್ತಾರೆಂದು ಅಂದುಕೊಳ್ಳುವುದು ಬೇಡ ಎನ್ನುವ ದೃಷ್ಟಿಯಿಂದ ಮಾತನಾಡಿದರೆ ಒಂದಾದರೂ ಸಹ ನಮ್ಮ ಜನರಿಗೆ ಉಪಯೋಗವಾಗಬಹುದು

ಎನ್ನುವ ದೃಷ್ಟಿಯಿಂದ ನಾವು ಮಾತನಾಡುತ್ತೇವೆ. ಅದನ್ನು ಸಹ ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳದಿದ್ದರೆ ನಮ್ಮ ಪಾಡೇನು ಆಗಬೇಕು? ಮಾನ್ಯ ಘೋರ್ಪಡೆಯವರ ಬಗ್ಗೆ ನನಗೆ ಗೌರವವಿದೆ.

ಶ್ರೀ ಎಂ.ವೈ. ಘೋರ್ಪಡೆ:- ಸರ್ಕಾರದವರು ನಾವು ಗಮನಹರಿಸುತ್ತಿದ್ದೇವೆ. ಮಾನ್ಯ ರಾಜಶೇಖರಮೂರ್ತಿಯವರು ಒಂದು ಮಾತು ಹೇಳಿದರು, ಅವರು ಹೇಳಿದ್ದಕ್ಕೆ ಅವರ ಕಡೆಗೆ ಸ್ವಲ್ಪ ಗಮನಕೊಟ್ಟಿದ್ದೆ.

ಶ್ರೀಮತಿ ಮೋಟಮ್ಮ:- ನಿಮ್ಮ ಬಗ್ಗೆ ನಮಗೆ ಗೌರವವಿದೆ. ನನ್ನ ಮಿತ್ರರಾದ ಶಾಸಕರು ನೀವು ಮಾತನಾಡುತ್ತಿರುವುದನ್ನು ಗಮನಿಸಿ ಹೇಳಿದರು ಅದಕ್ಕೆ ನಾನು ನಿಮಗೆ ಎಚ್ಚರಿಸಿದೆ. ಸೀರಿಯಸ್ ಆಗಿ ಇಸ್ಯು ಬಗ್ಗೆ ವಿಚಾರಮಾಡಬೇಕು. ಜಿಲ್ಲಾ ಪರಿಷತ್ ಅಂದಾಕ್ಷಣ ನಾನು ಮೊದಲೇ ಹೇಳಿದ ಹಾಗೆ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಆದ್ಯತೆ ಕೊಡಬೇಕೆನ್ನುವುದು ನನ್ನ ಇಚ್ಛೆ. ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ತಿಳುವಳಿಕೆಯಾಗಿದೆ ಎಂದು ಅಂದುಕೊಂಡಿದ್ದೇನೆ. ನಾನು ಮೊನ್ನೆ 12ನೇ ತಾರೀಖು ಊರಿನಿಂದ ವಾಪಸು ಬೆಂಗಳೂರಿಗೆ ಬರಬೇಕಾದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಜಲಸ್ತರದ ಬಗ್ಗೆ ಓದಿದೆ. ಆ ಹೇಳಿಕೆಯಿಂದ ನಮಗೆ ನೀರಿನ ಗಂಡಾಂತರ ಬಂದಿದೆ. ಜಲಸ್ತರ ಒಣಗಿ ಹೋಗುತ್ತಿದೆ. ಅಲ್ಲಲ್ಲೆ ವಾಟರ್ ಟೇಬಲ್ ಡ್ರೈ ಅಪ್ ಆಗುತ್ತಾ ಇದೆ. ಅದರ ಬಗ್ಗೆ ಎಚ್ಚರಿಕೆಯನ್ನು ವಹಿಸದಿದ್ದರೆ ಮುಂದೆ ಶಾಶ್ವತವಾಗಿ ನೀರು ಇಲ್ಲದ ಹಾಗೆ ಆಗುತ್ತದೆನ್ನುವ ಮಾತನ್ನು ಹೇಳಿದ್ದಾರೆ. ನಾನು ಈ ಹಿಂದೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿ ಕುಡಿಯುವ ನೀರನ ಬಗ್ಗೆ ಕೇಳಿದ್ದೆ. ನಮ್ಮಲ್ಲಿಯೂ ಸಹ ಅದೇ ಪರಿಸ್ಥಿತಿ ಇದೆ. 200 ಅಡಿ ಆಳ ಬೋರ್‌ವೆಲ್ ಕೊರೆದರೂ ನಮಗೆ ಕುಡಿಯುವ ನೀರು ಸಿಗುತ್ತಿಲ್ಲ. ನಮ್ಮಲ್ಲಿ ಎನ್‌ಆರ್‌ಡಬ್ಲ್ಯು ಎಸ್ ಮತ್ತು ಎಂಡಬ್ಲ್ಯುಎಸ್ ಮತ್ತೆ ಅದೇ ಆಗಿದೆ. ವಾಟರ್ ಸೋರ್ಸ್‌ಗೆ ಬೋರ್‌ವೆಲ್‌ಗಳನ್ನು ಮಾಡಿದ್ದಾರೆ. ಅದು ಸಹ ಏಳೆಂಟು ವಾಟರ್ ಸೋರ್ಸ್‌ಸ್ ಡ್ರೈ ಆಗಿವೆ. ನಮಗೆ ವಿಶೇಷ ಅನುದಾನವನ್ನು ಕೊಡಬೇಕು. ನಮ್ಮಲ್ಲಿ ಜಲಸ್ತರಗಳಿರುವ ಹಳ್ಳಕೊಳ್ಳಗಳಲ್ಲಿ ಓಪನ್‌ವೆಲ್ ತೆಗೆದರೆ ನೀರು ಸಾಕಷ್ಟು ಬರುತ್ತದೆ. ಅದು ಶಾಶ್ವತವಾಗಿರುತ್ತದೆ. ಆದ್ದರಿಂದ ಇಂತಹ ಯೋಜನೆಗಳಿಗೆ ಹೆಚ್ಚಿನ ಗಮನಕೊಡಬೇಕು. ತಾವು ಸಹ ಇದನ್ನು ಒಪ್ಪಿಕೊಂಡು ವಿಶೇಷವಾಗಿ ಇಂತಹ ಯೋಜನೆಗಳನ್ನು ಮಲೆನಾಡಿನಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ಶಿವಮೊಗ್ಗ, ಕೊಡಗು ಜಿಲ್ಲೆಗಳಿಗೆ ಈ ತರಹ ವಿಶೇಷ ಯೋಜನೆ ಮಾಡಲಿಕ್ಕೆ ತಾವು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಣವನ್ನು ಕೊಟ್ಟಿದ್ದೀರಿ. ಅದು ನನಗೆ ಗೊತ್ತಾಗಿದೆ. ಆದರೆ, ನೀವು ಮಂಗಳೂರು ಏಕೆ ಬಿಟ್ಟಿರಿ? ಚಿಕ್ಕಮಗಳೂರು ಏಕೆ ಬಿಟ್ಟಿರಿ? ಈ ಜಿಲ್ಲೆಗಳನ್ನು ಏಕೆ ಬಿಟ್ಟಿರಿ ಎಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ. ನಮ್ಮ ಜಿಲ್ಲಾಪರಿಷತ್‌ನವರು ನಮಗೆ ಮಾಹಿತಿಯನ್ನು ಒದಗಿಸಿದ್ದಾರೆ. ಕುಡಿಯುವ ನೀರಿನ ಯೋಜನೆ ಮಾಡಲಿಕ್ಕೆ ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ನೀವು ಪ್ರಯತ್ನ ಮಾಡಿದ್ದೀರಿ. ಅದೇ ಸೇಮ್ ಕಂಡೀಷನ್ ಸೇಮ್ ವೆದರ್ ಇರತಕ್ಕ ಮಂಗಳೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಏಕೆ ತರಲಿಲ್ಲ? ನಮ್ಮದೂ ಗುಡ್ಡಗಾಡು ಏರಿಯಾ, ಒಂದು ಬೋರ್‌ವೆಲ್ ಮಾಡಿ ನೂರಾರು ಮನೆಗಳಿಗೆ ನೀರು ಕೊಡಲಿಕ್ಕೆ ಆಗುವುದಿಲ್ಲ. ಹಳ್ಳಕೊಳ್ಳಗಳಿರುವ ಜಾಗಗಳಲ್ಲಿ ಓಪನ್‌ವೆಲ್ ತೆಗೆದರೆ ಪೈಪು ಹಾಕಿ ನೀವು ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಮಾಡಿದರೆ ಎಲ್ಲ ಜನರಿಗೆ ನೀರು ಕೊಡಲಿಕ್ಕೆ ಸಾಧ್ಯತೆ ಇರುತ್ತದೆ ಇಂತಹ ಸ್ಕೀಮ್‌ಗಳನ್ನು ಹೆಚ್ಚು ಹೆಚ್ಚಾಗಿ ಮಲೆನಾಡಿನಲ್ಲಿ ನೀವು ಪ್ರಾರಂಭ ಮಾಡಬೇಕಾಗುತ್ತದೆ. ಈ ಸಾರಿ ನಮಗೆ ಬೋರ್‌ವೆಲ್ ಕೊಟ್ಟಿದ್ದರಲ್ಲಿ 1992-1993ರಲ್ಲಿ ಸುಮಾರು 18 ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡಲಿಕ್ಕೆ ಆಗಲಿಲ್ಲ. ಆ ಹಣ ವೇಸ್ಟಾಯಿತು. ನಾನು ಆಗಲೇ ಹೇಳಿದ್ದೇನೆ ಶಿವಮೊಗ್ಗ ಜಿಲ್ಲೆಯವರ ಒತ್ತಡ ನಿಮಗೆ ಜಾಸ್ತಿ ಇರಬಹುದು. ಈ ಸಾರಿ ಅವರಿಗಿಂತ ಜಾಸ್ತಿ ಒತ್ತಡವನ್ನು ನಾವು ಹಾಕಿದ್ದೇವೆ. ಹೋದ ಸಾರಿ ಅವರಿಗೆ ಕೊಟ್ಟಿದ್ದೀರಿ. ಈ ಸಾರಿ ನಮಗೆ ಕೊಡಿ. ನಮ್ಮಲ್ಲಿ 18 ಬೋರ್‌ವೆಲ್‌ಗಳು ಫೇಲ್ ಆಗಿ ರಿಗ್‌ಗಳು ಹೋಗಲಿಕ್ಕೆ ಆಗಲಿಲ್ಲ. ಆ ಹಣವನ್ನು ನಮಗೆ ಕೊಡಿ. ನಾನು ಸ್ಕೀಮ್‌ಗಳನ್ನು ಜಿಲ್ಲಾ ಪರಿಷತ್‌ನವರಿಂದ ಮಾಡಿಸುತ್ತೇನೆ. ಬೋರ್‌ವೆಲ್ ಸ್ಕೀಮ್‌ಗಳನ್ನು

ಜಿಲ್ಲಾಪರಿಷತ್‌ನವರು ಒಪ್ಪಿಕೊಳ್ಳುತ್ತಿಲ್ಲ. ನಾನು ಹಿಂದಿನಿಂದ ಹೇಳಿಕೊಂಡು ಬಂದಿದ್ದೇನೆ. ಮಲೆನಾಡು ಪ್ರದೇಶಗಳಿಗೆ ಬೋರ್‌ವೆಲ್‌ಗಳನ್ನು ಕೊಡಬೇಡಿ. ನೀವು ಕೊಡುವುದಾದರೆ ಸ್ಕೀಮ್‌ಗಳನ್ನು ಕೊಡಬೇಕು. ನಮ್ಮಲ್ಲಿ ಓಪನ್‌ವೆಲ್‌ಗಳನ್ನು ತೆಗೆಯಬೇಕಾಗುತ್ತದೆ. ಆ ಓಪನ್‌ವೆಲ್‌ನಿಂದ ಸೇದೋಬಾವಿ ಸೇದುವುದಕ್ಕೆ ಆಗುವುದಿಲ್ಲ. 50-60 ಸಾವಿರ ರೂಪಾಯಿ ಬಾವಿ ತೆಗೆಯಲಿಕ್ಕೆ ಬೇಕಾಗುತ್ತದೆ. ಪೈಪು ಹಾಕಲಿಕ್ಕೆ ಸಪರೇಟಾಗಿ 20-30 ಸಾವಿರ ಬೇಕಾಗುತ್ತದೆ. ಟ್ಯಾಂಕ್ ಕಟ್ಟಲಿಕ್ಕೆ ಹಣ ಬೇಕಾಗುತ್ತದೆ. ನಮ್ಮಲ್ಲಿ ಒಂದು ಸ್ಕೀಮ್ ಮಾಡಲಿಕ್ಕೆ ಲಕ್ಷ ಒಂದೂವರೆ ಲಕ್ಷ ರೂಪಾಯಿ ಬೇಕಾಗುತ್ತದೆ. ಜಿಲ್ಲಾ ಪರಿಷತ್‌ನಿಂದ ನಮಗೆ ಎರಡು ಎನ್‌ಆರ್‌ಡಬ್ಲ್ಯುಎಸ್ ಕ್ಷೇತ್ರಕ್ಕೆ ಬರಬಹುದು. ನಾಲ್ಕು ಎಂಡಬ್ಲ್ಯುಎಸ್ ಬರಬಹುದು.

ಆದರೆ ಹತ್ತಾರು ಗ್ರಾಮಗಳಿಗೆ ಇದರಿಂದ ನೀರು ಕೊಡುವುದಕ್ಕೆ ಹೇಗೆ ಸಾಧ್ಯ? ಅದಕ್ಕಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಬೇರೆ ಯಾವುದಕ್ಕೂ ಕಡಿಮೆ ಕೊಟ್ಟರೂ ಪರವಾಗಿಲ್ಲ ಕುಡಿಯುವ ನೀರಿಗೆ ಮಾತ್ರ ಜಾಸ್ತಿ ದುಡ್ಡನ್ನು ಈ ಸಾರಿ ಕೊಡಬೇಕು. ಆದರೆ ಈ ಸಾರಿ ನಮ್ಮ ಜಿಲ್ಲೆಗೆ ಕುಡಿಯುವ ನೀರಿಗೆ ಕೊಟ್ಟಿರುವುದು ಬಹಳ ಕಡಿಮೆ. ಪೈಪ್ ವಾಟರ್ ಸಪ್ಲೈ ಸ್ಕೀಮಿಗೆ ಕೊಟ್ಟಿರುವುದು ಕೇವಲ 29 ಲಕ್ಷ ರೂಪಾಯಿಗಳು, ಕೊನೆಯಪಕ್ಷ ಇದನ್ನು 50ಲಕ್ಷಕ್ಕಾದರೂ ಜಾಸ್ತಿ ಮಾಡಿದರೆ ಒಳ್ಳೆಯದಾಗುತ್ತದೆ. ಹಾಗೆ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್ಸ್ ಏನಿದೆ, ಅದಕ್ಕೆ ಮ್ಯಾಚಿಂಗ್ ಗ್ರಾಂಟ್‌ನ್ನು ರಾಜ್ಯ ಸರ್ಕಾರ ಕೊಟ್ಟರೆ ಅವರು ಕೊಡುತ್ತಾರೆ. ಅದನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಬೇಕು. ಹೀಗೆ ಪ್ರಯತ್ನ ಮಾಡಿದರೆ ಮಾತ್ರ ನೀವು ಹೆಚ್ಚು ದುಡ್ಡು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಇಷ್ಟು ನಾನು ಕುಡಿಯುವ ನೀರಿನ ಬಗ್ಗೆ ಹೇಳಿ ಇನ್ನು ರಸ್ತೆಗಳು ಮತ್ತು ಕಟ್ಟಡಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ರಸ್ತೆಗಳ ಪರಿಸ್ಥಿತಿ ಹೇಗಾಗಿದೆ ಎಂದರೆ, ಅದರಲ್ಲೂ ನನ್ನ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಸುಮಾರು 612 ಕಿ.ಮೀ ರಸ್ತೆ ಬರುತ್ತದೆ. ಓಡಿಯಾರು ಮತ್ತು ವಿಲೇಜ್ ರೋಡ್ಸ್ ಮತ್ತು ಟಿ.ಡಿ.ಬಿ. ರೋಡ್ಸ್ 613 ಕಿ.ಮೀ.ರಸ್ತೆ ಇದ್ದು ಈ ಸಾರಿ ನೀವು ಕೊಟ್ಟಿರುವ ಹಣ 20 ಲಕ್ಷ ರೂಪಾಯಿಗಳು. ಇಷ್ಟು ಹಣದಲ್ಲಿ ಎಷ್ಟು ರಸ್ತೆ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯ? ಎಷ್ಟು ರಸ್ತೆಗೆ ಟಾರು ಮಾಡುವುದಕ್ಕೆ ಸಾಧ್ಯ? ಎಷ್ಟು ಕಲ್ವರ್ಟ್ಸ್ ಕಟ್ಟುವುದಕ್ಕೆ ಸಾಧ್ಯವೆಂದು ತಾವು ವಿಚಾರ ಮಾಡಬೇಕು. ನೀವು ಈ ರಸ್ತೆ ಕಾಮಗಾರಿ ಮತ್ತು ಸೇತು ಬಂಧನದಲ್ಲಿ ಜಾಸ್ತಿ ಹಣ ಒದಗಿಸಬೇಕಾಗುತ್ತದೆ. ಮೊನ್ನೆ ನವೆಂಬರ್ ಮತ್ತು ಮಳೆಗಾಲದ ಅವಧಿಯಲ್ಲಿ ಹೆಚ್ಚು ಮಳೆ ಬಂದು ಸಾಕಷ್ಟು ಮೋರಿಗಳು ಹಾಳಾಗಿವೆ ಮತ್ತು ಶಾಲಾಕಟ್ಟಡಗಳು ಬಿದ್ದುಹೋಗಿವೆ. ಇವುಗಳನ್ನು ರಿಪೇರಿ ಮಾಡುವುದಕ್ಕೆ ನಿಮ್ಮ ಹಣದಲ್ಲಿ ಸಾಕಾಗುವುದಿಲ್ಲ. ನಾವು ಫ್ಲಡ್ ಅಮೌಂಟನ್ನು ಏನು ಕೇಳಿದ್ದೆವು, ಇದನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ವಿಶೇಷವಾಗಿ ಗಮನಿಸಬೇಕಾಗುತ್ತದೆ. ನಮ್ಮಲ್ಲಿ ರೇನ್ ಡ್ಯಾಮೇಜ್ಡ್ ವರ್ಕ್‌ಗೆ ಏನು ರೆವಿನ್ಯೂ ಇಲಾಖೆಗೆ ದುಡ್ಡು ಬಂತು, ಅದರಲ್ಲಿ ಜಿಲ್ಲಾ ಪರಿಷತ್ತಿಗೆ ಬಂದಿರುವುದು ಬಹಳ ಕಡಿಮೆ. ಆದರೆ ಪಿ.ಡಬ್ಲ್ಯೂ.ಡಿ.ಗೆ ನಮ್ಮ ಜಿಲ್ಲೆಗೆ ಸಾಕಷ್ಟು ದುಡ್ಡು ಕೊಟ್ಟಿದ್ದಾರೆ. ಇದು ಏಕೆ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಪಿ.ಡಬ್ಲ್ಯೂ.ಡಿ ರಸ್ತೆಗಳೇನೂ ಹೊಸದಾಗಿ ಫಾರ್ಮೇಶನ್ ಆಗಬೇಕಾಗಿಲ್ಲ. ಏನಾದರೂ ಇದ್ದರೆ ಟಾರು ಕಿತ್ತುಹೋಗಿರಬಹುದು. ಹೆಚ್ಚು ವಾಹನಗಳು ಓಡಾಡಿರಬಹುದು. ಆದರೆ ಮೋರಿಗಳು ಕಿತ್ತು ಹೋಗಿ, ರಸ್ತೆಗಳು ಓಡಾಡುವ ಪರಿಸ್ಥಿತಿಯಲ್ಲಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಾದರೂ ಜಿಲ್ಲಾ ಪರಿಷತ್ ರೋಡ್‌ಗಳಿಗೆ ರೇನ್ ಡ್ಯಾಮೇಜ್ಡ್ ವರ್ಕ್ಸ್‌ನಲ್ಲಾಗಲೀ, ಫ್ಲಡ್ ವರ್ಕ್‌ದಲ್ಲಾಗಲೀ, ಜಾಸ್ತಿ ದುಡ್ಡನ್ನು ರೆವಿನ್ಯೂ ಡಿಪಾರ್ಟಮೆಂಟ್‌ನವರು ಕೊಟ್ಟಿಲ್ಲ. ನೀವು ಏಕೆ ಪ್ರಯತ್ನ ಮಾಡಿಲ್ಲವೆಂದು ನಾನು ಕೇಳುತ್ತೇನೆ. ನಾನು ಇದನ್ನು ರೆವಿನ್ಯೂ ಡಿಪಾರ್ಟಮೆಂಟ್‌ನಲ್ಲಿ ವಿಚಾರ ಮಾಡಿದಾಗ, ಪಿಡಬ್ಲ್ಯೂ.ಡಿ.ಗೆ ನೇರವಾಗಿ ದುಡ್ಡು ಏಕೆ ಕೊಟ್ಟಿರಿ, ಜಿಲ್ಲಾಪರಿಷತ್‌ಗೆ ಜಾಸ್ತಿ ಕೊಡಬೇಕಿತ್ತು ಎಂದು ಹೇಳಿದಾಗ, ಇಲ್ಲ ಹಾಗೆ ಕೊಟ್ಟಿಲ್ಲ. ಡಿ.ಸಿ.ಯವರಿಗೆ ಟೋಟಲ್ ಅಮೌಂಟ್ ಕೊಟ್ಟೆವು, ಆದರೆ ಪಿ.ಡಬ್ಲ್ಯೂ.ಡಿ.ಗೆ ಡಿ.ಸಿ. ಯವರೇ ಆ ಹಣ ಕೊಟ್ಟಿದ್ದಾರೆ ಎಂದು ಹೇಳಿದರು. ಇದು ಕ್ಲಾರಿಫೈ ಆಗಬೇಕು. ಏಕೆಂದರೆ ಈ ರೀತಿ ಆಗಿರುವುದು ಸರಿಯೋ ತಪ್ಪೋ.ಎಂದು ನೀವು ವಿಚಾರ ಮಾಡಬೇಕು. ಹಳ್ಳಿಗಾಡಿನ ರಸ್ತೆಗಳು ಹಾಳಾಗುತ್ತಾ ಇರಬೇಕಾದರೆ, ಅವುಗಳ

ಅಭಿವೃದ್ಧಿಗೆ ನೀವು ಜಾಸ್ತಿ ಹಣ ಕೊಡುವ ಬಗ್ಗೆ ವಿಚಾರ ಮಾಡಬೇಕು. ಈಗ ಸುಮಾರು 80 ಲಕ್ಷ ರೂಪಾಯಿಗಳನ್ನು ಪಿ.ಡಬ್ಲ್ಯೂ.ಡಿ ರಸ್ತೆಗಳಿಗೆ ಕೊಟ್ಟು, ಕೇವಲ 40 ಲಕ್ಷ ರೂಪಾಯಿಗಳನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟರೆ ಆ ರಸ್ತೆಗಳನ್ನು ಹೇಗೆ ರಿಪೇರಿ ಮಾಡುವುದಕ್ಕೆ ಸಾಧ್ಯ? ಜೊತೆಗೆ ನೀವು ಕೊಟ್ಟಿರುವ 20 ಲಕ್ಷ ರೂಪಾಯಿ ನನ್ನ ಕ್ಷೇತ್ರ ಒಂದಕ್ಕೆ ಬಂತು. ಆಮೇಲೆ ಫ್ಲಡ್‌ನಲ್ಲಿ 15 ಲಕ್ಷ ಕೊಟ್ಟಿದ್ದಾರೆ. ಒಟ್ಟು 35 ಲಕ್ಷ ರೂಪಾಯಿ ನಮ್ಮ ಜಿಲ್ಲೆಗೆ ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಬಂದಾಗ ಫ್ಲಡ್ ಡ್ಯಾಮೇಜ್‌ಗೆ ಸುಮಾರು ಆರೇಳು ಕೋಟಿ ಕೊಡಿ ಎಂದು ಎಸ್ಟಿಮೇಟ್ ಮಾಡಿದಾಗ, ಅಷ್ಟು ನಷ್ಟವಾಗಿದೆ ಎಂದು ನಾವು ಕೇಳಿದ್ದೆವು. ಆದರೆ ನಮ್ಮ ಜಿಲ್ಲೆಗೆ ಬಂದಿದ್ದು ಕೇವಲ 2 ಕೋಟಿ 50 ಲಕ್ಷ ರೂಪಾಯಿಗಳು ಮಾತ್ರ. ಅದರಿಂದ ಇಷ್ಟು ನಷ್ಟವನ್ನು ಹೇಗೆ ಸರಿಪಡಿಸುವುದಕ್ಕೆ ಸಾಧ್ಯ? ಜಿಲ್ಲಾ ಪರಿಷತ್ತಿನವರು ಏಕೆ ಜಾಸ್ತಿ ದುಡ್ಡು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂದು ವಿಚಾರ ಮಾಡಬೇಕು.

ಇನ್ನೊಂದು ಬಹಳ ಮುಖ್ಯವಾದ ಸಂಗತಿ ಏನೆಂದರೆ, ಜಿಲ್ಲಾ ಪರಿಷತ್ತಿನವರು ಶಾಲಾ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ನಾನು ಮೊನ್ನೆ ಪಿ.ಡಬ್ಲ್ಯೂ.ಡಿ ಬಗ್ಗೆ ಮಾತನಾಡುತ್ತಾ ಹೇಳಿದೆ. ಈ ವಿಚಾರದಲ್ಲಿ ವರ್ಕ್ ಗ್ಯಾರಂಟಿ ಫಿಕ್ಸ್ ಮಾಡಬೇಕು. ಯಾವುದೇ ಇಂಜಿನಿಯರಿಂಗ್ ವರ್ಕ್ ಆಗಲೀ, ವರ್ಕ್ ಗ್ಯಾರಂಟಿ ಫಿಕ್ಸ್ ಮಾಡಬೇಕು. ಈ ಮಳೆಗಾಲದಲ್ಲಿ ಕೆಲವು ಶಾಲಾ ಕಟ್ಟಡಗಳನ್ನು ಕಟ್ಟಿದ್ದಾರೆ. ಆ ಕಟ್ಟಡಗಳು ಮುಂದಿನ ವರ್ಷದ ಮಳೆಗಾಲದಲ್ಲಿ ಬಿದ್ದು ಹೋಗಿರುತ್ತದೆ. ಈ ನಷ್ಟವನ್ನು ಯಾರು ತುಂಬುತ್ತಾರೆ. ಇದು ಜನರ ದುಡ್ಡಲ್ಲವೇ? ಅದಕ್ಕೆ ಗ್ಯಾರಂಟಿ ಫಿಕ್ಸ್ ಮಾಡಬೇಕು. ಈ ಶಾಲಾ ಕಟ್ಟಡಗಳನ್ನು ಸರಿಯಾಗಿ ಕಟ್ಟಿದ್ದಾರೆಯೇ ಇಲ್ಲವೇ, ಸಿಮೆಂಟ್ ಸರಿಯಾಗಿ ಹಾಕಿದ್ದರೆಯೇ ಇಲ್ಲವೇ, ಫೌಂಡೇಷನ್ ಸರಿಯಾಗಿ ಇದೆಯೇ ಇಲ್ಲವೇ ಎಂಬುದನ್ನು ನೋಡುವುದಿಲ್ಲವೇ. ಹಾಗಾಗಿ, ಜಿಲ್ಲಾ ಪರಿಷತ್ತಿನವರು ಕಟ್ಟುತ್ತಿರುವ ಶಾಲಾ ಕಟ್ಟಡಗಳು ಹೆಚ್ಚು ಬಿದ್ದು ಹೋಗಿ, ಮತ್ತೆ ಕಟ್ಟತಕ್ಕ ಪರಿಸ್ಥಿತಿ ಬಂದಿದೆ. ದಯಮಾಡಿ, ಇದನ್ನು ವಿಚಾರ ಮಾಡಿ, ಸರಿಯಾದ ಆದೇಶ ಅಥವಾ ನಿರ್ದೇಶನ ಕೊಟ್ಟು, ಮುಂದೆ ಇಂತಹ ಕಳಪೆ ಕಾಮಗಾರಿ ಆಗದಂತೆ ನೋಡಬೇಕು. ಯಾವುದೇ ಶಾಲಾ ಕಟ್ಟಡ, ಯಾವುದೇ ಊರಿನಲ್ಲಿ ಸರಿಯಾಗಿಲ್ಲ. ಇನ್ನೊಂದು ನಾನು ಗಮನಿಸಿದ್ದೇನೆಂದರೆ, 1978ರಲ್ಲಿ ಕಟ್ಟಿರತಕ್ಕ ಜನತಾ ಮನೆಗಳು ಇನ್ನೂ ಭದ್ರವಾಗಿವೆ. ಆದರೆ, ಇಂಜಿನಿಯರ್ ಸೂಪರ್‌ವಿಷನ್‌ನಲ್ಲಿ, ಸಾಕಷ್ಟು ಸಿಮೆಂಟ್ ಹಾಕಿ, ಮರಳು ಹಾಕಿ ಕಟ್ಟಿದ ಶಾಲಾ ಕಟ್ಟಡಗಳು ಎರಡು ವರ್ಷದಲ್ಲಿ ಬಿದ್ದು ಹೋಗುತ್ತವೆಂದರೆ, ನಿಜವಾಗಿಯೂ ನಾವೆಲ್ಲರೂ ನಾಚಿಕೆ ಪಡಬೇಕು. ಇಂತಹ ಕಳಪೆ ಕಾಮಗಾರಿಗಳು ಏಕೆ ಆಗಬೇಕು. ಇನ್ನೊಂದು ಲ್ಯಾಂಡ್ ಆರ್ಮಿಯವರಿಗೆ ಕೆಲಸ ಕೊಟ್ಟಿದ್ದೀರಿ. ಈ ಲ್ಯಾಂಡ್ ಆರ್ಮಿಯವರಷ್ಟು ಕಳಪೆ ಕಾಮಗಾರಿಯನ್ನು ನಾವು ಎಲ್ಲೂ ನೋಡಿಲ್ಲವೆಂದು ಹೇಳಬಹುದು. ಇಂದಿರಾ ಆವಾಸ್ ಮನೆಗಳನ್ನು ನಮ್ಮಲ್ಲಿ ಕಟ್ಟಿದ್ದರು. ಅವುಗಳನ್ನು ಕೀಳಿಸಿ, ಮತ್ತೆ ಎರಡನೇ ಬಾರಿಗೆ ಕಟ್ಟಿಸಿದ್ದೇವೆ. ಅಮೇಲೆ ಕೆಲವು ಹಾಸ್ಟಲ್ ಕಟ್ಟಡಗಳನ್ನು ಮತ್ತು ಬ್ಲಾಕ್‌ಬೋರ್ಡ್ ಶಾಲೆಗಳನ್ನೂ ಕಟ್ಟಿದ್ದಾರೆ. ತಾವು ಯಾವಾಗಲಾದರೂ ಮಲೆನಾಡಿನ ಭಾಗದ ಕ್ಷೇತ್ರಗಳಿಗೆ ಬಂದಾಗ ಈ ಕಟ್ಟಡಗಳನ್ನು ಪರಿಶೀಲನೆ ಮಾಡಬೇಕು. ಇವುಗಳನ್ನು ಯಾವರೀತಿ ಕಟ್ಟಿದ್ದಾರೆ, ಮತ್ತೆ ಜಿಲ್ಲಾ ಪರಿಷತ್ ಇಂಜಿನಿಯರುಗಳು ಯಾವರೀತಿ ಕಟ್ಟಿದ್ದಾರೆ ಮತ್ತು ಲ್ಯಾಂಡ್ ಆರ್ಮಿಯವರು ಯಾವ ರೀತಿ ಕಟ್ಟಿದ್ದಾರೆ ಎನ್ನುವುದನ್ನು ವಿಚಾರ ಮಾಡಿದರೆ ಗೊತ್ತಾಗುತ್ತದೆ. ಖಂಡಿತವಾಗಿಯೂ ನೀವು ಇದನ್ನು ಸಹಿಸುವುದಿಲ್ಲವೆಂದು ನಾನು ಅಂದು ಕೊಂಡಿದ್ದೇನೆ. ತಾವು ಇದನ್ನು ತನಿಖೆ ಮಾಡಬೇಕಾಗುತ್ತದೆ. ಆಮೇಲೆ ಮೂರನೇ ವಿಷಯ ಎಂದರೆ, ವಿಶೇಷ ಘಟಕ. ಕ್ಷಮಿಸಿ, ಮರೆತಿದ್ದೆ. ಆರೋಗ್ಯ ಇಲಾಖೆಯ ಕಟ್ಟಡಗಳೂ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿಯೇ ಬರುತ್ತವೆ. ಈ ಆರೋಗ್ಯ ಇಲಾಖೆಗೆ ಕೇಳಿರುವುದು ಸುಮಾರು 75 ಲಕ್ಷ ಆದರೆ, ಇದಕ್ಕೆ ಜಿಲ್ಲಾ ಪರಿಷತ್ತಿನವರು ಒದಗಿಸಿರುವುದು ಕೇವಲ 56 ಲಕ್ಷ. ನಮ್ಮಲ್ಲಿರತಕ್ಕ ಆರೋಗ್ಯ ಇಲಾಖೆಯ ಕಟ್ಟಡಗಳನ್ನು ನೋಡಿದರೆ, ಒಂದು ರೀತಿಯಲ್ಲಿ ಅಲ್ಲಿ ಡಾಕ್ಟರುಗಳು ಬರದೇ ಇರುವುದೇ ಸರಿಯೇನೋ ಎಂದೆನಿಸುತ್ತದೆ. ಏಕೆಂದರೆ, ಯಾವ ಹೊತ್ತಿನಲ್ಲಿ ಆ ಕಟ್ಟಡಗಳು ಬಿದ್ದು ಹೋಗುತ್ತವೆಯೋ. ಮೊನ್ನೆ ಬಂದ ಡಾಕ್ಟರುಗಳು ಊರಿನ ಪರಿಸ್ಥಿತಿ ನೋಡಿ, ವಾಪಸ್ ಬಂದಿದ್ದಾರೆಂದು

ಹೇಳುತ್ತಿದ್ದಾರೆ, ಅಷ್ಟು ಕೆಳಮಟ್ಟದಲ್ಲಿವೆ. ನಾನು ಮೊನ್ನೆ ಜಾವಳಿ ಆಸ್ಪತ್ರೆ ಒಟ್ಟಡದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೆ. ಆ ಆಸ್ಪತ್ರೆ ಕಟ್ಟಡ ಕುಸಿಯುವ ಸ್ಥಿತಿಯಲ್ಲಿದೆ. ಅಲ್ಲಿನ ಆಸ್ಪತ್ರೆಯಲ್ಲಿ ಸರಿಯಾದ ಔಷಧಿಗಳು ಇಲ್ಲ. ಪಿ.ಹೆಚ್.ಸಿ ಇದ್ದುದು ಅಪ್‌ಗ್ರೇಡ್ ಆಗಿದೆ. ರೋಗಿಗಳು ಅಡ್ಮಿಟ್ ಆದರೆ, ಮಲಗುವುದಕ್ಕೆ ಹಾಸಿಗೆ ಇಲ್ಲ ಅಷ್ಟು ಕಳಪೆ ಮಟ್ಟದಲ್ಲಿದೆ. ಇದಕ್ಕೆ ಕಾರಣವೆಂದರೆ, ಜಿಲ್ಲಾ ಪರಿಷತ್, ಆರೋಗ್ಯ ಇಲಾಖೆಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಇವತ್ತು ಜನರಿಗೆ ನಾವು ಏನು ಹೇಳಬೇಕೆಂದರೆ, ರಿಪೇರಿ ಮಾಡಿಸುವುದಕ್ಕಾಗುವುದಿಲ್ಲ, ಅಷ್ಟು ಹಣ ಜಿಲ್ಲಾ ಪರಿಷತ್ತಿನಿಂದ ಬಂದಿದೆ. ಆರೋಗ್ಯ ಇಲಾಖೆಯ ಹೆಡ್‌ನಲ್ಲಿ ಬಂದಿರತಕ್ಕ ಹಣದಲ್ಲಿ ಕೊಡಿಸುವುದಕ್ಕಷ್ಟೇ ಸಾಕಾಗುತ್ತದೆಯೇ ವಿನಹ ಆಸ್ಪತ್ರೆ ರಿಪೇರಿ ಮಾಡಿಸುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳಬೇಕಾಗುತ್ತದೆ. ಆದ್ದರಿಂದ, ರಸ್ತೆ, ಕುಡಿಯುವ ನೀರು, ಮತ್ತು ಆರೋಗ್ಯ ಇಲಾಖೆಯ ಕೆಲಸಗಳಾದ ಆಸ್ಪತ್ರೆ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ಖರ್ಚು ಮಾಡದಿದ್ದರೆ, ಗ್ರಾಮಾಭಿವೃದ್ಧಿ ಇಲಾಖೆ ಇದ್ದರೂ ಪ್ರಯೋಜನವಿಲ್ಲ. ಮತ್ತು ಗ್ರಾಮಾಭಿವೃದ್ಧಿ ಆಗುವುದಕ್ಕೂ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಗ್ರಾಮಾಭಿವೃದ್ಧಿಗೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟನ್ನು ಈ ಇಲಾಖೆಗೆ ಹೇಳುವುದರ ಜೊತೆಗೆ, 18 ಪರ್ಸೆಂಟ್ ಹಣವನ್ನು ಯಾವುದೇ ಜಿಲ್ಲಾ ಪರಿಷತ್ತಿನಲ್ಲಿ, ಮಂಡಲ್ ಪಂಚಾಯ್ತಿಯಲ್ಲಿ ಖರ್ಚು ಮಾಡಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಇದನ್ನು ವಿಚಾರ ಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಸಮಿತಿಯವರು ಬೇರೆ ಬೇರೆ ಜಿಲ್ಲಾ ಪರಿಷತ್ತುಗಳನ್ನು ನೋಡಿದ್ದೇವೆ. ರಾಯಚೂರು, ಮೈಸೂರು, ಕೊಡಗು ಹಾಗೂ ಬೇರೆ ಬೇರೆ ಜಿಲ್ಲಾ ಪರಿಷತ್ತುಗಳಿಗೆ ಭೇಟಿ ಮಾಡಿದ್ದೇವೆ. 18 ಪರ್ಸೆಂಟ್ ಹಣ ಯಾವ ಯಾವ ಹೆಡ್‌ನಲ್ಲಿ ಎಷ್ಟೆಷ್ಟಿತ್ತು, ಯಾವ ಯಾವ ಬಾಬಿಗೆ ಖರ್ಚುಮಾಡಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿದ್ದೇವೆ. ನಿಜ ಹೇಳಬೇಕೆಂದರೆ, ನನಗೆ ಬಹಳ ಬೇಸರವಾಯಿತು. ಕೆಲವಾರು ಜಿಲ್ಲೆಗಳಲ್ಲಿ ಇದನ್ನು ಸರಿಯಾಗಿ ಖರ್ಚು ಮಾಡಿಲ್ಲ. ರಾಯಚೂರಿಗೆ ಕುಡಿಯುವ ನೀರಿಗೆ ಕೊಟ್ಟ ಹಣ ಖರ್ಚು ಮಾಡಿಲ್ಲ, ರಸ್ತೆಗೆ ಕೊಟ್ಟ ಹಣ ಖರ್ಚು ಮಾಡಿಲ್ಲ. 1991-92 ರಲ್ಲಿ ಸುಮಾರು ಒಂದು ಕೋಟಿ, ಅರವತ್ತು ಲಕ್ಷ ಖರ್ಚು ಮಾಡಿಲ್ಲ. ಹಾಗೆಯೇ 1990-91 ರಲ್ಲಿಯೂ ಸಹ ಖರ್ಚು ಮಾಡಿಲ್ಲ. ಮೈಸೂರಿಗೆ ಬಂದರೆ, ಮೈಸೂರಿನಲ್ಲಿಯೂ ಅಷ್ಟೆ. ಈ ಸಂದರ್ಭದಲ್ಲಿ ಹೇಳುವುದೇನೆಂದರೆ ನೀವು ಸರಿಯಾಗಿ ಈ 18 ಪರ್ಸೆಂಟ್ ಹಣವನ್ನು ಇಂತಹ ಕಾರ್ಯಕ್ರಮಗಳಿಗೇ ಖರ್ಚು ಮಾಡಬೇಕೆಂದು ಖಚಿತವಾಗಿ ನಿರ್ದೇಶನ ಕೊಡಬೇಕಾಗುತ್ತದೆ. ಮೈಸೂರಿನಲ್ಲಿ ಈ 18 ಪರ್ಸೆಂಟ್ ಹಣವನ್ನು ವಿಶೇಷವಾಗಿ ಖರ್ಚು ಮಾಡಿರತಕ್ಕ ಘಟನೆ ನನ್ನ ಗಮನಕ್ಕೆ ಬಂತು. ಮೈಸೂರು ಕಾರ್ಪೊರೇಷನ್‌ನವರು, ಈ 18 ಪರ್ಸೆಂಟ್ ಹಣದಲ್ಲಿ, ಮೈಸೂರಿನಲ್ಲಿ ವಿಶೇಷವಾದ ಈ ಒಂದು 18 ಪರ್ಸೆಂಟ್ ಹಣ ಖರ್ಚು ಮಾಡಿರುವ ವಿಧಾನ ಒಂದು ಘಟನೆ ನಮ್ಮ ಗಮನಕ್ಕೆ ಬಂತು. ಅದೇನೆಂದರೆ ಮೈಸೂರು ಕಾರ್ಪೊರೇಷನ್‌ನವರು ಸುಮಾರು 18 ಪರ್ಸೆಂಟ್ ಹಣದಲ್ಲಿ ಬರಿಯಲ್ ಗ್ರೌಂಡ್ ರಿಪೇರಿಗೆ ಖರ್ಚು ಮಾಡಿದ್ದಾರೆ. ಪ್ರತಿ ವರ್ಷ ಒಂದು ಲಕ್ಷದ 50 ಸಾವಿರ. ನಿಜವಾಗಿ ಜೀವಂತವಾಗಿರುವ ಜನರಿಗೆ ನಾವು ಕುಡಿಯುವ ನೀರು ರಸ್ತೆ ಒದಗಿಸಲು ಆಗಿಲ್ಲ. ಆದರೆ ಬರಿಯಲ್ ಗ್ರೌಂಡ್ ರಿಪೇರಿಗೆ ಪ್ರತಿವರ್ಷ ಏಕೆ ಒಂದು ಲಕ್ಷ 50 ಸಾವಿರ ಖರ್ಚು ಮಾಡಲಿಕ್ಕೆ ಹೋದರು ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿತ್ತು. ಆದರೆ ಸರಿಯಾಗಿ 18 ಪರ್ಸೆಂಟ್ ಹಣ ಖರ್ಚುಮಾಡುವ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು ಮತ್ತು ಯಾವ ಇಲಾಖೆಯವರು ಖರ್ಚು ಮಾಡುವುದಿಲ್ಲ ಯಾವ ಸಂಬಂಧಪಟ್ಟ ಅಧಿಕಾರಿ ಖರ್ಚು ಮಾಡುವುದಿಲ್ಲ ಅವರಿಗೂ ಸಹ ನೀವು ಪ್ರಿವೆಂಷನ್ ಆಫ್ ಅಟ್ರಾಸಿಟಿ ಆಕ್ಟ್ ಬರುತ್ತಲ್ಲಾ ಹಾಗೆ ಇದೂ ಒಂದು ರೀತಿ ದೌರ್ಜನ್ಯ ಮತ್ತೆ ಇದು ಹಗಲು ದರೋಡೆ. ಈ ಜನರಿಗೆ ಖರ್ಚು ಮಾಡುವ ಹಣವನ್ನು ಸರಿಯಾಗಿ ಖರ್ಚು ಮಾಡದೇ ಬೇರೆ ಕಡೆ ಖರ್ಚು ಮಾಡುತ್ತಾರೆಂದರೆ ಇವರನ್ನು ಪನಿಶ್ ಮಾಡದಿದ್ದರೆ ಯಾವತ್ತೂ ಹೀಗೆ ಆಗುತ್ತದೆ, ಬೇರೆ ಜನರು ನಮ್ಮ ಮೇಲೆ ಬೇಜಾರು ಪಟ್ಟುಕೊಳ್ಳುತ್ತಾರೆ ಏನು ಇವರಿಗೆ ಇಷ್ಟೊಂದು ಸೌಲತ್ತು ಮತ್ತೆ ಸೌಕರ್ಯಗಳನ್ನು ಕೊಟ್ಟರೂ ಸಹ ಈ ಜನ ಮಾತನಾಡುತ್ತಲೇ ಇರುತ್ತಾರೆ ಅದು ಆಗಿಲ್ಲ ಇದು ಆಗಿಲ್ಲ ಅಂತ

ಹೇಳಿ ಅದು ಎಷ್ಟು ದಿವಸ ನಾವು ಹೀಗೆ ಗೋಗರೆಯಲು ಆಗುತ್ತೇ ಮತ್ತು ಭಿಕ್ಷಾಟನೆ ಮಾಡಲು ಆಗುತ್ತೆ ಇದು ಆಗಬಾರದು ಇದು ಯಾವತ್ತಾದರೂ ಕೊನೆಗೊಳ್ಳಬೇಕು ಅದಕ್ಕೆ ಸರಿಯಾದ ರೀತಿ ವ್ಯವಸ್ಥಿತವಾಗಿ ಈ ಜನರಿಗೆ ಕೊಟ್ಟ ಸೌಲಭ್ಯ ಮತ್ತು ಸೌಲತ್ತು ಎಲ್ಲಾ ಇಲಾಖೆಯಲ್ಲೂ ತಲಪುವಂತೆ ಜಿಲ್ಲಾ ಪರಿಷತ್ತಿನವರು ಸಹ ವಿಚಾರ ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಮತ್ತೆ ಕೆಲವೊಂದು ವಿಚಾರಗಳನ್ನು ಈ ಅಬಕಾರಿ ಇಲಾಖೆ ಮತ್ತು ಅರಣ್ಯ ಇಲಾಖೆ ಬಗ್ಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅರಣ್ಯ ಇಲಾಖೆ ಬಗ್ಗೆ ಮುಖ್ಯವಾಗಿ ಹೇಳಬೇಕೆಂದರೆ ಇವತ್ತು ನಮ್ಮಲ್ಲಿ ಬಹಳಷ್ಟು ಅರಣ್ಯ ಇದೆ. ಅರಣ್ಯ ಸಂಪತ್ತು ಇದ್ದರೂ ಸಹ ಅರಣ್ಯ ಸಂಪತ್ತು ಕೊಳ್ಳೆ ಹೊಡೆಯುವುದಂತೂ ನಿಂತಿಲ್ಲ. ಇದನ್ನು ನಿಲ್ಲಿಸಬೇಕು ಅಂತ ಹೇಳಿ ನಾವುಗಳು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೆ ಹಾಡು ಹಗಲೇ ಗಂಧ ಹೋಗುತ್ತದೆ, ಬೇರೆ ಬೇರೆ ಮರಗಳು ಕಳ್ಳಸಾಗಾಣಿಕೆ ಆಗುತ್ತದೆ. ಇದನ್ನು ತಡೆಗಟ್ಟಲಿಕ್ಕೆ ಏನು ಪ್ರಯತ್ನ ನಡೆದಿದೆ ಎನ್ನುವುದು ಮುಖ್ಯ. ಆದರೆ ಸ್ಕ್ವಾಡ್ ಮಾಡಿದ್ದೇವೆಂದು ಹೇಳುತ್ತಾರೆ. ಚಕ್ಕಿಂಗ್ ಗೇಟು ಇದೆ ಎಂದು ಹೇಳುತ್ತಾರೆ. ಆದರೂ ಸಹ ಒಂದೊಂದು ಸಾರಿ ಈ ಸ್ಕ್ವಾಡ್‌ನವರಿಗೂ ಮತ್ತು ಜನರಲ್ ಅರಣ್ಯ ಇಲಾಖೆಯವರು ನೋಡಿಕೊಳ್ಳುತ್ತಾರಲ್ಲ. ರೆಗ್ಯುಲರ್ ಫಾರೆಸ್ಟ್ ಇಲಾಖೆಯವರಿಗೂ ಅಂಡರ್‌ಸ್ಟ್ಯಾಂಡಿಂಗ್ ಇಲ್ಲ ಆಮೇಲೆ ವೈಲ್ಡ್ ಲೈಫ್‌ನವರಿಗೂ ರೆಗ್ಯುಲರ್ ಫಾರೆಸ್ಟ್ ನೋಡಿಕೊಳ್ಳುವವರಿಗೂ ಡಿಎಫ್‌ಓ ಅಥವಾ ಆರ್.ಎಫ್.ಓ.ಎ.ಸಿ.ಎಫ್.ಗಳಿಗೆ ಹೊಂದಾಣಿಕೆ ಇಲ್ಲ ಇದನ್ನು ಸರಿ ಮಾಡಬೇಕಾಗುತ್ತೇ ಇದು ಸರಿ ಮಾಡದಿದ್ದರೆ ಕಳ್ಳಸಾಗಾಣಿಕೆ ಇನ್ನೂ ಜಾಸ್ತಿ ಆಗುತ್ತೇ. ಇನ್ ಡೈರೆಕ್ಟ್ ಆಗಿ ಒಬ್ಬರಿಗೊಬ್ಬರಿಗೆ ಕುಮ್ಮಕು ಕೊಡಲಿಕ್ಕೆ ತಯಾರಾಗುತ್ತದೆ ಆಮೇಲೆ ಇನ್ನೊಂದು ಹೊಸದಾಗಿ ಇಂಟರ್‌ಡ್ಯೂಸ್ ಮಾಡಿದ್ದಾರೆಂದು ನಾನು ಕೇಳಿದೆ ದನಕರುಗಳು ಅಲ್ಲಿ ಏನಾದರೂ ಮೇದರೆ ಅರಣ್ಯಕ್ಕೆ ಸಂಬಂಧಪಟ್ಟ ಜಾಗದಲ್ಲಿ ಅವರನ್ನು ರೈತರಿಂದ ಶುಲ್ಕವಸೂಲಿ ಮಾಡಬೇಕು ಅಂತ ಹೇಳಿ ಇದು ಎಷ್ಟರಮಟ್ಟಿಗೆ ಸಾಧ್ಯ. ನಿಜವಾಗಲೂ ನಾವು ದನ ಮೇಯಿಸಿ ಅದಕ್ಕೆ ನಾವು ಶುಲ್ಕ ಕೊಡಿ ಅಂತ ರೈತರಿಗೆ ಹೇಳಿದರೆ ಕೊಡಲಿಕ್ಕೆ ಸಾಧ್ಯವೇ? ರೈತರು ಮೊದಲೇ ಕಷ್ಟದಲ್ಲಿರುವಾಗ ಅರಣ್ಯ ಇಲಾಖೆ ಜಾಗದಲ್ಲಿ ದನ ಮೇದರೆ ಅವರಿಗೆ ಫೈನ್ ಹಾಕಿ ಫೀಜು ವಸೂಲಿ ಮಾಡಿದರೆ ಇದು ಆಗಲಾರದ ಕೆಲಸ ಈಗ ಎಲ್ಲಾ ರೆವಿನ್ಯೂ ಜಾಗ ಅಂದ್ರೆ ರೆವಿನ್ಯೂ ಲ್ಯಾಂಡ್ ಎಲ್ಲಾ ಈಗಾಗಲೇ ಕಲ್ಟಿವೇಶನ್ ಆಗಿದೆ ಇನ್ನು ಉಳಿದಿರುವುದು ಸಿ ಅಂಡ್ ಡಿ ಲ್ಯಾಂಡ್ ಅಷ್ಟೇ. ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ದನ ಮೇಯಿಸಲು ಬಿಟ್ಟರೆ ರಿಜರ್ವ್ ಫಾರೆಸ್ಟ್‌ಗೆ ಜನ ಯಾರೂ ಹೋಗುವುದಿಲ್ಲ. ಸಿ ಅಂಡ್ ಡಿ ಲ್ಯಾಂಡಿನಲ್ಲಿ ಯಾವುದು ನೋಟಿಫಿಕೇಶನ್ ಆಗಿದೆ ಆ ಲ್ಯಾಂಡ್ ಮಾತ್ರ ಫಾರೆಸ್ಟ್ ಇಲಾಖೆಗೆ ಹೋಗುತ್ತದೆ ನೋಟಿಫಿಕೇಶನ್ ಆಗದಿದ್ದು ಸುಮಾರ 50 ಎಕರೆ ಈ ಇಲಾಖೆಗೆ ವಾಪಸ್ ಬರುತ್ತದೆಂದು ಹೇಳಿದರು ಅದು ಇನ್ನೂ ನಮ್ಮ ಕೈಗೆ ಬಂದಿಲ್ಲ ಆದ್ದರಿಂದ ಈ ರಿಸ್ಟ್ರಿಕ್ಷನ್ ಹಾಕುವುದು ತಪ್ಪು ಎನ್ನುವ ಮಾತನ್ನು ನಾನು ಹೇಳುತ್ತೇನೆ, ಇದರ ಜೊತೆಗೆ ಬಹಳ ಮುಖ್ಯವಾಗಿ ನಾನು ಹೇಳುವುದು ಈ ಇಲಾಖೆಯಲ್ಲಿ ಸ್ಮಗಲ್ ಮಾಡುತ್ತಿದ್ದಾಗ ವಾಹನ ಸಮೇತ ಮಾಲನ್ನು ಹಿಡಿದರೆ ಆ ವಾಹನಗಳು ಏನು ಇರುತ್ತವೆ ಕಾರು ಆಗಿರಬಹುದು ಮೆಟಡಾರ್ ಆಗಿರಬಹುದು ಸೀಜ್ ಮಾಡಿಕೊಳ್ಳುತ್ತಾರೆ ಮತ್ತೆ ಅದನ್ನು ಇಲಾಖೆಯವರೇ ಇಟ್ಟುಕೊಳ್ಳುತ್ತಾರೆ. ತಕ್ಷಣ ಆ ವಾಹನಗಳನ್ನು ಹರಾಜು ಹಾಕಿದರೆ ಇಲಾಖೆ ಸ್ವಲ್ಪ ಆದಾಯ ಬರಬಹುದು. ಹರಾಜು ಹಾಕುವುದು ಎರಡು ವರ್ಷ ಆಗಬಹುದು ಮೂರು ವರ್ಷ ಆಗಬಹುದು ಇಲಾಖೆಯವರೆ ಅಷ್ಟು ಹೊತ್ತಿಗೆ ಟೈರು ಬಿಚ್ಚಿಕೊಂಡು ಹೋಗಿರುತ್ತಾರೆ ಏನೇನೂ ಇರುತ್ತದೆಯಲ್ಲಾ ಏಕೆಂದರೆ ನಾನು ವಾಹನ ಇಟ್ಟಿಲ್ಲ ಅದರ ಪಾರ್ಟ್ಸ್ ಸರಿಯಾಗಿ ನನಗೆ ಗೊತ್ತಿಲ್ಲ. ಎಂಜಿನ್ ಬಿಚ್ಚಿಕೊಂಡು ಹೋಗಿ ಮಾರಿರುತ್ತಾರೆ. ಇದು ಆಗಬಾರದು ಯಾವುದೇ ಒಂದು ಜಿಲ್ಲೆಯಲ್ಲಿ ಈ ಒಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಈ ವಾಹನಗಳನ್ನು ನೀವು ಮುಟ್ಟುಗೋಲು ಹಾಕಿಕೊಂಡರೆ ಒಳಗಾಗಿ 6 ತಿಂಗಳಲ್ಲಿ ಆ ವಾಹನಗಳನ್ನು ಡಿಸ್‌ಪೋಜ್ ಮಾಡಿದರೆ ಹರಾಜಿನಲ್ಲಿ ಒಳ್ಳೆಯ ಹಣ ನಮ್ಮ ಸರ್ಕಾರಕ್ಕೆ ಬರುತ್ತದೆ. ಆ ಕೆಲಸವನ್ನು ತಾವು ಮಾಡಬೇಕು. ಇನ್ನೊಂದು ಬಹಳ ಮುಖ್ಯವಾದುದೇನೆಂದರೆ, ಚಕ್ಕೆ ತೆಗೆಯುವುದು. ಚಕ್ಕೆ ಎಂದರೆ ಮಾನ್ಯ ಸದಸ್ಯರುಗಳಿಗೆ

ಅರ್ಥವಾಗುವುದಿಲ್ಲ. ಏಕೆಂದರೆ ಕೆಲವು 'ಎಲಗನ' ಚಕ್ಕೆ ಎಂದು ಇದೆ. ಈ ಚಕ್ಕೆಯನ್ನು ಮರದಿಂದ ತೆಗೆದು ಮಾರುತ್ತಾರೆ. ಟನ್‌ಗಟ್ಟಲೆ ಇದು ಮಾರಾಟವಾಗುತ್ತದೆ. ಈ ಚಕ್ಕೆ ತೆಗೆಯುವುದಕ್ಕೆ ಇಲಾಖೆಯವರು ಪರ್ಮಿಟ್ ಕೊಟ್ಟರೆ ಒಳ್ಳೆಯದು. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದಕ್ಕೆ ಪರ್ಮಿಟ್ ಕೊಡುತ್ತಿಲ್ಲ. ಪರ್ಮಿಟ್ ಕೊಡದೇ ಇರುವುದರಿಂದ ಕಳ್ಳಸಾಗಾಣಿಕೆಯಲ್ಲಿ ಇದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಈ ಚಕ್ಕೆ ತೆಗೆಯುವುದಕ್ಕೆ ಪರ್ಮಿಟ್ ಕೊಟ್ಟು ಇಷ್ಟು ಲಿಮಿಟ್ ಒಳಗೆ ಇಷ್ಟು ವಯಸ್ಸು ಆಗಿರುವ ಮರಗಳಲ್ಲಿ ಮಾತ್ರ ಚಕ್ಕೆ ತೆಗೆಯಬೇಕೆಂದು ನಿಯಮ ಮಾಡಿ. ಆಗ ಕಳ್ಳಸಾಗಾಣಿಕೆ ಆಗುವುದು ತಪ್ಪುತ್ತದೆ. ಈ ಚಕ್ಕೆಯನ್ನು ಪುಡಿ ಮಾಡಿ ಗಂಧದ ಕಡ್ಡಿಗಳನ್ನು ಮಾಡುವುದಕ್ಕೆ ಉಪಯೋಗ ಮಾಡುತ್ತಾರೆ. ಇದಕ್ಕೆ ರಿಸ್ಟ್ರಿಕ್ಷನ್ ಹಾಕಿರುವುದರಿಂದ ಕಳ್ಳಸಾಗಾಣಿಕೆ ಜಾಸ್ತಿಯಾಗುತ್ತಿದೆ. ಇನ್ನೊಂದು ವಿಷಯವೇನೆಂದರೆ, ನಮ್ಮ ಕರ್ನಾಟಕವನ್ನು 'ಅಂದದ ನಾಡು ಗಂಧದ ಬೀಡು' ಎಂದು ಬಹಳ ಹಾಡಿ ಹೊಗಳುತ್ತೇವೆ. ಗಂಧ ನಮ್ಮಲ್ಲಿ ಬಹಳ ಇದೆ. ಆದರೆ ಅದೆಲ್ಲಾ ಕಳ್ಳಸಾಗಾಣಿಕೆಯಲ್ಲಿ ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ನಮ್ಮ ರಾಜ್ಯದ ಸ್ಯಾಂಡಲ್ ವುಡ್ ಫ್ಯಾಕ್ಟರಿಗೆ ಸ್ಯಾಂಡಲ್ ವುಡ್ ಸಿಗದೆ ಬಾಗಿಲು ಮುಚ್ಚಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಗಂಧ ಕೇರಳ ರಾಜ್ಯಕ್ಕೆ ಹೋಗಿ ಅಲ್ಲಿ ದೊಡ್ಡ ಫ್ಯಾಕ್ಟರಿಗಳನ್ನು ಮಾಡಿದ್ದಾರೆ. ಇದರಿಂದ ಅವರಿಗೆ ಸಾಕಷ್ಟು ಲಾಭ ಬರುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಗಂಧ ಸಾಕಷ್ಟು ಬೆಳೆದರೂ ಸ್ಯಾಂಡಲ್ ವುಡ್ ಫ್ಯಾಕ್ಟರಿಗೆ ಸಪ್ಲೈ ಆಗದೆ ಫ್ಯಾಕ್ಟರಿಯ ಬಾಗಿಲನ್ನು ಮುಚ್ಚಲಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಸರಿ ಮಾಡಬೇಕಾಗುತ್ತದೆ. ಸರಿಯಾದ ಸಮಯಕ್ಕೆ ಗಂಧವನ್ನು ಕತ್ತರಿಸಿ ಸ್ಯಾಂಡಲ್ ವುಡ್ ಫ್ಯಾಕ್ಟರಿಗೆ ಕೊಡುತ್ತಿಲ್ಲ, ಅದನ್ನು ಸರಿಯಾಗಿ ಮಾಡಿದರೆ ಕಳ್ಳಸಾಗಾಣಿಕೆ ಜಾಸ್ತಿಯಾಗುವುದಿಲ್ಲ. ಇದನ್ನು ತಪ್ಪಿಸಲಿಕ್ಕೆ ಸಾಧ್ಯವಿದೆ. ನಮ್ಮಲ್ಲಿ ಇನ್ನೊಂದು ಅನಾಹುತವೆಂದರೆ ನಮ್ಮ ಜಿಲ್ಲೆಯಲ್ಲಿ ಮರಗಳನ್ನು ಸಾಗಿಸಲು ಮಳೆಗಾಲದಲ್ಲಿ ಪರ್ಮಿಟ್ ಕೊಡುತ್ತಿದ್ದಾರೆ. ಮಳೆಗಾಲದಲ್ಲಿ ಪರ್ಮಿಟ್ ಕೊಡುವುದರಿಂದ ಟನ್‌ಗಟ್ಟಲೆ ಮರಗಳನ್ನು ಲಾರಿಗಳಲ್ಲಿ ಹಾಕಿಕೊಂಡು ಹೋಗುವಾಗ ರಸ್ತೆಗಳೆಲ್ಲಾ ಕಿತ್ತುಹೋಗುತ್ತಿವೆ, ಹಾಕಿರುವ ಟಾರ್ ಎಲ್ಲಾ ಕಿತ್ತುಕೊಂಡು ಹೋಗುತ್ತದೆ. ಈ ಬಗ್ಗೆ ಹಿಂದಿನ ಅರಣ್ಯ ಮಂತ್ರಿಗಳು ಮತ್ತು ಪಿ.ಡಬ್ಲ್ಯೂ.ಡಿ. ಮಂತ್ರಿಯವರೊಡನೆ ಮಾತನಾಡಿದ್ದೇನೆ. ಮಳೆಗಾಲದಲ್ಲಿ ಮರಗಳನ್ನು ಸಾಗಿಸುವುದಕ್ಕೆ ರಿಸ್ಟ್ರಿಕ್ಷನ್ ಹಾಕಿ. ಬೇಸಿಗೆ ಕಾಲದಲ್ಲಿ ಮಾತ್ರ ಮರಗಳನ್ನು ಸಾಗಿಸುವ ಹಾಗೆ ಪರ್ಮಿಟ್ ಕೊಟ್ಟರೆ ನಮ್ಮ ಕಡೆಯ ರಸ್ತೆಗಳು ಹಾಳಾಗುವುದಿಲ್ಲ. ಇದಕ್ಕೆ ಏನಾದರೂ ಮಾಡಿ ಕಡಿವಾಣ ಹಾಕಲೇಬೇಕಾಗುತ್ತದೆ. ಇಲ್ಲವೆಂದರೆ, ಟಿಂಬರನ್ನು ತೆಗೆದುಕೊಂಡು ಹೋಗುವ ಲಾರಿ ಮಾಲೀಕರುಗಳಿಂದ ರಸ್ತೆಗಳು ಡ್ಯಾಮೇಜ್ ಆಗಿರುವುದನ್ನು ಸರಿ ಮಾಡುವ ಬಗ್ಗೆ ತಗಲುವ ವೆಚ್ಚವನ್ನು ವಸೂಲಿ ಮಾಡಿಕೊಳ್ಳಿ. ಆಗ ಮಾತ್ರ ರಸ್ತೆಗಳು ಸರಿಯಾಗುವುದಕ್ಕೆ ಸಾಧ್ಯ. ಆಮೇಲೆ 'ಭದ್ರ ಅಭಯಾರಣ್ಯ' ವೈಲ್ಡ್ ಲೈಫ್ ಸಾಂಕ್ಚುರಿ ಎಂದು ಮಾಡಿ ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಹಣ ಕೊಡಬೇಕೆಂದು ಯೋಜನೆ ಮಾಡಲಾಗಿತ್ತು. ಆದರೆ ಇದುವರೆಗೆ ಸಿಂಗಲ್ ಎನ್.ಪಿ. ಕೂಡಾ ಇದರ ಬಗ್ಗೆ ಬಂದಿಲ್ಲ. ಅಲ್ಲಿರುವ ಜನರನ್ನು ಬೇರೆ ಕಡೆ ಶಿಫ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಶಿಫ್ಟ್ ಮಾಡುವಾಗ ಅಲ್ಲಿರುವ ಜನರು ಏನು ಆಸ್ತಿಪಾಸ್ತಿ ಕಳೆದುಕೊಳ್ಳುತ್ತಾರೋ ಅದಕ್ಕೆ ಹಣ ಕೊಡಬೇಕಾಗುತ್ತದೆ, ಅವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ, ಸುಮಾರು ಐದಾರು ವರ್ಷಗಳಿಂದ ಭದ್ರ ಅಭಯಾರಣ್ಯದ ಸ್ಥಳಾಂತರದ ಕಾರ್ಯ ನಡೆಯಲೇ ಇಲ್ಲ. ಇದಕ್ಕೆ 12 ಕೋಟಿ ಕೇಳಿದ್ದಕ್ಕೆ 2 ಕೋಟಿ ಕೊಟ್ಟಿದ್ದಾರೆ. ಇದರಿಂದ ಏನು ಪ್ರಯೋಜನ? ಇದನ್ನು ಸರಿ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಬಕಾರಿ ಬಗ್ಗೆ, ಜಾಸ್ತಿ ಸಾರಾಯಿ ಅಂಗಡಿಗಳನ್ನು ತೆಗೆಯಿರಿ, ವೈನ್ ಶಾಪ್‌ಗಳನ್ನು ತೆಗೆಯಿರಿ ಅಥವಾ ಡಿಸ್ಟಿಲರಿ ಫ್ಯಾಕ್ಟರಿಗೆ ಲೈಸನ್ಸ್ ಕೊಡಿ, ಅವರಿಗೆ ಕೊಟ್ಟರೆ ಒಳ್ಳೆಯದು, ಇವರಿಗೆ ಕೊಟ್ಟರೆ ಒಳ್ಳೆಯದೆಂದು ನಾನು ಮಾತನಾಡುವುದಿಲ್ಲ. ಇವತ್ತು ನಾನು ಹೇಳುತ್ತೇನೆ, ಪಾನ ನಿರೋಧ ಜಾರಿಗೆ ತನ್ನಿ. ನೀವು ಪಾನ ನಿರೋಧವನ್ನು ಜಾರಿಗೆ ತರದಿದ್ದರೆ ಹೆಂಗಸರೇ ಈ ರಾಜ್ಯದಲ್ಲಿ ಚಳುವಳಿ ಮಾಡಬೇಕಾಗುತ್ತದೆ. ಚಳುವಳಿ ಹುಟ್ಟನ್ನು ನಮ್ಮ ಜಿಲ್ಲೆಯಲ್ಲೇ ನಾವು ಹಾಕುತ್ತೇವೆ. ಏಕೆಂದರೆ ಇವತ್ತು ತುಂಬಾ ಕುಟುಂಬಗಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಿವೆ. ಗಂಡ ಕುಡಿದು ಬಂದು ಹೊಡೆಯುವುದು,

ಸಂಸಾರ ಸರಿಯಾಗಿ ನೋಡಿಕೊಳ್ಳದೆ ಇರುವುದು, ಇದರ ಜೊತೆಗೆ ಅವನು ಕುಡಿದು ಲಿವರ್ ಡ್ಯಾಮೇಜ್ ಆದರೆ ಅವನ ಹೆಂಡತಿ ಕಣ್ಣೀರಿನಲ್ಲಿ ಕೈ ತೊಳೆದು ದುಡಿದು ಅವನಿಗೇ ಅನ್ನ ಹಾಕಬೇಕಾಗುತ್ತದೆ. ಇದು ಯಾವ ಪಾಪದ ಫಲ? ಏಕೆ ಹೆಣ್ಣುಮಕ್ಕಳಿಗೆ ಈ ತರಹ ಕಷ್ಟ ಬರಬೇಕು? ಇವತ್ತು ಆಂಧ್ರದಲ್ಲಿ ಹೆಣ್ಣು ಮಕ್ಕಳು ಚಳುವಳಿ ಶುರು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲೂ ಚಳುವಳಿ ಮಾಡಿದರೆ ಮಾನ್ಯ ಮನೋರಮ ಮಧ್ವರಾಜ್‌ರವರೂ ಇದರಲ್ಲಿ ಭಾಗವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎಷ್ಟು ಜನ ಸಾರಾಯಿ ಕುಡಿದು ಮನೆ ಹಾಳು ಮಾಡಿಲ್ಲ? ಎಷ್ಟು ಸಂಸಾರ ಹಾಳಾಗಿಲ್ಲ? ಎಷ್ಟು ಜನ ಹೆಣ್ಣು ಮಕ್ಕಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಿಲ್ಲ? ಮೊನ್ನೆ ನನ್ನ ಸ್ನೇಹಿತ ಒಬ್ಬನಿಗೆ ಶಿವಮೊಗ್ಗ ಆಸ್ಪತ್ರೆಯಲ್ಲಿ 9 ಸಾವಿರ ಖರ್ಚು ಮಾಡಿ ಮನೆಗೆ ಕರೆದುಕೊಂಡು ಬಂದರೆ, ಮತ್ತೆ ಒಂದು ತಿಂಗಳೊಳಗೆ ಆ ಮನುಷ್ಯ ಕುಡಿಯುವುದಕ್ಕೆ ಶುರು ಮಾಡಿದ್ದಾನೆ. ಏನಾಗಬೇಕು ಅವಳ ಪಾಡು? ಇಂಥಾ ಪರಿಸ್ಥಿತಿ ಬರಬಾರದು. ಈ ರಾಜ್ಯದಲ್ಲಿ ಸಮಗ್ರವಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದಕ್ಕೆ ಮಾನ್ಯ ಪುರುಷ ಶಾಸಕರೂ ಸಹಾ ಸಹಕಾರ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸಮತಾ ಹೆಣ್ಣು ಮಕ್ಕಳ ಜಾತಾ ಎಂದು ಏನಿದೆ? ಅದರಲ್ಲಿ ಪಾನ ನಿರೋಧವನ್ನು ಸೇರಿಸಿ ಅಂಥ ಹೇಳಿದ್ದೇನೆ. ಪ್ರತಿ ಹಳ್ಳಿಯಲ್ಲೂ ಇದರ ಬಗ್ಗೆ ಆಗುತ್ತಿರುವ ತೊಂದರೆ, ಸಂಸಾರದಲ್ಲಿ ಆಗುತ್ತಿರುವ ಕಷ್ಟದ ಬಗ್ಗೆ ಹಳ್ಳಿಗಾಡಿನ ಹೆಂಗಸರಿಗೆ ಮನದಟ್ಟು ಮಾಡಿಕೊಡಬೇಕು. ಅವರೇ ರೊಚ್ಚಿಗೆದ್ದು ಪ್ರತಿಭಟನೆಯನ್ನು ಪ್ರಾರಂಭ ಮಾಡಬೇಕು. ಕುಡಿದು ಬಂದವರಿಗೆ ಹೊಡೆಯಲಿಕ್ಕೂ ತಯಾರಿರಬೇಕೆಂಬ ವಿಚಾರವನ್ನು ಅವರಿಗೆ ಹೇಳಬೇಕಾಗುತ್ತದೆ. ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ಮಾತನ್ನು ಹೇಳುವುದಾದರೆ, ಈ ಖಾತೆಯನ್ನು ಮುಖ್ಯಮಂತ್ರಿಗಳು ಹೊತ್ತಿದ್ದಾರೆ. ಅಧಿಕಾರಿಗಳು ಎಲ್ಲರೂ ಕೆಟ್ಟವರು, ಎಲ್ಲರೂ ಒಳ್ಳೆಯವರೆಂದು ನಾನು ಹೇಳುವುದಿಲ್ಲ. ಒಂದು ಸರ್ಕಾರ ಹೋಗಬಹುದು, ಇನ್ನೊಂದು ಸರ್ಕಾರ ಬರಬಹುದು, ಒಬ್ಬರಿಗಿಂತಾ ಇನ್ನೊಬ್ಬರು ಒಳ್ಳೆ ಆಡಳಿತ ಕೊಡಬಹುದೆಂದು ಜನ ನಿರೀಕ್ಷೆ ಮಾಡುತ್ತಾರೆ. ಅದಕ್ಕಾಗಿ ನಾವು ಎಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಒಳ್ಳೆ ಆಡಳಿತವನ್ನು ಕೊಡಬೇಕಾಗುತ್ತದೆ. ಇವತ್ತು ಸಾಕಷ್ಟು ಕರೆಪ್ಟ್ ಅಧಿಕಾರಿಗಳು ಸೆಕ್ರೆಟರಿಯೇಟ್ ಮತ್ತು ವಿಧಾನಸೌಧದಲ್ಲಿ ಸೇರಿದ್ದಾರೆ. ಇದರಿಂದ ಜನರಿಗೆ ತೊಂದರೆ ಆಗುವುದಲ್ಲದೆ ಕೆಲಸಗಳು ನಿಧಾನವಾಗುತ್ತದೆಂದು ಜನಗಳು ಹೇಳುತ್ತಿದ್ದರು. ಇವತ್ತು ಒಳ್ಳೆ ಅಧಿಕಾರಿಗಳು ಬಂದಿದ್ದಾರೆ ಆದರೆ ಕೆಲಸ ನಿಧಾನವಾಗುತ್ತದೆಂದು ಹೇಳುತ್ತಾರೆ. ಹಿಂದಿನ ಸರ್ಕಾರದಲ್ಲಿ ದುಡ್ಡು ಕೊಟ್ಟರೆ ಬೇಗ ಕೆಲಸ ಆಗುತ್ತಿತ್ತು, ಇವತ್ತು ದುಡ್ಡು ತೆಗೆದುಕೊಳ್ಳುವುದಿಲ್ಲ ಕೆಲಸವೂ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ಆಗಬಾರದು. ಯಾವುದೇ ಫೈಲ್ ಆಗಲೀ ಸಿ.ಎಂ.ಯಿಂದ ಆಗಲೀ ಅಥವಾ ಯಾವುದೇ ಮಂತ್ರಿಗಳಿಂದಾಗಲೀ ಅದು ಆರ್ಡರ್ ಆಯಿತೆಂದರೆ ಅದು 15 ದಿವಸಗಳಲ್ಲಿ ಕಾರ್ಯಗತವಾಗಬೇಕು. ಅಂಡರ್ ಸಕ್ರೆಟರಿ ಡೆಪ್ಯುಟಿ ಸೆಕ್ರೆಟರಿಗಳ ಟೇಬಲ್ ಮೇಲೆ ಒಂದೊಂದು ವಾರ ಫೈಲ್ ಬಿದ್ದಿರುತ್ತದೆ. ಹೀಗಾದರೆ ಕೆಲಸ ಹೇಗೆ ಬೇಗ ಮಾಡಬಹುದೆಂದು ವಿಚಾರ ಮಾಡಬೇಕು. ಹೋದ ವರ್ಷ ನಮ್ಮ ಜಿಲ್ಲೆಯಲ್ಲಿ ಒಂದು ಹಾಸ್ಟೆಲ್ ಮಾಡುವುದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ 6 ತಿಂಗಳು ತೆಗೆದುಕೊಂಡಿತು. ಆದರೆ ಆ ಹಾಸ್ಟೆಲ್‌ಗೆ ಇನ್ನೂ ದುಡ್ಡೇ ಬಿಡುಗಡೆಯಾಗಿಲ್ಲ. ಮೂಡಿಗೆರೆ ಕಾಲೇಜ್ ಬಾಯ್ಸ್ ಹಾಸ್ಟೆಲ್‌ಗೆ ಇನ್ನೂ ದುಡ್ಡು ಬಿಡುಗಡೆಯಾಗಿಲ್ಲ. ಮಾನ್ಯ ಶಿವಣ್ಣನವರು ಬರುತ್ತಾರೆಂದು ಹೇಳಿ ಅಲ್ಲಿ ಫೌಂಡೇಷನ್ ಹಾಕುವುದಕ್ಕೆ ರೆಡಿ ಮಾಡಿದ್ದೆವು. ಅವತ್ತು ಬಿಜೆಪಿಯವರು ಬಂದ್ ಮಾಡಿದರು ಎನ್ನುವ ಕಾರಣಕ್ಕಾಗಿ ಅವರು ಚಿಕ್ಕಮಗಳೂರಿಗೆ ಬಂದು ವಾಪಸ್ಸು ಬಂದರು. ಅವರು ಆ ಕಾರ್ಯಕ್ರಮಕ್ಕೆ ಬರಲಿಲ್ಲ. ನಾನೂ ಮತ್ತು ಜಿಲ್ಲಾ ಪರಿಷತ್ ಸೆಕ್ರೆಟರಿಯವರು ಹೋಗಿ ಫೌಂಡೇಷನ್ ಹಾಕಿ ಬಂದೆವು. ಆ ಕಲ್ಲು ಹಾಗೇ ಇದೆ, ಆದರೆ ಕಟ್ಟಡದ ಕೆಲಸ ಏನೂ ಪ್ರಾರಂಭವಾಗಿಲ್ಲ. ನಾವು ನಾಚಿಕೆಪಡಬೇಕು, ಅಲ್ಲಿನ ಜನರೆಲ್ಲಾ ಹಾಸ್ಟೆಲ್ ಏಕೆ ಮಾಡಿಲ್ಲವೆಂದು ನಮ್ಮನ್ನು ಕೇಳುತ್ತಿದ್ದಾರೆ. ಮತ್ತೊಂದು ಹೊಸದಾಗಿ ಗರ್ಲ್ಸ್ ಹಾಸ್ಟೆಲ್ ಕೊಟ್ಟಿದ್ದಾರೆ. ಈ ಹಾಸ್ಟೆಲ್ ಕಟ್ಟಡಕ್ಕೆ ದುಡ್ಡು ಕೊಟ್ಟಿದ್ದಾರೆ. ಆದರೆ ಜಾಗ ಕೊಟ್ಟಿಲ್ಲ. ಮೂಡಿಗೆರೆ ಬಾಯ್ಸ್ ಹಾಸ್ಟೆಲ್ ಕಟ್ಟುವುದಕ್ಕೆ ಜಾಗ ಇದೆ, ಇದಕ್ಕೆ ಗಲಾಟೆ ಮಾಡಿದ

ಮೇಲೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಯಿತು, ಆದರೆ ಮಾರ್ಚ್ ಎಂಡ್ ಆದರೂ ಇನ್ನೂ ದುಡ್ಡು ರಿಲೀಸ್ ಆಗಿಲ್ಲವೆಂದರೆ ಏನು ಕಥೆ? ಇನ್ನೂ ಗರ್ಲ್ಸ್ ಹಾಸ್ಟೆಲ್‌ಗೆ ಜಾಗ ಕೊಟ್ಟಿಲ್ಲವಾದ್ದರಿಂದ ಆ ದುಡ್ಡನ್ನು ಬಾಯ್ಸ್ ಹಾಸ್ಟೆಲ್‌ಗೆ ಡೈವರ್ಟ್ ಮಾಡಿ, ಹಾಸ್ಟೆಲ್ ಕಟ್ಟುವುದನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೇನೆ. ಇಲ್ಲಿ ಕೂತುಕೊಂಡಿರುವ ಅಧಿಕಾರಿಗಳು ಏನು ಮಾಡುತ್ತಾರೆ? ಈಗ ಏನಾಗಿದೆ ಎಂದರೆ, ಒಳ್ಳೆಯವರು ಒಳ್ಳೆಯವರು ಎಂದು ಹೇಳಿ ಐ.ಎ.ಎಸ್. ಆಫೀಸರ್ಸ್‌ನಲ್ಲಿ ಕೆಲವರನ್ನು ನಾವು ಗ್ಲೋರಿಫೈಡ್ ಮಾಡಿಬಿಟ್ಟಿದ್ದೇವೆ. ಅಲ್ಲಿ ಹೋಗಿ ಕೆಲಸ ಮಾಡಲಿಕ್ಕೆ ಇವರು ತಯಾರೇ ಇಲ್ಲ. ಅದು ಆಗಬಾರದು. ಅದು ಯಾರೇ ಆಗಲಿ ಅವರು ಜವಾಬ್ದಾರಿಯನ್ನು ಹೊತ್ತು ಕೆಲಸವನ್ನು ನಿಭಾಯಿಸಬೇಕಾಗುತ್ತದೆ. ಯಾವ ಅಧಿಕಾರಿಗಳು ತಪ್ಪುಮಾಡಿದರು ಮಾನ್ಯ ಮುಖ್ಯ ಮಂತ್ರಿಗಳು ಕ್ಷಮಿಸಬಾರದು. ಎರಡನೆ ವಿಷಯ, ಎ.ಪಿ.ಎ.ಆರ್, ಇವರೂ ಅಷ್ಟೇ ಇಲ್ಲಿ ಕೆಲವಾರು ಇಲಾಖೆಗಳಿಗೆ ಹೋದಾಗ ಅಲ್ಲಿ ಸಿ ಅಂಡ್ ಆರ್ ರೂಲನ್ನು ಹೊಸದಾಗಿ ಫ್ರೇಮ್ ಮಾಡಲಿಕ್ಕೆ ಪ್ರಪೋಸಲ್ ಕಳುಹಿಸಿದ್ದಾರೆ. ನನಗೆ ಹೌಸಿಂಗ್ ಬೋರ್ಡ್‌ನಿಂದ ತಿಳಿಯಿತು. ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಅಲ್ಲಿಂದ ತಿಳಿಯಿತು. ಆ. ಸಿ. ಅಂಡ್ ಆರ್. ರೂಲ್ ಅನ್ನು ಅಮೆಂಡ್ ಮಾಡಲಿಕ್ಕೆ ಅಥವಾ ಹೊಸದಾಗಿ ಮಾಡಲಿಕ್ಕೆ ತಮಗೆ ಪ್ರಪೋಸಲ್ ಕಳುಹಿಸಿ 6 ತಿಂಗಳಾದರೂ ಆ ಫೈಲ್ ವಾಪಸ್ಸು ಬಂದಿಲ್ಲ. ಸಚಿವಾಲಯದಿಂದ ಇಲ್ಲಿಗೆ ಬರಬೇಕು. ಅಥವಾ ಅಲ್ಲೇ ಒಂದು ರೂಮ್‌ನಿಂದ ಇನ್ನೊಂದು ರೂಮಿಗೆ ಹೋಗಬೇಕು. ಈ ಕೆಲಸ ನಿಧಾನವಾಗುತ್ತದೆಂದು ಹೇಳಿದರೆ ನಾವು ಇವರಿಂದ ಏನು ಕೆಲಸವನ್ನು ನಿರೀಕ್ಷೆಯನ್ನು ಮಾಡಬಹುದು. ಇವತ್ತು ಹೈಪವರ್ ಕಮಿಟಿ ಅಂತ ಮಾಡಿಕೊಂಡರು. ಹರಿಜನ ಗಿರಿಜನರಿಗೆ, ರಿಜರ್‌ವೇಶನ್ ಪಾಲಿಸಿಯಲ್ಲಿ ತೊಂದರೆಯಾದರೆ ಅಥವಾ ಪ್ರಮೋಷನ್‌ನಲ್ಲಿ ತೊಂದರೆಯಾದರೆ, ಬ್ಯಾಕ್‌ಲಾಗ್ ಅನ್ನು ಭರ್ತಿ ಮಾಡುವುದರಲ್ಲಿ ತೊಂದರೆ ಆದರೆ ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೈ ಪವರ್ ಕಮಿಟಿ ಮಾಡಿದ್ದೀರಿ. ಆದರೆ ನಾನು ಹೋದ ಸಲ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನಾನು ಈ ಹೈ ಪವರ್ ಕಮಿಟಿಯನ್ನು ಮಾಡಿದ ಉದ್ದೇಶವೇನು? ಎಷ್ಟು ಸಾರಿ ನೀವು ಮೀಟಿಂಗನ್ನು ಮಾಡಿದ್ದೀರಿ, ಇದರಿಂದ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ. ಯಾವ್ಯಾವ ಇಲಾಖೆಯಲ್ಲಿ ತೊಂದರೆಯಾಗಿದೆ ಎಂದು ವಿಚಾರ ಮಾಡಿ ಇವರನ್ನು ಪನಿಶ್ ಮಾಡಿದ್ದೀರಿ, ಆದರೆ ಆಗಲಿಲ್ಲ. ಇದೇ ಸದನದಲ್ಲಿ ಮೊನ್ನೆ ನಾವು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಾಗ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುತ್ತಾ, ಯಾವುದೇ ಇಲಾಖೆಯಲ್ಲಿ ಈ ರಿಜರ್‌ವೇಶನ್ ರೋಸ್ಟರನ್ನು ಪಾಲನೆ ಮಾಡಿದಿದ್ದವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕೆ ಒಂದು ಮಾನಿಟರಿಂಗ್ ಸೆಲ್ ಮಾಡಿದ್ದೇವೆಂದು ಹೇಳಿದರು. ಆದರೆ ಮಾನಿಟರಿಂಗ್ ಸೆಲ್ ಎಲ್ಲಿದೆ ಎಂದು ನನಗೆ ಇನ್ನು ತಿಳಿದಿಲ್ಲ. ನಮ್ಮನ್ನೆ ಹೋಗಿ ನೋಡಿ ಅಂತ ಹೇಳಿದರು, ಯಾರು ಅದರ ಬಗ್ಗೆ ವಿಚಾರ ಮಾಡುತ್ತಿದ್ದಾರೆ, ಯಾರು ಜವಾಬ್ದಾರಿಯನ್ನು ಹೊತ್ತಿದ್ದಾರೆಂದು ಗೊತ್ತಿಲ್ಲ. ನನಗೆ ಪತ್ರಗಳ ಮೇಲೆ ಪತ್ರಗಳು ಬರುತ್ತದೆ. ಮಾನಿಟರಿಂಗ್ ಸೆಲ್ ಮೂರನೆಯ ಮಹಡಿಯಲ್ಲಿದೆ ಅಂತ ವಿಚಾರ ಮಾಡಿ ನೀವು ಹೋಗಿ ಅಲ್ಲಿ ದೂರನ್ನು ಕೊಡಿ ಅನ್ನುವಂತಹ ಮಾತು ಆಗಿದೆ. ಇವತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ ಈ ಒಂದು ಶೇಕಡ 18 ಪರ್ಸೆಂಟ್ ಅಮೌಂಟನ್ನು ಯಾವ ಅಧಿಕಾರಿ ಯಾವ ಇಲಾಖೆಯಲ್ಲಿ ಖರ್ಚು ಮಾಡುವುದಿಲ್ಲ. ಹಾಗೆಯೇ ಈ ರೋಸ್ಟರ್ ಮತ್ತು ರಿಜರ್‌ವೇಶನ್ ಏನಿದೆ, ಅದನ್ನು ಪಾಲನೇ ಮಾಡುವುದಿಲ್ಲ ಅಥವಾ ಪ್ರಮೋಷನ್‌ನಲ್ಲಿ ಆಗಿರಬಹುದು, ಅಥವಾ ಪೋಸ್ಟನ್ನು ಫಿಲ್ ಅಪ್ ಮಾಡುವುದರಲ್ಲಿ ಆಗಿರಬಹುದು ಯಾರು ಅದನ್ನು ಕಾರ್ಯಗತ ಮಾಡುವುದಿಲ್ಲ ಅಂತಹ ಅಧಿಕಾರಿಗಳನ್ನು ನೀವು ಏತಕ್ಕೆ ಪನಿಶ್ ಮಾಡುತ್ತಿಲ್ಲ. ಅವರನ್ನು ಅಟ್ರಾಸಿಟಿಯೊಳಗೆ ಸೇರಿಸುವಂತಹ ವ್ಯವಸ್ಥೆಯನ್ನು ಮಾಡಿದರೆ ಇವತ್ತು ಸಹ ಎಚ್ಚೆತ್ತುಕೊಂಡು ಕೆಲಸ ಮಾಡಿಲಿಕ್ಕೆ ಹೋಗುತ್ತಾರೆ. ಇಲ್ಲದಿದ್ದರೆ ನಯಾವಂಚನೆ ಮಾಡುವಂತಹ ಕೆಲಸವನ್ನು ಈ ಅಧಿಕಾರಿಗಳು ಮಾಡುತ್ತಾರೆ, ಇದು ಆಗಬಾರದು ಅನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನಗೆ ನಾಲ್ಕು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:-(ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ, ಸಮಯದ ಅಭಾವದಿಂದ ನಾನು ಉದ್ದವಾದ ಭಾಷಣವನ್ನು ಮಾಡಲಿಕ್ಕೆ ಹೋಗುತ್ತಿಲ್ಲ. ಕೇವಲ ಕೆಲವು ಇಲಾಖೆಯ ಮೇಲೆ ಕೆಲವು ಸಲಹೆಯನ್ನು ಕೊಡುವ ಯತ್ನ ಮಾಡುತ್ತೇನೆ. ಇವತ್ತು 48 ಬೇಡಿಕೆಗಳು ಇವೆ. ಕನಿಷ್ಟ ಸಂಬಂಧಪಟ್ಟಂತಹ ಮಂತ್ರಿಗಳು ಇಲ್ಲಿ ಇದ್ದರೆ ಸಾಕಾಗಿತ್ತು. ಬಹಳಷ್ಟು ಜನ ಸಂಬಂಧಪಟ್ಟ ಮಂತ್ರಿಗಳು ಸಹ ಇಲ್ಲಿ ಇಲ್ಲ. ನಾನು ವಿಷಯವನ್ನು ಪ್ರಸ್ತಾಪ ಮಾಡಿದರೆ ಸಹ ನಾಳೆ ಮಂತ್ರಿಗಳು ಉತ್ತರವನ್ನು ಕೊಡಲಿಕ್ಕೂ ಸಮಯ ಇಲ್ಲ. ಹಾಗಾಗಿ ಉತ್ತರವನ್ನು ಕೊಡಲಿಕ್ಕೆ ಸಾಧ್ಯವಿದ್ದರೆ ಉತ್ತರವನ್ನು ನಾಳೆ ಕೊಡಿ. ಉತ್ತರವನ್ನು ಕೊಡಲಿಕ್ಕೆ ಆಗಲಿಲ್ಲ ಅಂದರೆ ನಾವೇನು ಸಲಹೆಯನ್ನು ಕೊಡುತ್ತೇವೆ ಅದು ಸರಿಯಾಗಿದ್ದರೆ ಅದನ್ನು ಅನುಷ್ಠಾನದಲ್ಲಿ ತರಲಿಕ್ಕೆ ಪ್ರಯತ್ನ ಮಾಡಿ. ಅದರಿಂದ ನಿಮಗೆ ಒಳ್ಳೆಯದಾಗುತ್ತದೆ. ಇವತ್ತು ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ವಿಚಾರವನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

(ಶ್ರೀ ಜಿ.ಎಸ್. ಶಿವನಂಜಪ್ಪ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ನಿಮ್ಮ ಅರಣ್ಯ ಇಲಾಖೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಪ್ಲಾಂಟೇಷನ್ಸ್ ಮಾಡುತ್ತಿದ್ದಾರೆ. ನಮ್ಮ ಕಾಲದಲ್ಲಿ ಫ್ರೀ ಪ್ಲಾಂಟೇಷನ್ ಪ್ರೋಗ್ರಾಂಗೆ ಬಹಳ ಹೆಚ್ಚಿನ ಮಹತ್ವವನ್ನು ನಾವು ಕೊಟ್ಟು ಕೇವಲ ಬೆಂಗಳೂರು ಸಿಟಿ ಅಷ್ಟೇ ಅಲ್ಲ ಇಡೀ ರಾಜ್ಯಾದ್ಯಂತ ಬಹಳ ದೊಡ್ಡ ಪ್ರಮಾಣದಲ್ಲಿ ಪ್ಲಾಂಟೇಷನ್ ಪ್ರೋಗ್ರಾಂ ಅನ್ನು ತೆಗೆದುಕೊಂಡು ಆಗಿನ ಕೇಂದ್ರ ಸರ್ಕಾರ, ರಾಜೀವ್ ಗಾಂಧಿಯವರ ಸರ್ಕಾರ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರವನ್ನು ಮೆಚ್ಚಿತು. ಆದರೆ ಸಮಸ್ಯೆ ಏನು ದೊಡ್ಡದಾಗಿದೆ ಅಂದರೆ ಫಾರೆಸ್ಟ್ ಇದ್ದಿದ್ದು. ಕೊಡಗು, ನಾರ್ತ ಕೆನರಾ, ಶಿವಮೊಗ್ಗದ ಕೆಲವು ಭಾಗ, ಬೆಳಗಾಂ ಜಿಲ್ಲೆಯಲ್ಲಿ ಫಾರೆಸ್ಟ್ ಇತ್ತು. ಆದರೆ ಇಲ್ಲಿ ಏನಾಗಿದೆ ಅಂದರ ಡಿಗ್ರೇಟೆಡ್ ಲ್ಯಾಂಡ್ ಬಹಳ ಇದೆ. ಎಲ್ಲೆಲ್ಲಿ ಫಾರೆಸ್ಟ್ ಇಲ್ಲ, ಅಲ್ಲಿ ಪ್ಲಾಂಟೇಷನ್ ಮಾಡಲಿಕ್ಕೆ ನಿಮ್ಮ ಕಡೆನೂ ಹಣವಿಲ್ಲ. ಮತ್ತು ಕೇಂದ್ರ ಸರ್ಕಾರದಲ್ಲಿಯೂ ಹಣ ಇಲ್ಲ. ಇದು ನಮ್ಮ ಕಾಲದಲ್ಲಿಯೂ ಇದ್ದಂತಹ ಸಮಸ್ಸೆಯಾಗಿದೆ. ಇದು ಕೇವಲ ನಿಮ್ಮ ಕಾಲದ ಸಮಸ್ಯೆ ಅಂತ ನಾನು ಹೇಳುತ್ತಿಲ್ಲ. ಹಾಗಾಗಿ ಇವತ್ತು ಸಾವಿರಾರು ಎಕರೆ, ಲಕ್ಷಾಂತರ ಎಕರೆ ಲ್ಯಾಂಡ್ ಡಿಗ್ರೇಡ್ ಫಾರೆಸ್ಟ್ ಇದ್ದು ಅದರ ಉಪಯೋಗ ಇವತ್ತು ಆಗುತ್ತಿಲ್ಲ. ಇದರ ಬಗ್ಗೆ ಹಿಂದೆಯೂ ಸಲಹೆಯನ್ನು ಕೊಟ್ಟಿದ್ದೇನೆ. ಇವತ್ತು ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಈ ತರಹದ ಚಿಂತನೆ ಕೇಂದ್ರ ಸರ್ಕಾರದಲ್ಲಿ ನಡೆಯುತ್ತಿದೆ. ನಮ್ಮ ಕಡೆ ಫಾರೆಸ್ಟ್ ಇಂಡಸ್ಟ್ರೀಸ್ ಇದೆ, ಪ್ಲೈವುಡ್ ಇಂಡಸ್ಟ್ರಿಸ್ ಇರಬಹುದು, ಪೇಪರ್ ಇಂಡಸ್ಟ್ರಿಸ್ ಇರಬಹುದು, ಇವತ್ತು ರಾ ಮೆಟಿರಿಯಲ್‌ಗೆ ಸಫರ್ ಮಾಡುತ್ತಿದ್ದಾರೆ. ಮೆಟಿರಿಯಲ್ ಇವತ್ತು ಇಲ್ಲ. ಅಸ್ಸಾಂದಿಂದ ತರುತ್ತಾರೆ. ಆಂಧ್ರದಿಂದ ತರುತ್ತಾರೆ. ತಮಿಳುನಾಡಿನಿಂದ ತರುತ್ತಾರೆ, ಹಾಗಾಗಿ industries are becoming sick. Degraded ಫಾರೆಸ್ಟ್ ಏನಿದೆ-degraded forest should be given to these industries, may be, plywood, paper or tiny industries for captive generation of their raw material. Capative generation of raw material.

ತಾವು ಈ ಫಾಕ್ಟರಿಸ್‌ಗೆ ಕೊಟ್ಟರೆ, ಇದರಿಂದ ಏನಾಗಬಹುದು ಅಂದರೆ ಪರಿಸರಕ್ಕೆ ಸಾಕಷ್ಟು ಅನುಕೂಲವಾಗಬಹುದು. ಎನ್‌ವೈರ್‌ನ್‌ಮೆಂಟ್ ಚೆನ್ನಾಗಿ ನಿರ್ಮಾಣವಾಗಬಹುದು. ಇದರಿಂದ ಇಂಡಸ್ಟ್ರೀಯಲೈಸ್‌ಗೆ ರಾ ಮೆಟೀರಿಯಲ್ ಪ್ರಾಬ್ಲಮ್ ಏನಿದೆ ಆ ಪ್ರಾಬ್ಲಮ್ ಸಾಲ್ವ್ ಆಗಬಹುದು. ಇದರಿಂದ ಎಂಪ್ಲಾಯ್‌ಮೆಂಟ್ ಜನರೇಶನ್ ಆಗಬಹುದು. ಇವತ್ತು ಸಾಕಷ್ಟು ಉದ್ಯೋಗಕ್ಕೆ ಅವಕಾಶ ಇಲ್ಲ. ಆ ಜನಗಳಿಗೆ ಉದ್ಯೋಗಕ್ಕೆ ಅವಕಾಶವಾಗಬಹುದು. The State Govermnent will get revenue. ನಿಮ್ಮ ಸರ್ಕಾರಕ್ಕೆ ಆದಾಯವು ಬರುತ್ತದೆ. ಎಂಪ್ಲಾಯಿಮೆಂಟ್ ಜನರೇಶನ್ ಆಯಿತು.

ಫ್ಯಾಕ್ಟರಿಗಳ ಪ್ರಾಬ್ಲಮ್ ಸಾಲ್ವ್ ಆಯಿತು, ಎನ್‌ವೈರ್‌ಮೆಂಟ್ ಪ್ರೊಟೆಕ್ಟ್ ಆಯಿತು. ಈ ದೃಷ್ಟಿಯಿಂದ ತಾವು ವಿಚಾರಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಕೆಲವು ಜನ ಇದನ್ನು ಏತಕ್ಕೆ ಪ್ರೈವೇಟ್ ಸೆಕ್ಟಾರಿಗೆ ಕೊಡಬೇಕೆಂದು ಹೇಳುತ್ತಾರೆ. No. days have changed. ಫಾರೆಸ್ಟ್ ಏನಿದೆ ಅದನ್ನು ಹಾಗೆ ಇಡುವುದಕ್ಕೆ ಆಗುವುದಿಲ್ಲ. How are you going to solve the problem of degraded forest. shrub-lakhs & lakhs of acres are lying vacant.

ಹಾಗಾಗಿ ಕೇಂದ್ರ ಸರ್ಕಾರದಲ್ಲಿಯೂ ತಮ್ಮ ಎನ್‌ವೈರ್ನ್‌ಮೆಂಟ್ ಮಿನಿಸ್ಟರ್ ಮಾನ್ಯ ಕಮಾಲನಾಥ್‌ರವರು ಇದರ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಹಾಗಾಗಿ ಆ ದೃಷ್ಟಿಯಿಂದ ತಾವು ಚಿಂತನೆಯನ್ನು ಮಾಡಿ, ತಮ್ಮ ಸರ್ಕಾರ ಇದರ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆನ್ನುವ ಸಲಹೆಯನ್ನು ಕೊಡುತ್ತಿದ್ದೇನೆ. ಎರಡನೆಯದು ತಮ್ಮ ಡಿಪಾರ್ಟ್‌ಮೆಂಟ್ Range Forest Officers posting ಒಬ್ಬ ಆರ್.ಎಫ್.ಓ ಒಂದು ಪೋಸ್ಟಿಗೆ ಒಂದು ಲಕ್ಷ ರೂಪಾಯಿಯನ್ನು ಕೊಡುತ್ತಾನೆ.

ಇವತ್ತು ತಮಗೆ ಗೊತ್ತು ಕಾಂಟ್ರಾಕ್ಟ್‌ರ್ಸ್ ಇಲ್ಲ I am not charging. I have respect for him. There are no contractors now. Contractor system has gone. society lobbying contract ಮಾಡುತ್ತಿದ್ದಾರೆ. ಅದರಿಂದ ಅವರಿಗೇನು ಲಾಭ ಇಲ್ಲ. ಮುಖ್ಯವಾಗಿ ಹಣ ಎಲ್ಲಿ ಪೋಲಾಗುತ್ತಿದೆ ಅಂದರೆ ಪ್ಲಾಂಟೇಷನ್ ಪ್ರೋಗ್ರಾಂನಲ್ಲಿ ಪೋಲಾಗುತ್ತಿದೆ. Every month lakhs of Rs. cash money one ROF gets. How best to avocd, you have to think of. ಕೊಡುವ ಕಾರ್ಯಕ್ರಮ ಡಿಪಾರ್ಟ್‌ಮೆಂಟಿನಿಂದ ನಡೆಯುತ್ತದೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಸಹಿತ 5 ರೂಪಾಯಿ ಕ್ಯಾಶ್ ಯಾರು ಕೊಡುವುದಿಲ್ಲ. Every month ಒಬ್ಬ ಆರ್. ಏಫ್.ಓ he gets lakhs of rupees cash money. How best to avoid, you have to think of ಕ್ಯಾಶ್ transaction ನಿಂದ ಹೆಚ್ಚಿನ ದುರುಪಯೋಗ ಆಗುತ್ತಿದೆ. ಹಾಗಾಗಿ thers is a mad rush to make money. ಈ trenches ಕಾರ್ಯಕ್ರಮ ಪ್ಲಾಟೇಷನ್ ಮಾಡುವ ಕಾರ್ಯಕ್ರಮಗಳಲ್ಲಿ ತಾವು strict monitoring ಮಾಡಿ. ಕೆಲವು ಕಡೆ ಒಳ್ಳೆಯ ಪ್ಲಾಂಟೇಷನ್ಸ್ ಆಗಿದೆ. ನನ್ನ ಕ್ಷೇತ್ರದಲ್ಲಿ ಒಂದೆರಡು ಕಡೆ ಹೋಗಿದ್ದೇನೆ. ಕೆಲವು ಕಡೆ ಒಳ್ಳೆಯ ಪ್ಲಾಂಟೇಷನ್ ಆಗಿದೆ ಅದನ್ನು ನಾವು ಮೆಚ್ಚಬೇಕು. ಎಲ್ಲ ಅಧಿಕಾರಿಗಳು ಕಳ್ಳರು ಎಂದು ನಾನು ಹೇಳುವುದಿಲ್ಲ. ತಪ್ಪಾಗುತ್ತದೆ. There are some good officers who have done very good work. ಆದರೆ ಇವತ್ತು ಮಾನಿಟರಿಂಗ್ ಇಲ್ಲ, ಹಾಗಾಗಿ ಇವತ್ತು ಮಾನಿಟರಿಂಗ್‌ಗಾಗಿ ಎಷ್ಟು ಪ್ಲಾಂಟೇಷನ್ ಆಯಿತು; ಟ್ರೀ ಎಷ್ಟು ಸರ್ವೈವ್ ಆಗಿದೆ. ಹಣ ಇದರ ಮೇಲೆ ಎಷ್ಟು ಖರ್ಚಾಗಿದೆ. ಲಾಭ ಏನಾಗಿದೆ. ಎಂಬುದನ್ನು ನೋಡಬೇಕಾಗಿದೆ. ಟ್ರಸ್ಟ್ ಬೋರ್ಡ್ ಕಾರ್ಯಕ್ರಮವನ್ನು ನೋಡಬೇಕಾಗುತ್ತದೆ. ಈ ಬೋರ್ಡ್ ಹಣವನ್ನು ಸೆವ್ ಮಾಡಿದರೆ ಎಳು ವರ್ಷಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು. ಇದೇ ಹಣದಲ್ಲಿ ಈಗ ಏನು ಪ್ರೋಗ್ರಾಂ ಮಾಡಿದ್ದೀರಿ. The same ambitious programme you can drew without spending a coin provided you strictly monitor and stop this leakage.

ಇದು ಎರಡನೆಯ ಸಲ ಕೊಡುತ್ತಿದ್ದೇನೆ. ಅದಾದ ನಂತರ ತಮಗೆ ಗೊತ್ತು 1978ಕ್ಕಿಂತ ಮುಂಚೆ ಯಾವ ಬಡ ಜನರಿಗೆ ಫಾರೆಸ್ಟ್ ಲ್ಯಾಂಡ್ ಡಿಸ್‌ಪೋಸ್ ಮಾಡಿದರೆ ಅವರು ಇಪ್ಪತ್ತು ವರ್ಷದಿಂದ ಭೂಮಿಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಶ್ರೀ ರಾಮಕೃಷ್ಣ ಹೆಗಡೆಯವರು ಇದ್ದ ಸಮಯದಲ್ಲಿ ಬಿಡುಗಡೆಯಾದ ಭೂಮಿಗಳು ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಶಿವಮೊಗ್ಗದಲ್ಲಿ ಸಾಕಷ್ಟು ಸಮಸ್ಯೆಗಳು ಇದೆ. ನೀವು ಕಮಿಟೆಡ್ ಆದೀರಿ, ನಾವು ಕಮಿಟೆಡ್ ಆದೇವು, ನೀವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ, ಈ ಪ್ರಾಬ್ಲಂ ಸಾಲ್ವ್ ಆಗಿಲ್ಲ. ಇದರ ಬೆನಿಫಿಟ್ ತೆಗೆದುಕೊಂಡು ಇನ್ನು ಕೆಲವು ಜನರು ಲ್ಯಾಂಡ್ ಎನ್‌ಕ್ರೋಚ್

ಮಾಡುತ್ತಿದ್ದಾರೆ. ಗೌವರ್ನಮೆಂಟ್ ಆರ್ಡರ್ ಏನಿದೆ 1478ಕ್ಕಿಂತ ಮುಂಚೆ ಆರ್ ಬಾರ್ 78ಕ್ಕಿಂತ ಮುಂಚೆ ಯಾರು ಫಾರೆಸ್ಟ್ ಲ್ಯಾಂಡ್ಸ್ ಎನ್‌ಕ್ರೋಚ್ ಮಾಡಿದ್ದಾರೆ. ಇವರ ಬಡವರು ಇದ್ದರೆ ಜೆನಿಯನ್ ಇದ್ದರೆ ಅವರನ್ನೂ ಪೊರೊಲೈಜ್ ಮಾಡಬೇಕೆಂದು ನಾವು ಮಾಡಿದ್ದೇವೆ. ನಮ್ಮ ಸರ್ಕಾರ ಹೋದ ನಂತರ ಕಮಿಟಿ ಗೊಸ್ ವೈಸ್ ಪುನಃ ಕಮಿಟಿ ರಿವೈಸ್ ಮಾಡಿದರು. ಅದರ ಆಧಾರದ ಮೇಲೆ ತೆಗೆದುಕೊಂಡು ಬಹಳಷ್ಟು ಜನರು ಫಾರೆಸ್ಟ್ ಲ್ಯಾಂಡ್ ಎನ್‌ಕ್ರೋಚ್ ಮಾಡುತ್ತಿದ್ದಾರೆ. The Committee was in cold-storage. You should not allow a single inch of forest land to be encroached. ಹಾಗಾಗಿ ಈ ಕಮಿಟಿಗಳು ಎಕ್ಸಾಫಿಗೆಟ್ ಮಾಡಬೇಕು. ಇದರ ಬಗ್ಗೆ ಶೇಕಡ 20ರಷ್ಟು ಡಿಷಿಸನ್ ಆಗಿಲ್ಲ, ನಾನು ಕಂದಾಯ ಸಚಿವರನ್ನು ಮೆಚ್ಚುತ್ತೇನೆ. ಅರಣ್ಯ ಸಚಿವರು ಸಹ ಸಹಕಾರ ನೀಡಿದ್ದಾರೆ. ನಮ್ಮ ಜಿಲ್ಲೆಯ ಬಹಳ ಹಳೆಯ ಜ್ವಲಂತ ಸಮಸ್ಯೆಯಾಗಿದ್ದು, 1968ರಿಂದ ಈ ಸಮಸ್ಯೆ ಇದ್ದು, ಇದು ನಮ್ಮ compliments to the Government. I compliment the Hon. Revenue Minister. ಈಗ ಈ ಸಮಸ್ಯೆಯು ಜ್ವಲಂತ ಸಮಸ್ಯೆಯಾಗಿದೆ. ಆದುದರಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದಿಂದ ಪ್ರಯತ್ನವಾಗಬೇಕು. ಅಲ್ಲಿ ಕಮಿಟಿ constitute ಮಾಡಿದ್ದಾರೆ. ನಾನ್ ಆಫೀಸರ್ ಮೆಂಬರ್ ಇಲ್ಲ, ಹಾಗಾಗಿ ಐದು ಜನ ಸದಸ್ಯರು ಇದ್ದರೂ ಸಹ ಒಬ್ಬ ನಾನ್ ಅಫಿಷಿಯಲ್ ಮೆಂಬರ್ ಇಲ್ಲವೆಂದು ಕೆಲಸ ನಿಂತಿದೆ. Let the Government direct the Committee start the work or you nominate your own man. ಕೆಲಸ ಮಾಡಿ ಆಶೀರ್ವಾದ ತೆಗೆದುಕೊಂಡಿದ್ದೀರಾ, ನಿಮಗೆ ಅನುಕೂಲವಾಗಬಹುದು. ಈ ಕ್ರಮ ಸಹ ಅರಣ್ಯ ಇಲಾಖೆಯಿಂದ ಆಗಬೇಕಾಗಿದೆ. ಟ್ರಾನ್ಸ್‌ಫರ್ ಬಗ್ಗೆ bothered ನಾನು ನಿಮಗೆ ಹೇಳಿದ್ದೇನೆ. In my constituency, last time, 6-RFOs were transferred who had not completed even 6 months. Have a transfer policy. ಏಕೆ ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬುದನ್ನು ಕೇಳುವುದಿಲ್ಲ. ಯಾರನ್ನು ತರುತ್ತೀರಿ ಅದನ್ನು ನಾವು ಕೇಳುವುದಿಲ್ಲ. ಆದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಹ್ಯಾವ್ ಎ ಟ್ರಾನ್ಸ್‌ಫರ್ ಪಾಲಿಸಿ, ಯಾವ ಒಳ್ಳೆಯ ಅಧಿಕಾರಿಗಳು ಬಂದರೆ ಅವರು ಎಷ್ಟು ದಿವಸ ಇರಬೇಕು. ಕರಪ್ಟ್ ಇದ್ದರೆ ಮಾಡಬಾರದು. If he is a corrupt, you can throw him out. ಅದು ಬಿಟ್ಟು ಒಬ್ಬರು ಫ್ರೆಂಡ್ ಬೇಕು ಎಂದು ಮಾಡುತ್ತಾರೆ ಅಡ್‌ಮಿನಿಸ್ಟ್ರೇಷನ್ ಸರಿಯಲ್ಲ; ಆ ದೃಷ್ಟಿಯಿಂದ ಸಹಕಾರ ಇಲಾಖೆಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಎಂದು ತಮಗೆ ಒತ್ತಾಯ ತರುತ್ತಿದ್ದೇನೆ. ನಮ್ಮ ಕೊ ಆಪರೇಷನ್ ಮಿನಿಸ್ಟರ್ ಕಾಣಿಸುತ್ತಾ ಇಲ್ಲ, ಅವರು ನಮ್ಮ ಗುರುಗಳು. ಇವತ್ತು ನಾವು ಈ ಮಟ್ಟಕ್ಕೆ ಬರಲು ಅವರು, ಮತ್ತು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಕಾರಣವಾಗಿದ್ದಾರೆ. ಆ ಪ್ರಕಾರ ದಿವಂಗತ ಜೆ.ಹಚ್.ಪಟೇಲ್ ಅವರು ಸಹ ಆಶೀರ್ವಾದ ಮಾಡಿ ನಾವು ಈ ಸ್ಟೇಜ್‌ಗೆ ಬರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅವರು ನಿಜವಾಗಿಯೂ ಸಹಕಾರ ಕ್ಷೇತ್ರದ ಭೀಷ್ಮರು, ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಯಿತು. ಜೆ.ಹೆಚ್. ಪಟೇಲ್‌ರವರ ಈ ಸಹಕಾರಿ ಕಾಯಿದೆಯಲ್ಲಿ ತಿದ್ದುಪಡಿ ತರುವ ಕಮಿಟಿಯಾಗಿದೆ. ಅಮೆಂಡ್‌ಮೆಂಟ್ ವಿಚಾರದಲ್ಲೂ ಕೂಡ ಈ ಮನೆಯಲ್ಲಿ ಮೂವ್ ಆಗಬೇಕಾಗಿದೆ. ಇಂಟ್ರೊಡ್ಯೂಸ್ ಮಾಡಬೇಕಾಗಿದೆ. ಇದಕ್ಕೆ ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಜೆ.ಹೆಚ್. ಪಟೇಲ್ ಕಮಿಟಿ ರೆಕಮೆಂಡೇಷನ್ ಏನಿದೆ ಅಮೆಂಡ್‌ಮೆಂಟ್ ಲಾ ಅದನ್ನು ಆದಷ್ಟು ಬೇಗನೆ ತಂದು ಈ ಸಹಕಾರ ರಂಗವನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಸಾಕಷ್ಟು ಸಮಸ್ಯೆಯಿದೆ. ಇದರ ಬಗ್ಗೆ ಎಷ್ಟು ಬೇಕಾದರೂ ಮಾತನಾಡಬಹುದು, ಆದರೆ ಸಮಯದ ಅಭಾವದಿಂದ ನಾನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ರೆಕ್‌ಮೆಂಡೇಷನ್ ತನ್ನಿ ಅದು ಬಹಳ ಅವಶ್ಯಕವಿದೆ. ಈಗ ಎಂ.ಎಲ್.ಎ.ಗಳು 50 ವರ್ಷಗಳು ಇರಬಹುದು, ಮಿನಿಸ್ಟರ್‌ಗಳು 30 ವರ್ಷಗಳು ಇರಬಹುದು, ಪ್ರೈಮ್ ಮಿನಿಸ್ಟರ್ 50 ವರ್ಷಗಳು ಇರಬಹುದು, ಆದರೆ ಸಹಕಾರ ಕ್ಷೇತ್ರದಲ್ಲಿ ಒಬ್ಬ ಚೇರ್‌ಮನ್ ಆರು ವರ್ಷಗಳು ಏಕೆ ಈ ಪ್ರಕಾರ ರಿಸ್ಟ್ರಿಕ್ಷನ್,

ಬ್ಯಾನ್ ಏಕೆ ಇರಬೇಕು. ಈ ರೀತಿ ಮುನ್ಸಿಪಾಲಿಟಿಯಲ್ಲಿ ಇಲ್ಲ, ಜಿಲ್ಲಾ ಪರಿಷತ್‌ನಲ್ಲಿ ಇಲ್ಲ, ಮತ್ತು ಯಾವ ರಂಗದಲ್ಲೂ ಇಲ್ಲ. ಕೇವಲ ಸಹಕಾರ ರಂಗದಲ್ಲಿ ಅಷ್ಟೇ ಇರುವುದು. ಇವತ್ತು ತಾವು ಏಕೆ ರಿಸ್ಟ್ರಿಕ್ಷನ್ ಹಾಕುತ್ತಾ ಇದ್ದೀರಿ. ಅಮೆಂಡ್‌ಮೆಂಟ್ ತರುವಾಗ ಆರು ವರ್ಷದ ಬ್ಯಾನ್ ಏನು ಇದೆ, ಅದನ್ನು ತೆಗೆಯಬೇಕು. ಯಾರಿಗೆ ಅರ್ಹತೆ ಇದೆ, ಯಾರಿಗೆ ಯೋಗ್ಯತೆ ಇದೆ, ಜನರಿಗೆ ಯಾರ ಮೇಲೆ ವಿಶ್ವಾಸವಿದೆ ಅವರು ಇಲ್ಲ, ಉಪುಪಿ ಕ್ಷೇತ್ರದಲ್ಲಿ ಜನರು ನಿಮ್ಮ ಮೇಲೆ ವಿಶ್ವಾಸ ಇಟ್ಟಿದ್ದರೆ ಇರಿ ನಾವು ಏನು ಮಾಡುವುದಕ್ಕೆ ಬರುತ್ತದೆ? We have no objection. ಹಾಗಾಗಿ ಅದೇ ಪ್ರಕಾರ ಜನರ ವಿಶ್ವಾಸ ಯಾರ ಮೇಲೆ ಇದೆ ಆ ಜನರಿಗೆ ಕೆಲಸ ಮಾಡುವುದಕ್ಕೆ ಅನುವು ಮಾಡಕೊಡಬೇಕಾಗುತ್ತದೆ. ಮತ್ತು ಇವತ್ತು ಸಹಕಾರಿ ಸಂಘದಲ್ಲಿ ಈ ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಯವರು ಈ ಇಲಾಖೆ ಬೆಲೆಯನ್ನು ಕಮ್ಮಿ ಮಾಡಿ ಬಿಟ್ಟಿದ್ದಾರೆ. ಒಂದು ಎಜುಕೇಷನ್ ಡಿಪಾರ್ಟ್‌ಮೆಂಟ್ ಮತ್ತು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನ ಬೆಲೆಯನ್ನು ಮುಖ್ಯಮಂತ್ರಿಗಳು ತೆಗೆದು ಬಿಟ್ಟಿದ್ದಾರೆ. ಇದಕ್ಕೆ ನಾಲ್ಕು ಜನ ಮಂತ್ರಿಗಳು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಎಷ್ಟು ಫೈಲ್ ಬರುತ್ತದೋ ಗೊತ್ತಿಲ್ಲ, ಹೆಚ್.ಕೆ. ಪಾಟೀಲ್‌ಗೆ ಎಷ್ಟು ಫೈಲ್ ಬರುತ್ತದೋ ನನಗೆ ಗೊತ್ತಿಲ್ಲ. ನೀವು ಏಕೆ ಈ ಪ್ರಕಾರ ಮಾಡುತ್ತಿದ್ದೀರಿ? ಇವತ್ತು ಮಂತ್ರಿಗಳಿಗೆ ಕೆಲಸ ಕೊಟ್ಟಿಲ್ಲ. ಮಂತ್ರಿಗಳಿಗೆ ಕೆಲಸ ಕೊಡದೇ ಅಲ್ಲಿ ಖಾಲಿ ಗೂಡು ಏಕಿರಬೇಕು. ಖಾಲಿ ಗೂಡು ಸಲುವಾಗಿ ಏನಾದರೂ ಫ್ಲೀಸ್ ಮಾಡುವುದಕ್ಕೆ ಮಂತ್ರಿ ಮಾಡಿದ್ದರೆ ಅದರ ಬಗ್ಗೆ ನಮಗೆ ಉತ್ತರ ಬೇಡ. ಇವತ್ತು ಸರ್ಕಾರಿ ಇಲಾಖೆಯ ಗೌರವ ಅತೀ ಕಡಿಮೆಯಾಗಿಬಿಟ್ಟಿದೆ. ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಂದರು, ನಾನು ನಿಮ್ಮ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದೆನು. ಈ ಕೆ.ಹೆಚ್. ಪಾಟೀಲ್ ಕಮಿಟಿ ರೆಕಮೆಂಡೇಷನನ್ನು ಸ್ವಲ್ಪ ಜಾರಿಗೆ ತನ್ನಿ. ನಿಮ್ಮಂತಹ ಅನುಭವ ಇರತಕ್ಕ ಮಂತ್ರಿಗಳು ಈ ಛಿದ್ರ ವಿಚ್ಛಿದ್ರವಾದ ಸರ್ಕಾರಿ ಇಲಾಖೆಯನ್ನು ತೆಗೆದುಕೊಂಡು ಏಕೆ ಕುಳಿತಿರುವಿರಿ. ನಾನು ಕೇಳುತ್ತೇನೆ ನಿಮಗೆ ಕೆಪಾಸಿಟಿ ಇದೆಯೇ, ನಾಲ್ಕು ಜನ ಮಂತ್ರಿಗಳನ್ನು ಇಟ್ಟುಕೊಂಡು ಯಾರಿಗೂ ಸಹ ಕೆಲಸ ಇಲ್ಲ. ಆ ಅಧಿಕಾರಿಗಳ ಕಷ್ಟ ನೋಡಿದರೆ ಸಾಕು. ನೀವು ನಾಲ್ಕು ಜನರು ಸಹ ಅವರನ್ನು ಒಂದೇ ಸಾರಿ ಕರೆದು ಬಿಡುತ್ತೀರಿ. ಅವರು ಎಲ್ಲಿಗೆ ಹೋಗಬೇಕು. ಹೀಗಾಗಿ ನಿಮ್ಮ ಕಡೆ ಅಧಿಕಾರಿಗಳು ಬಂದರೆ ನಮಗೆ ಆಫೀಸ್‌ನಲ್ಲಿ ಅಧಿಕಾರಿಗಳು ಸಿಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಅಧಿಕಾರಿಗಳಿಗೆ ಹೇಳಿದ್ದೇನೆ, ಮೂವರು ಮಂತ್ರಿಗಳದು ಮುಗಿದ ಮೇಲೆ ನನ್ನ ಹತ್ತಿರ ಬನ್ನಿ ಎಂದು ಹೇಳಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಹಾಗಾಗಿ ನಮ್ಮ ಕಷ್ಟ ನೀಗಬೇಕಾದರೆ ನಾವು ಕೋ-ಆಪರೇಟಿವ್ ಸೆಕ್ರೆಟರಿಗೆ ಫೋನ್ ಮಾಡಿದ ಮೇಲೆ ಮೀಟಿಂಗ್. ಮುಂಜಾನೆಯಿಂದ ಸಂಜೆಯವರೆಗೆ ಕೋ-ಆಪರೇಟಿವ್ ಸೆಕ್ರೆಟರಿಗೆ ಮೀಟಿಂಗ್. ಅವರದು ತಪ್ಪಿಲ್ಲ ಪಾಪ, ನಾಲ್ಕು ಜನ ಮಂತ್ರಿಗಳು ಹೋಗಿ ಕರೆದರೆ ಅವರು ನಮಗೆ ಯಾವಾಗ ಸಿಗಬೇಕು, ಜನರಿಗೆ ಯಾವಾಗ ಸಿಗಬೇಕು. ಅಷ್ಟೇ ಅಲ್ಲ the Co-operation Department was handled by maximum two people and not more than that. ಇವತ್ತು ಡಿಪಾರ್ಟ್‌ಮೆಂಟ್ ಛಿನ್ನ ವಿಚ್ಛಿನ್ನವಾಗಿ ಈ ಡಿಪಾರ್ಟ್‌ಮೆಂಟಿನ ಡೈರೆಕ್ಷನ್ ತಪ್ಪಿಹೋಗಿದೆ. ಇದು ಬಹಳ ಮಹತ್ವವಾದಂತಹ ಡಿಪಾರ್ಟ್‌ಮೆಂಟ್. ಅದರಲ್ಲಿ ನಮ್ಮ ರಾಜ್ಯದ ರೈತರು, ನಮ್ಮ ರಾಜ್ಯದ ಬಡ ಜನರ, ರಾಜ್ಯದ ಪರಿಶಿಷ್ಟ ಜನಾಂಗದವರ ಏಳಿಗೆ ಈ ಡಿಪಾರ್ಟ್‌ಮೆಂಟಿನಿಂದ ಸಾಧ್ಯವಿದೆ. ಸಹಕಾರಿ ರಂಗ ಬಹಳ ಕಷ್ಟದಲ್ಲಿ ಇದೆ. ಎಲಿಮಿನೇಟರಿ ಕಳೆದುಕೊಂಡಿದ್ದಾರೆ. ಹಾಗಾಗಿ ಇದಕ್ಕೆ ಒಂದು ಜವಾಬ್ದಾರಿ ಮಂತ್ರಿ ಇರಬೇಕಾಗುತ್ತದೆ. ಇದಕ್ಕೆ ಅವರು ಜವಾಬ್ದಾರಿ ಕೊಡುತ್ತಾರೆ. ರಿಸಲ್ಟ್ ಓರಿಯೆಂಟೆಡ್ ಕಾರ್ಯಕ್ರಮ ಆಗಬೇಕಾಗುತ್ತದೆ. ಆ ದೃಷ್ಟಿಯಿಂದ ಒಂದು ಕಾರ್ಯಕ್ರಮ ಆಗಬೇಕು. ನಾನು ಮತ್ತೊಂದು ಸಲಹೆಯನ್ನು ಕೊಡುತ್ತಿದ್ದೇನೆ, ಇವತ್ತು

ಕ್ರೆಡಿಟ್ ಏನು ಇದೆ ಅದು ಬಹಳ ಕಾಸ್ಟ್ಲಿ ಆಗಿಬಿಟ್ಟಿದೆ. ಅದು 11 ಪರ್ಸೆಂಟ್ 12 ಪರ್ಸೆಂಟ್ 14 ಪರ್ಸೆಂಟ್ ಇಂಟರೆಸ್ಟ್ ಹೋಗಿದೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ ತಾವು ಕೂಡ ರೈತ ಕುಟುಂಬದಿಂದ ಬಂದಿರುತ್ತೀರಿ, ಇವತ್ತು ಸಾಲ ಪಡೆದುಕೊಳ್ಳಬೇಕಾದರೆ 12, ಪರ್ಸೆಂಟ್ ಅಥವಾ 14 ಪರ್ಸೆಂಟ್ ಇಂಟರೆಸ್ಟ್ ಇಟ್ಟು ಕೊಡಬೇಕು. ಆದರೆ ಇವತ್ತು ಜಪಾನಿನಲ್ಲಿ ಹೋಗಲಿ, ಅಮೇರಿಕಾಕ್ಕೆ ಹೋಗಲಿ ಅಲ್ಲಿ ಕ್ರೆಡಿಟ್ ಇಜ್ ವೆರಿ ಚೀಪ್. ಅಲ್ಲಿ 3 ಪರ್ಸೆಂಟ್ 4 ಪರ್ಸೆಂಟ್ ಇದೆ. ಹಾಗಾಗಿ ಇವತ್ತು ಕಷ್ಟದಲ್ಲಿ ಇದ್ದು ನಮ್ಮ ರೈತ he has to pay interest from his nose ಆ ದೃಷ್ಟಿಯಿಂದ ತಾವು ನಬಾರ್ಡ್‌ನ ಜೊತೆ ತಾವು ಮಾತನಾಡಿ, ಯಾವ ರೀತಿ ಈ ಅಲ್ಟಿಮೇಟ್ ಲೆಡಿಂಗ್ ರೇಟ್ ಏನು ರೈತರಿಗೆ. ಅದು ಯಾವ ಪ್ರಕಾರ ರೈತನಿಗೆ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಮತ್ತು ಯಾವ ಪ್ರಕಾರ ರೈತನಿಗೆ ಇದೆ ಅನುವು ಮಾಡುವುದಕ್ಕೆ ಸಾಧ್ಯವಿದೆ, ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮಗೆ ಮತ್ತೊಂದು ಸಲಹೆ ಕೊಡುತ್ತಿದ್ದೇನೆ. ಆದಾದ ನಂತರ ನಾನೇ ಈ ಇಲಾಖೆಗೆ ಮಂತ್ರಿಯಾಗಿದ್ದೆ ಹೆಚ್‌ಯುಡಿ ಮಂತ್ರಿಯಾಗಿದ್ದೆನು. ಇಲ್ಲಿ ನಾನು ಬಹಳಷ್ಟು ಸಲಹೆಗಳನ್ನು ಕೊಡಬೇಕು ಆದರೆ ಸಮಯದ ಅಭಾವವಿರುವುದರಿಂದ 2-3 ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಇವತ್ತು ಮೂರನೇ ಒಂದು ಭಾಗದಷ್ಟು ಜನಸಂಖ್ಯೆ ಅರಬನ್ ಏರಿಯಾದಲ್ಲಿ ಇದೆ. ಜನರು ಎಲ್ಲಿಗೆ ಹೋದರೂ ಸಹ ಬೇಸಿಕ್ ಫೆಸಿಲಿಟೀಸ್ ಇಲ್ಲ. ಕುಡಿಯುವ ನೀರಿನ ಅಭಾವ ಇದೆ. ಸ್ಯಾನಿಟರಿ ಅಭಾವ ಇದೆ. ಹಾಗಾಗಿ ಇವತ್ತು ಎಷ್ಟು ಬಜೆಟ್‌ರಿ ಸಪೋರ್ಟ್ ಈ ಇಲಾಖೆಗೆ ಸಿಗಬೇಕು ಅಷ್ಟೊಂದು ಬಜೆಟರಿ ಸಪೋರ್ಟ್ ಸಿಗುತ್ತಿಲ್ಲ. ಇವತ್ತು ಯಾವ ಕಾರ್ಯಕ್ರಮವೇ ಆಗಲಿ ಅಥವಾ ಕುಡಿಯುವ ನೀರಿನ ಯೋಜನೆಯನ್ನೇ ಆಗಲಿ ಏನು ಕೈಗೆ ತೆಗೆದುಕೊಂಡಿದ್ದೇವೆ ಅದು ಕಳೆದ 5-6 ವರ್ಷದಿಂದ ಕಂಪ್ಲೀಟ್ ಆಗಿಲ್ಲ. ಇವತ್ತು ಸಂಕೇಶ್ವರ, ಬೆಳಗಾಂ, ಹುಕ್ಕೇರಿ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಇತ್ತು. ಇವತ್ತು ಕಮಿಟ್‌ಮೆಂಟ್ಸ್ ಆಗುತ್ತಿವೆ. ಹಾಗಾಗಿ ನಾನು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಸಫಿಷಿಯಂಟ್ ಬಜೆಟರಿ ಸಪೋರ್ಟ್ ಕೊಡಬೇಕಾಗುತ್ತದೆ. ಅವರ ಅದಾಯವನ್ನು ಹೆಚ್ಚು ಮಾಡಬೇಕಾಗಿತ್ತು. ಆ ಮುನಿಸಿಪಾಲಿಟಿ ಮಾಡಲಿಕ್ಕೆ ಸಾಧ್ಯವಿಲ್ಲ. ಎಷ್ಟು ಮುನಿಸಿಪಾಲಿಟಿ the development grants are being spent on slaries you can check it up ಆದುದರಿಂದ ಇವತ್ತು ಮುನಿಸಿಪಾಲಿಟಿ ತನ್ನ ಆದಾಯ ಹೆಚ್ಚು ಮಾಡಲಿಕ್ಕೆ ತನ್ನ ಕಾಲ ಮೇಲೆ ತಾನು ನಿಂತು ಕೆಲವು ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಕಾರ್ಯಕ್ರಮವನ್ನು ನಿಮ್ಮ ಇಲಾಖೆಯಿಂದ ಹಾಕಬೇಕಾಗುತ್ತದೆ. ಮುನಿಸಿಪಾಲಿಟಿ ಬೇಕಾದರೆ ಲೋನ್ ತೆಗೆದುಕೊಂಡು ಷಾಪಿಂಗ್ ಕಾಂಪ್ಲೆಕ್ಸ್ ಮಾಡುವುದಕ್ಕೆ ಹೇಳಿ. ಎಷ್ಟೋ ಮುನಿಸಿಪಾಲಿಟಿ ಲ್ಯಾಂಡ್ ಎನ್‌ಕ್ರೋಚ್ ಆಗಿದೆ. ಅದನ್ನು ಎವಿಕ್ಟ್ ಮಾಡಿ ಆ ಲ್ಯಾಂಡ್ ಹರಾಜು ಮಾಡಿದರೆ ಅವರಿಂದ ಇನ್‌ಕಮ್ ಬರುತ್ತದೆ. ಅಥವಾ ಆ ಜಾಗವನ್ನು ಅವರಿಗೆ ಮಾರಾಟ ಮಾಡಿ. ಹುಬ್ಬಳ್ಳಿ ಮುನಿಸಿಪಾಲಿಟಿ ಮಾಡಿದೆ. ಯಾರು ಲ್ಯಾಂಡ್ ಎನ್‌ಕ್ರೋಚ್ ಮಾಡಿದರು if there is geniun encroachment ಅವರ ಜೊತೆ ನೆಗೋಷಿಯೇಟ್ ಮಾಡಿ we gave them the land and took the money, and we spent beautiful complexes and we have got beautiful roads. we have flood lights on the roads. ಆ ರೀತಿ ಮುನಿಸಿಪಾಲಿಟಿಗೆ ಆದಾಯ ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. they should not become feeding babies. ಮುನಿಸಿಪಾಲಿಟಿಗೆ ಕಾಯಂ ಆಗಿ ಫೀಡ್ ಮಾಡಲಿಕ್ಕೆ ಆಗುವುದಿಲ್ಲ. ಆ ದೃಷ್ಟಿಯಲ್ಲಿ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕು ಮತ್ತು ತಮಗೆ ಗೊತ್ತಿದೆ ಬೆಂಗಳೂರು ಸಿಟಿ ಪ್ರಾಬ್ಲಮ್, ಕಾಂಪ್ಲೆಕ್ಸ್ ಕಾಂಪ್ಲಕೇಟ್ ಆಗಿದೆ. ಇವತ್ತು ಬೆಂಗಳೂರಿನಲ್ಲಿ ಕಾರ್‌ನಲ್ಲಿ ಅಲ್ಲ ನಡೆಯಲಿಕ್ಕೆ ಆಗುತ್ತಿಲ್ಲ. ಪಾಪ್ಯುಲೇಷನ್ ಬೆಳೆಯುತ್ತಿದೆ. ಆದುದರಿಂದ ಹೇಗೆ ಪಾಪ್ಯುಲೇಷನ್ ಬ್ರೆಕ್ ಮಾಡುವುದಕ್ಕೆ ಸಾಧ್ಯ ಅದನ್ನು ನೋಡಿ it will be worst than Bombay ನಾನು ವಾರ್ನ್ ಮಾಡುತ್ತೇನೆ ನಾನು ಮಾಡುತ್ತೇನೆ. it will be worst than Bombay ಈಗಾಗಲೇ ಪಲ್ಯುಷನ್ ಆಗಿದೆ, ಸ್ಯಾನಿಟೇಷನ್ ಇಲ್ಲ, ನೀರು ಇಲ್ಲ. ಸಮಸ್ಯೆಗಳು ನಿರ್ಮಾಣವಾಗಿದೆ. how best you can improve the land of the Bangalore city. ಒಂದು ಕಾಲದಲ್ಲಿ ಗಾರ್ಡನ್ ಸಿಟಿಯಾಗಿತ್ತು. ಇವತ್ತು ಗಾರ್ಡನ್ ಉಳಿದಿಲ್ಲ

ಸಿಟಿಯಷ್ಟೇ ಉಳಿದಿದೆ. to bring the old glory you have to put some pains and you have to draw some programmes. ಆ ದೃಷ್ಟಿಯಿಂದ ತಾವು ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತು ಹೊಸ ಕಾಲೋನೀಸ್ ಏನು ಬರುತ್ತಿದೆ let them go away. Make them satellite towns. ಈಗಾಗಲೇ ಸಾಕಷ್ಟು ಬರ್ಡನ್ ಆಗಿದೆ, ಪಿಡಬ್ಲ್ಯೂಡಿಗೆ ಸಾಕಷ್ಟು ಬರ್ಡನ್ ಆಗಿದೆ. ಇವತ್ತು ಜನರಿಗೆ ಕುಡಿಯಲಿಕ್ಕೆ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಕಾವೇರಿ 7ನೇ ಯೋಜನೆ ನೀರು ಯಾವಾಗ ನೀವು ಮುಗಿಸುತ್ತೀರ. ಆದುದರಿಂದ ಅದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಆ ಯೋಜನೆಯನ್ನು ಆದಷ್ಟು ಬೇಗ ಮುಗಿಸಿ try to develop some satellite towns. ತುಮಕೂರಿನಲ್ಲಿ ಸೈಟ್ ಮಾಡಬಹುದು, ಕೋಲಾರದಲ್ಲಿ ಸೈಟ್ ಮಾಡಬಹುದು, ಕನಕಪುರದ ಸೈಟ್ ಮಾಡಬಹುದು ಆದರೆ burden on - Bangalore city ಬೆಂಗಳೂರು ಸಿಟಿಯಲ್ಲಿ ಪಾಪ್ಯುಲೇಷನ್ ಕಡಿಮೆಯಾಗಬೇಕು ಇಲ್ಲವಾದರೆ ಬೆಂಗಳೂರಿಗೆ ಬಹಳ ಹುರುಪಿನಿಂದ ಜನ ಬರುತ್ತಾರೆ. ಬೆಂಗಳೂರಿನಲ್ಲಿ plot ಕೊಡಿ, everybody who comes to Bangalore wants a site ಬಾಂಬೆಯಲ್ಲಿ ಹಾಗೆ ಆಗಿದೆ. ಬಾಂಬೆಯಲ್ಲಿ ಪಲ್ಯೂಷನ್ ಆಗಿದೆ. In Bomb ; people are disgusted. ಬಾಂಬೆ ಬಿಟ್ಟು ಹೊರಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಆ ಪರಿಸ್ಥಿತಿ ಇಲ್ಲಿ ಆಗಬಾರದು. ಆ ದೃಷ್ಟಿಯಿಂದ ತಾವು ಕಾರ್ಯಕ್ರಮ ಕೈಗೊಳ್ಳಬೇಕು ಮತ್ತು ಫ್ಲೈ ಓವರ್ ಮಾಡುತ್ತೇವೆ. ಸಬ್ ವೇ ಮಾಡುತ್ತೇವೆ. ಇದೆಲ್ಲ it is always in the budget books and departmental notes ಹೇಳಿ ಎಷ್ಟು ಫ್ಲೈ ಓವರ್ ಮಾಡಿದ್ದೀರ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಕೆಲವು ಫ್ಲೈ ಓವರ್, ಕೆಲವು ಸಬ್ ವೇಸ್ ಮಾಡಬೇಕೆಂದು ತೆಗೆದುಕೊಂಡು ಡಿಸಿಷನ್ ಇನ್ನೂ ಫ್ಲೈ ಓವರ್ ಆಗಿಲ್ಲ ಸಬ್ ವೇಸ್ ಆಗಿಲ್ಲ if you want to solve the problem of Bangalore city, fly-overs and sub-ways are necessary. ತಾವು ಹೇಳಬಹುದು ಹಣ ಇಲ್ಲವೆಂದು I do agree ಕಾರ್ಪೊರೇಷನ್‌ನಲ್ಲಿ, ಸರ್ಕಾರದಲ್ಲಿ ಹಣ ಇಲ್ಲ I do under-stand. But construction of fly overs and sub-ways can be entrusted to private sector.

ನಾನು ಮಲೇಶಿಯಾಗೆ-ಹೋಗಿದ್ದೆ. ಅಲ್ಲಿ fly-overs and sub-ways have been done by the private sector ಒಂದು 20 ವರ್ಷ, 10 ವರ್ಷ ಕಾಲ they can toll. Let them collect the toll. Congestion of the traffic will be solved ನಿಮ್ಮ ಹಣ ಉಳಿದು ನಿಮ್ಮ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. Conservative ಈ ವಿಚಾರದಲ್ಲಿ ಹೆದರಬೇಕಾದ ಕಾರಣ ಇಲ್ಲ ನೀವು ಚಾಲೆಂಜ್ ಮಾಡಬಹುದು. ಏನು ಇವರು ಫ್ಲೈ ಓವರ್ ತೆಗೆದುಕೊಂಡಿದ್ದಾರೆ-

People of Bangalore will bless you. Try to throw it to the private sector wherever Government cannot spent money.

ಬಿ.ಡಿ.ಎ ತಮಗೆ ಬರುವುದಿಲ್ಲ ಎನಿಸುತ್ತದೆ. ಚೀಫ್ ಮಿನಿಸ್ಟರ್‌ಗೆ ಬರುತ್ತದೆ. ರಿಂಗ್ ರೋಡ್ ಯಾವಾಗ ಆಗಬೇಕಾಗಿತ್ತು. ಇವತ್ತು ರಿಂಗ್ ರೋಡ್ ಆದರೆ- the entire traffic problem of Bangalore city to a large extent will be solved ಈಗ ಟ್ರಕ್‌ಗಳು ಊರಿನೊಳಕ್ಕೆ ಬರುತ್ತಿದೆ 30 per cent 40 per cent ಇವತ್ತು ರಿಂಗ್ ರೋಡ್ ಬಗ್ಗೆ ಏನೂ ಪ್ರೊಗ್ರೆಸ್ ಇಲ್ಲ Ring road has not been done by the Bangalore Development Authority.

I do-understand-that the chairman-and Commissioner are very competent officers. They are very good officers. ಆಫೀಸರ್ಸ್ ಪೋಸ್ಟ್ ಮಾಡಿ ಏನಾಗುತ್ತದೆ. ರಿಂಗ್ ರೋಡ್ಸ್ ಕಂಪ್ಲೀಟ್ ಮಾಡುವುದಕ್ಕೆ ಏನು ಸಪೋರ್ಟ್-ಇದೆ ಬಿ.ಡಿ.ಎ ಗೆ BDA has only become a white a elephant nothing more than that 1988ನೇ ಇಸ್ವಿಯಲ್ಲಿ ನಾನು ಮಿನಿಸ್ಟರ್ ಇದ್ದಾಗ

ಕೆಲವು ಸೈಟ್ಸ್ ಕೊಡುತ್ತೇವೆಂದು ಅಡ್ವರ್ಟೈಸ್ ಮಾಡಿದ್ದೆವು. 5 ಸಾವಿರ ಸೈಟ್ಸ್‌ನ್ನು 1992ರಲ್ಲಿ ಕೊಟ್ಟಿದ್ದೇವೆ. ಇವೊತ್ತು ಬಿ.ಡಿ.ಎ.ಗೆ ಸೈಟು ಕೊಡುವ ಶಕ್ತಿ ಉಳಿದಿಲ್ಲ. BDA is surviving only on the sale of corner sites ತೆಗೆದು ನೋಡಿ ಕಡತವನ್ನು. ಕಾರ್ನ್‌ರ್ ಸೈಟು ಮಾಡಿ ಸಂಬಳ ಕೊಡುತ್ತಾರೆ. ಅದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕಾಗುತ್ತದೆ. You have to set right the activities of BDA ರಿಂಗ್ ರೋಡ್ ಇಮಿಡಿಯೇಟ್‌ಲೀ ಕಂಪ್ಲೀಟ್ ಆಗಬೇಕಾಗುತ್ತದೆ. ಅದೇ ಪ್ರಾಕಾರ ಮಾನ್ಯ ಸಚಿವರ ಗಮನಕ್ಕೆ ಮತ್ತೊಂದು ವಿಷಯ ತರುತ್ತೇನೆ. ಕೆಲವು ಲೇ ಔಟ್ಸ್ tanks and playgrounds, they are being encroached ಆದಕ್ಕೆ ತಾಯಿ ತಂದೆ ಇಲ್ಲ , ತಾಯಿಯವರೂ ಇಲ್ಲ, ತಂದೆಯವರೂ ಇಲ್ಲ they are being encroached. ಕಾರ್ಪೊರೇಷನ್ ಮೈಂಟೇನ್ ಮಾಡಲಿಕ್ಕೆ ಎಷ್ಟು ಸಾಧ್ಯ ಇದೆ ಮಾಡಿ, ಎಷ್ಟು ಬಿ.ಡಿ.ಎ ಮಾಡಲಿಕ್ಕೆ ಸಾಧ್ಯ ಇದೆ ಮಾಡಿ. ಇಲ್ಲ ಅಂದರೆ give it to the big companies, let them do it- - ಒಂದು ಅಡ್ವರ್ಟೈಸ್ ಮಾಡಿ ಒಂದು ಬೋರ್ಡ್ ಹಾಕಿಕೊಳ್ಳಲಿ let them develop ಜನರಿಗೆ ಒಂದು ಅನುಕೂಲವಾಗುತ್ತದೆ, ಸಣ್ಣ ಹುಡುಗರಿಗೆ ಅನುಕೂಲವಾಗುತ್ತದೆ why do you allow people to encroach the land ಹಾಗಾಗಿ ಹೆಚ್.ಯು.ಡಿ. ಇಲಾಖೆಯಲ್ಲಿ ಸಹ ಸಮಗ್ರವಾದ ಒಂದು ಚಿಂತನೆ ಆಗಬೇಕಾಗುತ್ತದೆ. ಮತ್ತು ಕಂದಾಯವನ್ನು ಕೊಡುತ್ತಾ ಇದ್ದೇನೆ ಏನೆಂದರೆ ಮುನಿಸಿಪಾಲಿಟಿ, ಕಾರ್ಪೊರೇಷನ್ ಆ್ಯಕ್ಟ್ ಏನು ಇದೆ ಇದು ಟೀ-ಥಲೆಸ್ ಆ್ಯಕ್ಟ್. Bombay Municipality Act was there. I - think the Hon'ble Minister for Revenue or Mr. Ghorpade will be knowing ನಾನು ಹೇಳುತ್ತಿರುವುದೇನೆಂದರೆ ಅವರು ಏನು ಎಲೆಕ್ಟ್ ಆಗಿ ಬರುತ್ತಾರೆ ಪ್ರೆಸಿಡೆಂಟ್ ಬಾಡಿಗೆ ಅವರಿಗೆ ಒಂದು ಅಧಿಕಾರ ಇತ್ತು, ಅಧಿಕಾರ ಚಲಾಯಿಸಲಿಕ್ಕೆ ಅಧಿಕಾರ ಇತ್ತು. ಇವೊತ್ತು ನಮ್ಮಲ್ಲಿ ಏನೊಂದು ಕರ್ನಾಟಕ ಮುನಿಸಿಪಾಲಿಟಿ ಆ್ಯಕ್ಟ್ ಇದೆ it is a teathless act. ಹಾಗಾಗೀ A comprehensive amendment to the Karnataka Municipalities Act and also the Corporation Act has to come. ಇದರ ಬಗ್ಗೆ ಸಾಕಷ್ಟು already a filew as built on that ಮಾಡಿ ಈ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳ ಬಗ್ಗೆಯೂ ಸಹ ತಾವು ಚಿಂತನೆ ಮಾಡಲಿಕ್ಕೆ ಯಾರು ಎಲೆಕ್ಟೆಡ್ ರೆಪ್ರೆಸೆಂಟೇಟೀವ್ ಇದ್ದಾರೆ their say should be there ಆ ಒಂದು ಮಾತು ಏನು ಹೇಳುತ್ತೇನೆ ಅದಕ್ಕೆ ಒಂದು ಗೌರವ ಬರಬೇಕು. ಆ ದೃಷ್ಟಿಯಿಂದ ಸಹ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ re-conveyance problem has become very serious. ಎಷ್ಟೋ ಜನಗಳಿಗೆ ರೀ-ಕನ್ವೇಯನ್ಸ್ ಮಾಡಿ ಕೊಟ್ಟರು but after the Supreme Court judgement, reconveyance has become a stand still affair. If this problem is solved, BDA will get crores of rupees. ಏನಾಗುತ್ತದೆ ಎಂದರೆ ಮುಖ್ಯಮಂತ್ರಿಗಳವರು ಮುಖ್ಯಮಂತ್ರಿಯಾಗಿ 3-4 ತಿಂಗಳಾಗಿದೆ ಹಾಗಾಗೀ ನಾ ಅವರ ಮೇಲೆ ಹೆಚ್ಚು ಟೀಕೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ. but resource mobilise ಮಾಡಲಿಕ್ಕೆ ಎಲ್ಲೆಲ್ಲಿ ಆ್ಯಕ್ಟ್ ಮಾಡಬೇಕೋ ಅಲ್ಲಲ್ಲಿ ಮಾಡುತ್ತಾ ಇಲ್ಲ. there are so many avenues open to the Government to tap the resources. ಹಾಗಾಗೀ ಇವೊತ್ತು ರೀ ಕನ್ವೇಯನ್ಸ್ ಸಮಸ್ಯೆ ಇವೊತ್ತು ಸಾಕಷ್ಟು ಜ್ವಲಂತ ಸಮಸ್ಯೆ ಇದೆ. ಇವೊತ್ತು ಬೆಂಗಳೂರಿನಲ್ಲಿ ಎಷ್ಟೊಂದು ಜನ ಪಾಪ ಸಾಕಷ್ಟು ಹಣ ಕೊಡಲಿಕ್ಕೆ ತಯಾರು ಇದ್ದಾರೆ. but after Supreme Court judgement, reconveyance has become standstill ಹಾಗಾಗಿ ಪ್ರಾಬ್ಲಮ್ ಸಾಲ್ವ್ ಆದರೆ ಆ

ಜನರ ಸಮಸ್ಯೆ ಮುಗಿದು, ಆ ಭಾಗದ ಡೆವಲಪ್‌ಮೆಂಟ್ ಕೂಡ ಆಗುತ್ತದೆ. BDA will get money in crores ಆ ದೃಷ್ಟಿಯಿಂದ ಸಹ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಸಹ ಇವೊತ್ತು ಹೇಳುತ್ತಾ ಇವೊತ್ತು ಈ ರೆವಿನ್ಯೂ ಇಲಾಖೆಯ ಬಗ್ಗೆಯೂ ನಾನು ಒಂದೇ ಒಂದು ಮಾತು ಹೇಳುತ್ತಿದ್ದೇನೆ. ಅದೇನೆಂದರೆ ಈ ನಾಡ ಕಚೇರಿಗಳು ತಾವು ಮಾಡಿದ್ದೀರಿ. ಆದರೆ ಈ ನಾಡ ಕಚೇರಿಗೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ನಮ್ಮ ಕಾಲದಲ್ಲಿ ಆಗಿತ್ತು. ಇವೊತ್ತು ನಾಡ ಕಚೇರಿಗಳು abolish ಆದರೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ನಾಡ ಕಚೇರಿಗಳಿಗೆ ನಾವು ಸರಿಯಾಗಿ ಸ್ಪಂದನ ಮಾಡಿದರೆ ಅದರಿಂದ ಜನರಿಗೆ ಉಪಯೋಗ ಇದೆ. ಅದಕ್ಕೆ ಸರಿಯಾಗಿ ಪವರ್ಸ್ ಕೊಡಬೇಕಾಗುತ್ತದೆ. ಸರಿಯಾಗಿ ಅವುಗಳನ್ನು ಸ್ಟ್ರೆಂಥನ್ ಮಾಡಬೇಕಾಗುತ್ತದೆ. power should be given. ಹಾಗಾಗೀ ಇವೊತ್ತು ನಮ್ಮ ಕಾಲದಲ್ಲಿ ಏನು ನಾಡ ಕಚೇರಿ ನಾವು ನಿರ್ಮಾಣ ಮಾಡಿದ್ದೇವೆ ಉದ್ದೇಶ ಇಷ್ಟೇ ಇತ್ತು administration should go to the doors of the villager ಎಂದು ಒಬ್ಬ ಬಡವ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೆ ಬಂದು ನಾಲ್ಕು ನಾಲ್ಕು ದಿನ ನಿಲ್ಲಬಾರದು, ಹೋಬಳಿ ಹೆಡ್‌ಕ್ವಾರ್ಟರ್ಸ್‌ದಲ್ಲಿಯೇ ಅವನ ಕೆಲಸ ಆಗಬೇಕು. ರೈತರಿಗೆ, ಬಡವರಿಗೆ ಅನುಕೂಲವಾಗಬೇಕು, ವಿಲೇಜರ್ಸ್‌ಗೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಮಾಡಿದ್ದೆ ವಿನಃ ಬೇರೆ ಯಾವ ಉದ್ದೇಶವೂ ಇರಲಿಲ್ಲ. ಹಾಗಾಗೀ ಆ ಉದ್ದೇಶ ಸಾಕಷ್ಟು ಕಡೆ ಸಫಲವಾಗಿದೆ. ಆದರೆ, ತಾವು ಇದಕ್ಕೆ ಹೆಚ್ಚಿನ ಮಹತ್ವ, ಶಕ್ತಿ ಕೊಟ್ಟು ನಾಡ ಕಛೇರಿಗಳನ್ನು ರದ್ದು ಮಾಡುವ ಕಾರ್ಯಕ್ರಮ ಹಾಕಿಕೊಳ್ಳಬಾರದು, ಅದನ್ನು ಇನ್ನೂ ಹೆಚ್ಚು ಬಲಯುತವಾಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತು ಶ್ರೀಮತಿ ಮನೋರಮಾ ಮಧ್ವರಾಜ್‌ರವರು ವಹಿಸಿಕೊಂಡಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಬಗ್ಗೆ ಹೇಳಬೇಕಾದರೆ ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಸಮಸ್ಯೆಯೇನಿದೆಯೆಂದರೆ, ಸರ್ಕಾರದಿಂದ ಬರುವ ಅಲೊಕೇಷನ್ ಬಹಳ ಕಡಿಮೆ ಇದೆ. ಸಕ್ಕರೆ ಬಗ್ಗೆ ಇವೊತ್ತು ರಾಜ್ಯದ ಜನಸಂಖ್ಯೆ ಏನಿದೆ, ಆ ಜನಸಂಖ್ಯೆಗನುಗುಣವಾಗಿ ಕೇಂದ್ರ ಸರ್ಕಾರದಿಂದ ಸಕ್ಕರೆ ಬರುತ್ತಿಲ್ಲ. ಪಾಮ್ ಆಯಿಲ್ ಸಹ ಬರುತ್ತಿಲ್ಲ. ಹಾಗಾಗಿ, ಇವೊತ್ತು ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ರಾಜ್ಯದ ಜನಸಂಖ್ಯೆ ಏನಿದೆ, ಅದಕ್ಕನುಗುಣವಾದ ಪ್ರಮಾಣದಲ್ಲಿ ಸಕ್ಕರೆ ವಿತರಿಸಲು ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ, ಬಡ ಜನರೇನಿದ್ದಾರೆ, ಅವರಿಗೆ ಈಗಾಗಲೇ ಒದಗಿಸಲಾಗಿದ್ದ ಹಸಿರು ಕಾರ್ಡುಗಳನ್ನು ಹಿಂತೆಗೆದುಕೊಂಡು ಫೋಟೋ ಹಾಕಿರುವ ಇನ್ನೊಂದು ಕಾರ್ಡು ಕೊಟ್ಟಿರಲ್ಲಾ, ಅದರ ಬಗ್ಗೆ ನಾನು ಹೆಚ್ಚು ಟೀಕೆ ಮಾಡುವುದಿಲ್ಲ, ಅದು ನಿಮಗೆ ಬಿಟ್ಟಿರುವ ವಿಷಯ, ಮಾಡಿಕೊಳ್ಳಿ. I have no regrets about it. ಬಡಜನರು ನಮ್ಮ ಹತ್ತಿರ ಬಂದು 'ನಮಗೆ ಕಾರ್ಡುಗಳು ಸಿಗಲಿಲ್ಲ'ವೆಂದು ಹೇಳಿದರು. ತಾವು ಕೆಎಫ್‌ಎಸ್‌ಸಿಎಸ್ (ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ) ಬಗ್ಗೆ ಮತ್ತೊಮ್ಮೆ ಫ್ರೆಷ್ ಸರ್ವೆ ಮಾಡಬೇಕು, ಯಾವ ಬಡ ಜನರಿಗೆ ಇದರಿಂದ ಅನುಕೂಲವಾಗಿಲ್ಲವೋ, ಅಂತಹವರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡಿ. ಒಂದು ಕಾರ್ಡು ವಿತರಿಸುವಲ್ಲಿ ತಪ್ಪಿದ್ದರೆ ಅದನ್ನು ರದ್ದುಪಡಿಸಿ, ಯಾವಾಗಲೂ ತಾವು ರಿಗ್ರೆಟ್ಸ್ ತೆಗೆದುಕೊಳ್ಳಬೇಡಿ, ಮತ್ತು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಇದೆಯಲ್ಲಾ you have to strengthen it still. ಸರಿಯಾದ ಮಾನಿಟರಿಂಗ್ ಬೇಕಾಗುತ್ತದೆ ಸರಿಯಾದ ವಿಜಿಲೆನ್ಸ್ ಬೇಕಾಗುತ್ತದೆ. ಆ ದೃಷ್ಟಿಯಿಂದ ಸಹ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಅನ್ನು ಬಲಪಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇನ್ನು ಮುಖ್ಯಮಂತ್ರಿಗಳು ವಹಿಸಿಕೊಂಡಿರುವ ಇಲಾಖೆಗಳ ಬಗ್ಗೆ, ಅದರಲ್ಲೂ ಅಬ್ಕಾರಿ ಬಗ್ಗೆ ಹೇಳಬೇಕಾದರೆ I don't feel the policy is consistent. ಸನ್ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಅಬ್ಕಾರಿ ನೀತಿ

ಒಂದಿತ್ತು, ಬಂಗಾರಪ್ಪನವರ ಕಾಲದಲ್ಲಿ ಇನ್ನೊಂದು ನೀತಿಯಾಯಿತು, ಈಗ ಶ್ರೀ ವೀರಪ್ಪ ಮೊಯಿಲಿಯವರು ಬಂದಾಗ ಮತ್ತೊಂದು ನೀತಿಯಾಗಿದೆ, ಇದು ಸರಿಯಲ್ಲ. ಎಕ್ಸೈಜ್‌ನಿಂದ ಸರಿಯಾದ ರೆವಿನ್ಯೂ ಜನರೇಟ್ ಆಗಬೇಕಾದರೆ ಒಂದು ರ್‍ಯಾಷನಲ್ ಕನ್‌ಸಿಸ್ಟೆಂಟ್ ಪಾಲಿಸಿ ಬೇಕು. ಈ ಕುರಿತು ಸದನದಲ್ಲಿ ಚರ್ಚೆಯಾಗಬೇಕಾಗಿದೆ. What is the Excise Policy of the Government. ಮೂರು ವರ್ಷಗಳಿಗೆ ಮೂವರು ಮುಖ್ಯಮಂತ್ರಿಗಳು ಬರುತ್ತಾರೆ, ಮೂರು ಅಬ್ಕಾರಿ ಬಗ್ಗೆ ಬೇರೆ ಬೇರೆ ನೀತಿಯನ್ನು ತೆಗೆದುಕೊಂಡು ಬರುತ್ತಾರೆ. ಒಬ್ಬರಿಗೊಬ್ಬರಿಗೆ ಪರಸ್ಪರ ವಿಶ್ವಾಸವಿಲ್ಲ. ವೀರೇಂದ್ರಪಾಟೀಲ್ ಏನು ಅಬ್ಕಾರಿ ನೀತಿ ಮಾಡಿದ್ದಾರೆ, ಅದರ ಬಗ್ಗೆ ಬಂಗಾರಪ್ಪನವರಿಗೆ ವಿಶ್ವಾಸವಿಲ್ಲ, ಬಂಗಾರಪ್ಪನವರು ಏನು ನೀತಿ ಮಾಡಿದ್ದಾರೆ, ಅದರ ಬಗ್ಗೆ ವೀರಪ್ಪ ಮೊಯಿಲಿಯವರಿಗೆ ವಿಶ್ವಾಸವಿಲ್ಲ. ಸನ್ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎಷ್ಟು ಆ್ಯಕ್ಟಿವ್ ಆಗಿದ್ದಾರೆ, ಒಂದು ಸಣ್ಣ ಟೀಕೆ ಮಾಡಿದರು ನಿಮಗೆ (ಹಾರ್ನಳ್ಳಿ ರಾಮಸ್ವಾಮಿ) ಸಹನೆಯಿಲ್ಲವಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಟೀಕೆ ಮಾಡುವುದಕ್ಕಲ್ಲ, ಇದನ್ನು ಮಾನ್ಯ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ನಾವು ಸಹ ಉತ್ತರ ಕೊಟ್ಟಿದ್ದೇವೆ. ನಾಯಕರು ಯಾರೇ ಆದರೂ ಪಕ್ಷ ಒಂದೇ ಇರುತ್ತದೆ, ನೀತಿಯೂ ಒಂದೇ ಇರುತ್ತದೆ, ಎಲ್ಲಾ ಮಾಡಿಕೊಂಡು ಬರುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಇಂಟ್ರಾಸ್ಪೆಕ್ಷನ್ ಮಾಡತಕ್ಕಂಥಾದ್ದು ಒಂದು ಪವಿತ್ರವಾದಂಥ ಕರ್ತವ್ಯವಾಗಿದೆ. ಏನೇ ತಪ್ಪು ಮಾಡಿದರೂ ಕೂಡ ಅದನ್ನು ತಿದ್ದಿಕೊಳ್ಳುವುದಕ್ಕೆ ನಮ್ಮ ಮನಸ್ಸಿನಲ್ಲಿ ನಾವೇ ಯೋಚನೆ ಮಾಡಿಕೊಂಡು ತಿದ್ದಿಕೊಳ್ಳುತ್ತೇವೆ. ಫ್ಲೆಕ್ಸಿಬಿಲಿಟಿ ಎನ್ನುವುದು ಪ್ರಜಾಪ್ರಭುತ್ವದಲ್ಲಿ ಇರಬೇಕಾದಂಥ ಬಹಳ ಮುಖ್ಯವಾದಂಥ ಗುಣವಾಗಿದೆ, ಅದು ನಮ್ಮಲ್ಲಿದೆ. ಆದುದರಿಂದ, ನಮ್ಮನ್ನು ನೀವು ಅಪ್ರಿಷಿಯೇಟ್ ಮಾಡದೆ ಟೀಕೆ ಮಾಡುತ್ತೀರಲ್ಲಾ.

ಶ್ರೀ ಸಿ. ಭೈರೇಗೌಡ:- ನೀವು ಇಂಟ್ರಾಸ್ಪೆಕ್ಷನ್ ಎಂದು ಹೇಳಿದ್ದರ ಬಗ್ಗೆ ನನಗೆ ಬಹಳ ಚೆನ್ನಾಗಿ ಜ್ಞಾಪಕಕ್ಕೆ ಬಂತು. 'ಇಂಟ್ರಾಸ್ಪೆಕ್ಷನ್' ಎನ್ನತಕ್ಕಂಥ ಪದ ಉಪಯೋಗಿಸಿದ್ದರಲ್ಲಾ, ಅದೇ ತಾವು ಮೆಮೊರ್‍ಯಾಂಡಮ್ ಅನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೀರಿ ನೋಡಿ, ನಿಮ್ಮ ಇಂಟ್ರಾಸ್ಪೆಕ್ಷನ್ ಅದೇ ತಾನೇ !

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅದರ ವಿಷಯವಾಗಿ ನಾನು ಎತ್ತುವುದಿಲ್ಲ, ತಾವೂ ಎತ್ತಬೇಡಿ. ಏಕೆಂದರೆ, ತಮ್ಮ ಮುಂದೆ ನಾನು ನಿಮ್ಮ ವಿಚಾರ ಎತ್ತುವುದು ಸರಿಯಲ್ಲ, ನಮ್ಮ ತಪ್ಪುಗಳೇನಾದರೂ ಇದ್ದರೆ

ಶ್ರೀ ಸಿ. ಭೈರೇಗೌಡ :- ಆ ಆಕಾರ ಕೂಡ ತಾವೇ ಎನ್ನತಕ್ಕಂಥಾದ್ದು ನಮಗೆ ತಿಳಿದಿದೆ, ಅದರಲ್ಲಿ ಬರೆದಿರತಕ್ಕಂಥ ಪದ ಇದೆಯಲ್ಲಾ, ಅದು ಕೂಡ ನಿಮ್ಮದೇ ಎಂದು ನಾವು ತಿಳಿದುಕೊಂಡಿದ್ದೇವೆ. ಇಂಟ್ರಾಸ್ಪೆಕ್ಷನ್ ತೆಗೆದುಕೊಂಡು ಹೋಗಿ ಅಲ್ಲಿ ಕೊಟ್ಟಿದ್ದೀರಲ್ಲಾ ಅದಕ್ಕೆ ಧನ್ಯವಾದಗಳು. ನೀವು ಕೊಟ್ಟಿರತಕ್ಕಂಥ ಇಂಟ್ರಾಸ್ಪೆಕ್ಷನ್‌ನಲ್ಲಿ ಏನು ಹೇಳಿದ್ದೀರಿ, ಅದರಲ್ಲಿ ಶೇಕಡಾ ಒಂದರಷ್ಟು ಜಾರಿಗೆ ತನ್ನಿ ಸಾಕು, ಇನ್ನೇನೂ ಬೇಕಾಗಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಎಲ್ಲವನ್ನೂ ಜಾರಿಗೆ ತರುತ್ತೇವೆ. 'ನಮ್ಮ ತಪ್ಪುಗಳು ಏನೇನಿವೆ, ಅದನ್ನು ತಿದ್ದುಕೊಳ್ಳೋಣ' ಎಂದು ಕಮ್ಯುನಿಸ್ಟ್ ಪಕ್ಷದಲ್ಲಿ ಪದೇ ಪದೇ ಇಂಟ್ರಾಸ್ಪೆಕ್ಷನ್ ಮಾಡುತ್ತಾರೆ. ಅದೇ ರೀತಿ ಎಲ್ಲಾ ಪಕ್ಷಗಳೂ ಮಾಡಬೇಕು. ಆ ಪಕ್ಷಗಳು ಇಂಟ್ರಾಸ್ಪೆಕ್ಷನ್ ಮಾಡುತ್ತಿಲ್ಲ, ನಾವು ಮಾಡುತ್ತಿದ್ದೇವೆ, ಆದುದರಿಂದ, ನಮಗೆ ಸ್ವಲ್ಪ ಶಹಬಾಷ್‌ಗಿರಿ ಕೊಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಇದೇ ರೀತಿ ಮಾಡುತ್ತಾ ಹೋದರೆ, ಮನೆಗೆ ಬೇಗ ಹೋಗುತ್ತೀರಿ. In the interest of the State ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ, ನೀವೇನು ಮಾಡಿದ್ದೀರಿ?

ಒಂದಿತ್ತು, ಬಂಗಾರಪ್ಪನವರ ಕಾಲದಲ್ಲಿ ಇನ್ನೊಂದು ನೀತಿಯಾಯಿತು, ಈಗ ಶ್ರೀ ವೀರಪ್ಪ ಮೊಯಿಲಿಯವರು ಬಂದಾಗ ಮತ್ತೊಂದು ನೀತಿಯಾಗಿದೆ, ಇದು ಸರಿಯಲ್ಲ. ಎಕ್ಸೈಜ್‌ನಿಂದ ಸರಿಯಾದ ರೆವಿನ್ಯೂ ಜನರೇಟ್ ಆಗಬೇಕಾದರೆ ಒಂದು ರ್‍ಯಾಷನಲ್ ಕನ್‌ಸಿಸ್ಟೆಂಟ್ ಪಾಲಿಸಿ ಬೇಕು. ಈ ಕುರಿತು ಸದನದಲ್ಲಿ ಚರ್ಚೆಯಾಗಬೇಕಾಗಿದೆ. What is the Excise Policy of the Government. ಮೂರು ವರ್ಷಗಳಿಗೆ ಮೂವರು ಮುಖ್ಯಮಂತ್ರಿಗಳು ಬರುತ್ತಾರೆ, ಮೂರು ಅಬ್ಕಾರಿ ಬಗ್ಗೆ ಬೇರೆ ಬೇರೆ ನೀತಿಯನ್ನು ತೆಗೆದುಕೊಂಡು ಬರುತ್ತಾರೆ. ಒಬ್ಬರಿಗೊಬ್ಬರಿಗೆ ಪರಸ್ಪರ ವಿಶ್ವಾಸವಿಲ್ಲ. ವೀರೇಂದ್ರಪಾಟೀಲ್ ಏನು ಅಬ್ಕಾರಿ ನೀತಿ ಮಾಡಿದ್ದಾರೆ, ಅದರ ಬಗ್ಗೆ ಬಂಗಾರಪ್ಪನವರಿಗೆ ವಿಶ್ವಾಸವಿಲ್ಲ, ಬಂಗಾರಪ್ಪನವರು ಏನು ನೀತಿ ಮಾಡಿದ್ದಾರೆ, ಅದರ ಬಗ್ಗೆ ವೀರಪ್ಪ ಮೊಯಿಲಿಯವರಿಗೆ ವಿಶ್ವಾಸವಿಲ್ಲ. ಸನ್ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎಷ್ಟು ಆ್ಯಕ್ಟಿವ್ ಆಗಿದ್ದಾರೆ, ಒಂದು ಸಣ್ಣ ಟೀಕೆ ಮಾಡಿದರು ನಿಮಗೆ (ಹಾರ್ನಳ್ಳಿ ರಾಮಸ್ವಾಮಿ) ಸಹನೆಯಿಲ್ಲವಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಟೀಕೆ ಮಾಡುವುದಕ್ಕಲ್ಲ, ಇದನ್ನು ಮಾನ್ಯ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ನಾವು ಸಹ ಉತ್ತರ ಕೊಟ್ಟಿದ್ದೇವೆ. ನಾಯಕರು ಯಾರೇ ಆದರೂ ಪಕ್ಷ ಒಂದೇ ಇರುತ್ತದೆ, ನೀತಿಯೂ ಒಂದೇ ಇರುತ್ತದೆ, ಎಲ್ಲಾ ಮಾಡಿಕೊಂಡು ಬರುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಇಂಟ್ರಾಸ್ಪೆಕ್ಷನ್ ಮಾಡತಕ್ಕಂಥಾದ್ದು ಒಂದು ಪವಿತ್ರವಾದಂಥ ಕರ್ತವ್ಯವಾಗಿದೆ. ಏನೇ ತಪ್ಪು ಮಾಡಿದರೂ ಕೂಡ ಅದನ್ನು ತಿದ್ದಿಕೊಳ್ಳುವುದಕ್ಕೆ ನಮ್ಮ ಮನಸ್ಸಿನಲ್ಲಿ ನಾವೇ ಯೋಚನೆ ಮಾಡಿಕೊಂಡು ತಿದ್ದಿಕೊಳ್ಳುತ್ತೇವೆ. ಫ್ಲೆಕ್ಸಿಬಿಲಿಟಿ ಎನ್ನುವುದು ಪ್ರಜಾಪ್ರಭುತ್ವದಲ್ಲಿ ಇರಬೇಕಾದಂಥ ಬಹಳ ಮುಖ್ಯವಾದಂಥ ಗುಣವಾಗಿದೆ, ಅದು ನಮ್ಮಲ್ಲಿದೆ. ಆದುದರಿಂದ, ನಮ್ಮನ್ನು ನೀವು ಅಪ್ರಿಷಿಯೇಟ್ ಮಾಡದೆ ಟೀಕೆ ಮಾಡುತ್ತೀರಲ್ಲಾ.

ಶ್ರೀ ಸಿ. ಭೈರೇಗೌಡ:- ನೀವು ಇಂಟ್ರಾಸ್ಪೆಕ್ಷನ್ ಎಂದು ಹೇಳಿದ್ದರ ಬಗ್ಗೆ ನನಗೆ ಬಹಳ ಚೆನ್ನಾಗಿ ಜ್ಞಾಪಕಕ್ಕೆ ಬಂತು. 'ಇಂಟ್ರಾಸ್ಪೆಕ್ಷನ್' ಎನ್ನತಕ್ಕಂಥ ಪದ ಉಪಯೋಗಿಸಿದ್ದರಲ್ಲಾ, ಅದೇ ತಾವು ಮೆಮೊರ್‍ಯಾಂಡಮ್ ಅನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದೀರಿ ನೋಡಿ, ನಿಮ್ಮ ಇಂಟ್ರಾಸ್ಪೆಕ್ಷನ್ ಅದೇ ತಾನೇ!

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅದರ ವಿಷಯವಾಗಿ ನಾನು ಎತ್ತುವುದಿಲ್ಲ, ತಾವೂ ಎತ್ತಬೇಡಿ. ಏಕೆಂದರೆ, ತಮ್ಮ ಮುಂದೆ ನಾನು ನಿಮ್ಮ ವಿಚಾರ ಎತ್ತುವುದು ಸರಿಯಲ್ಲ, ನಮ್ಮ ತಪ್ಪುಗಳೇನಾದರೂ ಇದ್ದರೆ

ಶ್ರೀ ಸಿ. ಭೈರೇಗೌಡ :- ಆ ಆಕಾರ ಕೂಡ ತಾವೇ ಎನ್ನತಕ್ಕಂಥಾದ್ದು ನಮಗೆ ತಿಳಿದಿದೆ, ಅದರಲ್ಲಿ ಬರೆದಿರತಕ್ಕಂಥ ಪದ ಇದೆಯಲ್ಲಾ, ಅದು ಕೂಡ ನಿಮ್ಮದೇ ಎಂದು ನಾವು ತಿಳಿದುಕೊಂಡಿದ್ದೇವೆ. ಇಂಟ್ರಾಸ್ಪೆಕ್ಷನ್ ತೆಗೆದುಕೊಂಡು ಹೋಗಿ ಅಲ್ಲಿ ಕೊಟ್ಟಿದ್ದೀರಲ್ಲಾ ಅದಕ್ಕೆ ಧನ್ಯವಾದಗಳು. ನೀವು ಕೊಟ್ಟಿರತಕ್ಕಂಥ ಇಂಟ್ರಾಸ್ಪೆಕ್ಷನ್‌ನಲ್ಲಿ ಏನು ಹೇಳಿದ್ದೀರಿ, ಅದರಲ್ಲಿ ಶೇಕಡಾ ಒಂದರಷ್ಟು ಜಾರಿಗೆ ತನ್ನಿ ಸಾಕು, ಇನ್ನೇನೂ ಬೇಕಾಗಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಎಲ್ಲವನ್ನೂ ಜಾರಿಗೆ ತರುತ್ತೇವೆ. 'ನಮ್ಮ ತಪ್ಪುಗಳು ಏನೇನಿವೆ, ಅದನ್ನು ತಿದ್ದುಕೊಳ್ಳೋಣ' ಎಂದು ಕಮ್ಯುನಿಸ್ಟ್ ಪಕ್ಷದಲ್ಲಿ ಪದೇ ಪದೇ ಇಂಟ್ರಾಸ್ಪೆಕ್ಷನ್ ಮಾಡುತ್ತಾರೆ. ಅದೇ ರೀತಿ ಎಲ್ಲಾ ಪಕ್ಷಗಳೂ ಮಾಡಬೇಕು. ಆ ಪಕ್ಷಗಳು ಇಂಟ್ರಾಸ್ಪೆಕ್ಷನ್ ಮಾಡುತ್ತಿಲ್ಲ, ನಾವು ಮಾಡುತ್ತಿದ್ದೇವೆ, ಆದುದರಿಂದ, ನಮಗೆ ಸ್ವಲ್ಪ ಶಹಬಾಷ್‌ಗಿರಿ ಕೊಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಇದೇ ರೀತಿ ಮಾಡುತ್ತಾ ಹೋದರೆ, ಮನೆಗೆ ಬೇಗ ಹೋಗುತ್ತೀರಿ. In the interest of the State ಮಾಡಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ, ನೀವೇನು ಮಾಡಿದ್ದೀರಿ?

ಮಟ್ಟದಲ್ಲಿ, ಗ್ರಾಮ ಆಗಲಿ, ತಾಲ್ಲೂಕು ಆಗಲಿ ಜಿಲ್ಲೆಯಲ್ಲಿ ಆಗಲಿ. ಯಾವ ಜವಾಬ್ದಾರಿ ಅವರು ಮಾಡಲಿಕ್ಕೆ ಸಾಧ್ಯ, ಅಷ್ಟು ಜವಾಬ್ದಾರಿಗಳನ್ನು ನಾವು ಕೊಡಬೇಕು. ವಿಕೇಂದ್ರೀಕರಣ ಜಾಸ್ತಿ ಮಾಡಬೇಕು, ಕಡಿಮೆ ಮಾಡಬಾರದು ಎಂಬುದೇ ನಮ್ಮ ಸ್ಪಷ್ಟವಾದ ಅಭಿಪ್ರಾಯ.

ಶ್ರೀ ಹೆಚ್.ಏಕಾಂತಯ್ಯ:- ತಮ್ಮ ಸ್ವಂತವಾದ ಅಭಿಪ್ರಾಯ ಏನೇ ಆಗಿದ್ದರೂ ಸಹ ಸರ್ಕಾರ ತನ್ನ ನಡವಳಿಕೆ ರೂಪದಲ್ಲಿ ಈಗಾಗಲೇ ಕೊಟ್ಟಿದ್ದಂತಹ ಅಧಿಕಾರವನ್ನು ವಾಪಸ್ ತೆಗೆದುಕೊಂಡಿದೆ. ಅದಕ್ಕೆ ಅವರ ಆಕ್ಷೇಪ ಅಷ್ಟೇ.

ಶ್ರೀ ಆರ್.ವಿ.ದೇಶಪಾಂಡೆ:-ಕ್ರಮೇಣ ಏನು ಆಗುತ್ತದೆ ಉದಾಹರಣೆ ಕೊಡುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ:- Our cardinal principle is, whatever can be done at a particular level that should be done at that level.

ಇದು ಕಾರ್ಡಿನಲ್ ಪ್ರಿನ್ಸಿಪಲ್. ಈ ಪ್ರಿನ್ಸಿಪಲ್ ಪ್ರಕಾರ ನೀವು ಎಷ್ಟೇ ಟೀಕೆ ಮಾಡುವುದಾದರೆ ಅಷ್ಟು ಟೀಕೆಗಳನ್ನು ಕೇಳುವುದಕ್ಕೆ ನಾನು ತಯಾರಾಗಿದ್ದೇನೆ. ನಮ್ಮಿಂದ ಈ ದಿಸೆಯಲ್ಲಿ ತಪ್ಪುಆಗಿದ್ದರೆ ಉದಾಹರಣೆಗೆ ನಾವು ಯಾವುದೋ ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಆದನ್ನು ಏನಾದರೂ ನಾವು ಜಿಲ್ಲಾ ಮಟ್ಟಕ್ಕೆ ಕೊಟ್ಟಿದ್ದರೆ ತಾವು ಹೇಳಿ. ಜಿಲ್ಲಾ ಮಟ್ಟಕ್ಕೆ ಕೊಡಬೇಕಾದ್ದು ಇಲ್ಲ, ತಾಲ್ಲೂಕು ಮಟ್ಟಕ್ಕೆ ಮಾಡಿ ಎಂದು.

ಯಾವುದು ತಾಲ್ಲೂಕು ಮಟ್ಟದಲ್ಲಿ ಸಾಧ್ಯ ಅಥವಾ ಹಳ್ಳಿ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಆದರೆ ಅದನ್ನು ನೀವು ತಾಲ್ಲೂಕು ಮಟ್ಟದಲ್ಲಿ ಮಾಡುತ್ತಾ ಇದ್ದೀರಿ ದಯಮಾಡಿ ಟೀಕೆ ಮಾಡಿ. ತಾಲ್ಲೂಕು ಮಟ್ಟದಲ್ಲಿ ಮಾಡಬೇಕಾದ್ದು ಇಲ್ಲ, ಹಳ್ಳಿ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿ. This type of criticism I welcome. Any activity which can be done at a particular level is unnecessarily done at a higher level. We are prepared to set it right.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವುದೇನೆಂದರೆ, ಕೊಟ್ಟಿರತಕ್ಕಂಥ ಅಧಿಕಾರವನ್ನು ಸರ್ಕಾರ ಹಂತ ಹಂತವಾಗಿ ಕಿತ್ತುಕೊಳ್ಳುತ್ತಿದೆಯೆಂದು, ಈ ಸದನದಲ್ಲಿ ಇನ್ನೊಂದು ಸಲ ಪ್ರಸ್ತಾಪವಾಗಿದೆ. ಹಿಂದಿನ ಸರ್ಕಾರದಲ್ಲಿ ಶ್ರೀಮಾನ್ ದೇಶಪಾಂಡೆಯವರಿದ್ದಂಥ ಕಾಲದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದಿತು. ಮತ್ತು ಅದಕ್ಕೆ ಕಾನೂನು ಮಾಡುವ ಕಾಲದಲ್ಲೂ ಕೂಡಿ ಅವರು ಸಕ್ರಿಯ ಪಾತ್ರವನ್ನು ವಹಿಸಿದಂಥವರು. ಅವರಿಗೆ ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ಏನೆಂದರೆ, ಆ ಶಾಸನದಲ್ಲಿ ಸ್ಪಷ್ಟವಾಗಿದೆ. ಅವರಿಗೆ ಕೊಟ್ಟಂಥ ಯಾವುದಾದರೂ ಅಧಿಕಾರವನ್ನು ಕಾರ್ಯಕ್ರಮವನ್ನು ವಾಪಸ್ಸು ಪಡೆಯುವುದಕ್ಕೆ ಸಂಪೂರ್ಣವಾದ ಪರಮಾಧಿಕಾರವನ್ನು ಈ ಶಾಸನಸಭೆಯು ಶಾಸನದ ಮೂಲಕ ಸರ್ಕಾರ ಅವರಿಗೆ ಕೊಟ್ಟಿದೆ. ಆ ರೀತಿ ಕೊಟ್ಟಂಥ ಪರಮಾಧಿಕಾರವನ್ನು ಒಂದು ವೇಳೆ ಸರ್ಕಾರವೇ ಚಲಾಯಿಸಿ ವಾಪಸ್ಸು ಪಡೆಯುವುದಾಗಲಿ ಅಥವಾ ಹೊಸ ಅಧಿಕಾರವನ್ನು ಅವರಿಗೆ ಕೊಡುವುದಾಗಲಿ ಮಾಡಿದರೆ ಶಾಸನದ ವ್ಯಾಪ್ತಿಯಲ್ಲಿ ಮಾಡಿದಂತಾಗುತ್ತದಲ್ಲ. ಆಗ ಇದರಲ್ಲಿ ತಪ್ಪನ್ನು ಹೇಗೆ ಕಂಡುಹಿಡಿಯುತ್ತೀರಿ?

ಶ್ರೀ ಎಚ್.ಏಕಾಂತಯ್ಯ:- ಸನ್ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾನೇ ಉತ್ತರ ಕೊಡುತ್ತೇನೆ. ನಾವು ಹೇಳಿದ್ದು ಅದಲ್ಲ. ತಮ್ಮ ಘೋಷಿತ ನೀತಿ ಏನಿದೆಯೆಂದರೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚೆಚ್ಚು ಸ್ವಯಮಾಧಿಕಾರವನ್ನು ಕೊಡಬೇಕೆಂದು ತಾವು ಸಂವಿಧಾನದ ಪಟ್ಟಿಯಲ್ಲಿ ಹೇಳಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ದೇಶಪಾಂಡೆಯವರು ಏನು ಹೇಳಿದರೆಂದರೆ, ಕಾರ್ಯಕ್ರಮಗಳನ್ನು ಮಾಡುವುದಕ್ಕೆ

ಜಿಲ್ಲಾ ಪರಿಷತ್ತುಗಳಿಗೆ ಏನು ಅಧಿಕಾರವನ್ನು ನೀವು ಕೊಟ್ಟಿದ್ದೀರಿ, ಅದನ್ನು ಹಂತ ಹಂತವಾಗಿ ವಾಪಸ್ಸು ಪಡೆಯುತ್ತಿದ್ದೀರೆಂದು. ಆ ಕಾನೂನಿನಲ್ಲಿ ಒಂದು ಅಧಿಕಾರದ ಅವಕಾಶವಿದೆ.

ಶ್ರೀ ಎಚ್.ಏಕಾಂತಯ್ಯ :- ನೀವು ನಿಮ್ಮ ನೀತಿಗೆ ವಿರುದ್ಧವಾಗಿ ತೆಗೆದುಕೊಳ್ಳ ಬೇಕಾಗಿಲ್ಲ, ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗಿತ್ತೆಂದು ಅವರ ಅನಿಸಿಕೆ.

ಶ್ರೀ ಕಾಗೋಡು ತಿಮ್ಮಪ್ಪ:- List of duties ...ಇದೆಯೆಲ್ಲಾ, ಅದಕ್ಕೆ ಕೊನೆಗೊಂಡು ಪರ್ಯಾಯವಿದೆ. ಯಾವುದಾದರೂ ಕಾರ್ಯಕ್ರಮವನ್ನು ಸರ್ಕಾರದಲ್ಲಿರುವವರು ವಾಪಸ್ಸು ಪಡೆಯಬೇಕೆಂದಿದೆ, ಅದರ ಪ್ರಕಾರ ಒಂದು ವೇಳೆ ಪಡೆದರೆ, ಈ ಶಾಸನ ಸಭೆ ಕೊಟ್ಟಂಥ ಕೊನೆಯ ಪರಮಾಧಿಕಾರವನ್ನು ಉಪಯೋಗಿಸಿ ಕೊಳ್ಳದಂತಾಗುತ್ತದೆ.

ಶ್ರೀ ಎಂ.ವೈ.ಘೋರ್ಪಡೆ:- ಯಾವುದೇ ಅಧಿಕಾರವನ್ನು ಸಂಪೂರ್ಣ ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರವಿದ್ದರೂ ಸಹ ನಾವು ಆ ರೀತಿ ಏನಾದರೂ ಮಾಡಿದ್ದರೆ ಅಥವಾ ನೀವೇನಾದರೂ ವಾದ ಮಾಡಿ ನಾವು ಒಂದು ಕಾರ್ಯಕ್ರಮವಾಗಲಿ ಅಥವಾ ಎಕಾನಮಿಕ್ ಆ್ಯಕ್ಟಿವಿಟಿಯಾಗಲಿ ಈ ಹಂತದಲ್ಲಿ ಮಾಡುವುದು ಸರಿಯೆಂದು, ಬೇರೆ ಹಂತದಲ್ಲಿ ಮಾಡುವುದು ಸರಿಯಲ್ಲವೆಂದು ನೀವು ಹೇಳುವುದಾದರೆ ಆ ಟೀಕೆಗೆ ನಾವು ಸಂಪೂರ್ಣ ಗಮನ ಕೊಟ್ಟು, ಎಷ್ಟು ವಿಕೇಂದ್ರಿ ಕರಣ ಮುಂದುವರಿಸುವುದಕ್ಕೆ ಸಾಧ್ಯವೊ ಅಷ್ಟನ್ನು ಮಾಡುವುದಕ್ಕೆ ಈ ಸರ್ಕಾರ ಸಿದ್ಧವಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ:- ನಿಮಗೆ ಕಮಿಟ್‌ಮೆಂಟ್ ಇದೆಯೆಂದು ನಾನು ಹೇಳಿದೆ. ನನಗೆ ಅದು ಗೊತ್ತಿದೆ. ನಾನು ಇಷ್ಟೆ ನಿಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಹೈಸ್ಕೂಲುಗಳನ್ನು ಮಂಜೂರು ಮಾಡುವ ಅಧಿಕಾರ ಜಿಲ್ಲಾ ಪರಿಷತ್ತಿಗಿದೆ. ಜಿಲ್ಲಾ ಪರಿಷತ್‌ನವರು ಮಂಜೂರು ಮಾಡುವುದನ್ನು ಬಿಟ್ಟು ನಾವು ಬೆಂಗಳೂರಿನಲ್ಲಿ ಮಂಜೂರು ಮಾಡಿದ್ದೇವೆ. Let us be frank. ಅವರೇನು ಮಾಡಿದ್ದಾರೆ, ನಾವೇನು ಮಾಡಿದ್ದೇವೆ, ಅದನ್ನು ರದ್ದುಪಡಿಸಿ ನಾವು ಇಲ್ಲಿಮಾಡಿದ್ದೇವೆ. ಹಾಗಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ನಿಜವಾಗಿಯೂ ಈ ಒಂದು ಸಂಸ್ಥೆ ಬಗ್ಗೆ ನಿಮಗೆ ವಿಶ್ವಾಸವಿದ್ದರೆ, ಅವರಿಗೆ ಏನು ಅಧಿಕಾರ ಕೊಟ್ಟಿದ್ದೇವೆ, ಅದನ್ನು ಬೇರೆ ಮಾರ್ಗದಿಂದ ವಾಪಸ್ಸು ತೆಗೆದುಕೊಳ್ಳುವುದು ಸಣ್ಣತನವಲ್ಲ. ತಾವೇನು ಹೇಳಿದಿರಿ I am happy about that. --- ಈಗ ಮಾನ್ಯ ಮುಖ್ಯಮಂತ್ರಿಗಳು ವಿಧಾನಸೌಧಕ್ಕೆ ಮೇಲ್ಮಟ್ಟದಲ್ಲಿ ಕೆಲವು ಒಳ್ಳೆಯ ಅಧಿಕಾರಿಗಳನ್ನು ತರುವ ಪ್ರಯತ್ನ ಮಾಡಿದರು. ಹಾಗೆ ಅಧಿಕಾರಿಗಳನ್ನು ತೆಗೆದುಕೊಂಡು ನಂತರ ಆಡಳಿತ ಬಹಳ ಚೆನ್ನಾಗಿ ನಡೆಯುತ್ತದೆಂದು ತಿಳಿದುಕೊಂಡರೆ that is his foolishness. --- ಇವೊತ್ತು corruption has gone to the bottom level. --- ಕರಪ್ಷನ್ ಕೆಳಮಟ್ಟಕ್ಕೆ ಏನು ಹೋಗಿದೆ, ಮತ್ತು ಮೇಲ್ಮಟ್ಟದಲ್ಲಿ ಏನಿದೆ, ಅದನ್ನು ರಿಮೂವಲ್ ಮಾಡಲು ನಿಮ್ಮ ಕಾರ್ಯಕ್ರಮವೇನು? ವಿಧಾನಸೌಧದಲ್ಲಿ ಕೆಲವು ಒಳ್ಳೆಯ ಅಧಿಕಾರಿಗಳನ್ನು ತಂದಿಟ್ಟರೆ ನಿಮ್ಮ ಕಾರ್ಯಕ್ರಮಗಳೆಲ್ಲವೂ ಅನುಷ್ಠಾನವಾಗುತ್ತದೆಂದು ತಾವು ತಿಳಿದು ಕೊಳ್ಳಬಾರದು. ಮತ್ತೊಂದು ಮಾತು ಹೇಳುತ್ತೇನೆ: ಬ್ಯುರೋಕ್ರಸಿ ರಾಜ್ಯವನ್ನು ಮಾಡುವುದಕ್ಕೆ ಹೋಗಬೇಡಿ. ಮುಖ್ಯ ಮಂತ್ರಿಗಳು ಏನೇ ಹೇಳಿದರೂ ಅದನ್ನು ಬ್ಯುರೋಕ್ರಸಿಯವರು ಅನುಷ್ಠಾನಗೊಳಿಸುತ್ತಿಲ್ಲ. ಇದು ಬ್ಯುರೋಕ್ರಸಿ ರಾಜ್ಯವಾಗಬಾರದು. ಅವರಿಗೆ ಮಂತ್ರಿಗಳ ಬಗ್ಗೆಯೂ ಸ್ವಲ್ಪ ಗೌರವವಿರಬೇಕು.

ಶ್ರೀ ಆರ್.ಎಲ್.ಜಾಲಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರು 'ಲಂಚ ಬಹಳ ಕೆಳಮಟ್ಟಕ್ಕೆ

ಹೋಗಿದೆಯೆಂದು ಅದನ್ನು ರಿವ್ಯೂ ಮಾಡುವುದಕ್ಕೆ ನಿಮ್ಮ ಕಾರ್ಯಕ್ರಮವೇನು?' ಎಂದು ಕೇಳಿದರು. ಅಂದರೆ, ಯಾರ್‍ಯಾರು ಎಷ್ಟೆಷ್ಟು ಲಂಚ ತೆಗೆದುಕೊಳ್ಳುತ್ತಾರೆನ್ನುವುದನ್ನು ರಿವ್ಯೂ ಮಾಡುವುದೇ?

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಸದಸ್ಯರು ಸರಿಯಾಗಿ ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ನಾನು ಹೇಳಿದ್ದು ' ರಿಮೂವಲ್' ಎಂದು. ಅವರಿಗೆ ವಯಸ್ಸಾಗಿರುವುದೇ ಸಮಸ್ಯೆಯಾಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಇವೊತ್ತು ನಿಮ್ಮ ಕಾರ್ಯಕ್ರಮವೇನು? ಮಂತ್ರಿಗಳು ಹೇಳಿದ ಮಾತುಗಳನ್ನು ಬ್ಯುರೊಕ್ರಸಿಯವರು ಕೇಳಲಿಲ್ಲವೆಂದರೆ ಮಂತ್ರಿಗಳಾದವರು ಏಕಿರಬೇಕು? ಒಂದು ವೇಳೆ ಅವರನ್ನು ಹತೋಟಿಯಲ್ಲಿಡುವ ಶಕ್ತಿ ನಿಮಗಿರಬೇಕು ಅಥವಾ ನೀವು ಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳಬಾರದು ಅಥವಾ ಬ್ಯುರೊಕ್ರಸಿಯಿಂದ ಹೇಳಬೇಕು, ನಾನು ಹೋಗುತ್ತೇನೆಂದು ಹೇಳಬೇಕು. ಇವೊತ್ತು ಏನಾಗುತ್ತಿದೆಯೆಂದರೆ, ಬ್ಯುರೊಕ್ರಸಿಗೆ ಹೆಚ್ಚಿನ ಮಹತ್ವವನ್ನು ನಿಮ್ಮ ಸರ್ಕಾರ ಕೊಡುತ್ತಿರುವುದು ಕಂಡುಬರುತ್ತಿದೆ. It is not correct. It is a dangerous step. ಅದರ ಅರ್ಥ ಬ್ಯುರೊಕ್ರಸಿ ಕೊಟ್ಟ ಸಲಹೆಗಳೆಲ್ಲವನ್ನೂ ನೀವು ತಿರಸ್ಕರಿಸಿ ಎಂದು ಹೇಳುವುದಿಲ್ಲ. ಒಳ್ಳೆಯ ಸಲಹೆಗಳು you should admire and implement them. ಆದರೆ, ನಿಮ್ಮ ಒರಿಜಿನಲ್ ಥಿಂಕಿಂಗ್ ಏನಿರಬೇಕು? ಆ ಒರಿಜಿನಲ್ ಥಿಂಕಿಂಗ್ ತಮ್ಮ ಇಲಾಖೆಯಲ್ಲಿ ಅನುಷ್ಠಾನಗೊಳಿಸುವುದಕ್ಕೆ ಅವಕಾಶವಿರಬೇಕು. ನಾನು ಇವೊತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಪತ್ರಿಕೆಗಳಿಗೆ ಹೇಳಿದೆ: ಎರಡು ತಿಂಗಳೊಳಗೆ ಎಕ್ಸ್‌ಪ್ಯಾನ್‌ಷನ್ ಮಾಡಿ ಏನು ಮಾನ್ಯ ಮುಖ್ಯಮಂತ್ರಿಗಳು ಮಂತ್ರಿಗಳಿಗೆ ಟಾಕ್ಸಿ ಕೊಟ್ಟರು. ಪಾಪ, ಅವರನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆಂದರೆ, ಇವೊತ್ತು ಮಂತ್ರಿಗಳಿಗೆ ಬೆಲೆಯೇ ಉಳಿದಿಲ್ಲ.

ಏನು ಬೇರೆ ಇತ್ತು ಅದು ಉಳಿದಿಲ್ಲ, ಇಷ್ಟು ದೊಡ್ಡ ಗಾತ್ರದ ಮಂತ್ರಿಮಂಡಲವನ್ನು ಮಾಡುವ ಅವಶ್ಯಕತೆ ನಿಮಗೆ ಏನು ಇತ್ತು? ಅವರಿಗೇನಾದರೂ ಇಲಾಖೆ ಇದೆಯೋ? ಸಚಿವ ಖಾತೆಗಳನ್ನು ಯಾರಿಗೆ ಕೊಡುವುದು ಅವರಿಗೆ ಬಿಟ್ಟ ವಿಚಾರ, ನಾನು ಅದರಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ, ಅದರೆ competent ಮಂತ್ರಿಗಳು ಇದ್ದಾಗ, ಹಿರಿಯ ಮಂತ್ರಿಗಳು ಇದ್ದಾಗ why the Chief Minister is keeping so many portfolios with him? ಇವತ್ತು ಲಾಕಪ್ ಕೇಸ್‌ಗಳು, ಹರಿ ಜನರ ಮೇಲೆ ಅತ್ಯಾಚಾರಗಳು ನಡೆಯುತ್ತಿದೆ, ಇವತ್ತು ಗೃಹ ಇಲಾಖೆಯನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ, I don't charge the Chief Minister. He is doing, but he had no time to devote. ಆರೋಗ್ಯ, ಗೃಹ,ಪಬ್ಲಿಕ್ ಸಿಟಿ, ಬಿ.ಡಿ.ಎ, ಎಕ್ಸೈಜ್, ಹಣಕಾಸು ಎಲ್ಲಾವುಗಳನ್ನೂ ಸಹ ಇವರೇ ಇಟ್ಟು ಕೊಂಡಿದ್ದಾರೆ, ರಾಜ್ಯದ ಯಾವಮುಖ್ಯಮಂತ್ರಿಯೂ ಸಹ ಇಷ್ಟೊಂದು ಇಲಾಖೆಗಳನ್ನು ಇಟ್ಟುಕೊಂಡಿರಲಿಲ್ಲ. ಅದರ ಅವಶ್ಯಕತೆ ತಮಗೆ ಏನು ಇದೆ? ಇದರಿಂದಾಗಿ ಆಡಳಿತ ಮೇಲೆ ಪರಿಣಾಮವಾಗುತ್ತದೆ, ಮುಖ್ಯಮಂತ್ರಿಗಳಿಗೆ ಹೊರತಾಗಿ ಕೆಲವು ಸಮಸ್ಯೆಗಳು ಇದೆ, ಹಾಗಾಗಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ನಿಮಗೆ ನಿಜವಾಗಿಯೂ ಒಳ್ಳೆಯ, ದಕ್ಷ, ಸ್ವಚ್ಛ ಆಡಳಿತವನ್ನು ಕೊಡಲು ಇಚ್ಛೆ ಇದ್ದರೆ ನಿಮ್ಮ ಸ್ನೇಹಿತರ ಮೇಲೆ ಸ್ವಲ್ಪ ವಿಶ್ವಾಸವನ್ನು, ನಂಬಿಕೆಯನ್ನು ಇಟ್ಟು ಇಂಥ ಸೆನ್‌ಸಿಟೀವ್ ಇಲಾಖೆಗಳನ್ನು ಅವರಿಗೆ ಕೊಡಬೇಕಾಗುತ್ತದೆ. ನನಗೆ ಗೊತ್ತು ಎಕ್ಸೈಜ್, ಹಣಕಾಸು ಮುಂತಾದವುಗಳು ಸೆನ್‌ಸಿಟೀವ್ ಇಲಾಖೆಗಳು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೆ, ರಾಮಕೃಷ್ಣ ಹೆಗಡೆಯವರ ಆಡಳಿತವಿದ್ದಾಗ ಸನ್ಮಾನ್ಯ ವೀರಪ್ಪಮೊಯ್ಲಿಯವರು ಇಲ್ಲಿ ವಿರೋದ ಪಕ್ಷದ ನಾಯಕರಾಗಿದ್ದಾಗ ನಮ್ಮ ಸರ್ಕಾರದ ಮೇಲೆ ಟೀಕೆ ಮಾಡಿದ್ದಾರೆ, ನಾನು ಅವರು ಮಾಡಿದ ಭಾಷಣವನ್ನು ತೆಗೆದು ಓದಿದೆ, ಅದರಲ್ಲಿ ಅವರು ಏನು ಟೀಕೆಯನ್ನು

ಮಾಡಿದ್ದಾರೆಂದರೆ ರಾಮಕೃಷ್ಣಹೆಗಡೆಯವರೆ ನೀವು ಏಕೆ ಹಣವಿರತಕ್ಕ ಇಲಾಖೆಯನ್ನು ಇಟ್ಟು ಕೊಂಡಿದ್ದೀರಿ ಎಂದು ಕೇಳಿದರು. ರಾಮಕೃಷ್ಣ ಹೆಗಡೆಯವರು ಹಣಕಾಸು ಇಲಾಖೆಯನ್ನು ಬಿಟ್ಟು ಹಣವಿರತಕ್ಕ ಯಾವುದೇ ಇಲಾಖೆಯನ್ನು ಇಟ್ಟು ಕೊಂಡಿರಲಿಲ್ಲ, ಆದರೆ ಇವರು ಸೆನ್‌ಸಿಟೀವ್ ಇಲಾಖೆಗಳೆಂದು ಹೇಳುತ್ತಿದ್ದಾರೆ, ನಾನು ಹೇಳುತ್ತೇನೆ ಹಣವಿರತಕ್ಕ ಇಲಾಖೆ ಎಂದು, ಎಕ್ಸೈಜ್ ಮತ್ತು ಹಣಾಸು ಇಲಾಖೆಗೆ ರಾಜಶೇಖರ ಮೂರ್ತಿಯವರಿಗೆ ಕೊಡುವುದಕ್ಕೆ ನಿಮಗೆ ಅವರ ಮೇಲೆ ನಂಬಿಕೆ ಇಲ್ಲ, ಅವರ ಕಾರ್ಯಕ್ರಮದಲ್ಲಿ ನಿಮಗೆ ನಂಬಿಕೆ ಇಲ್ಲ, ಗೃಹ ಇಲಾಖೆ ನಿಮಗೇ ಬೇಕು, ಹೆಚ್.ಯು.ಡಿಯಲ್ಲಿ ಹೌಸಿಂಗ್‌ಗೆ ಗೋಪಿನಾಥ ಸಾಂದ್ರ ಮತ್ತೆ ಉಳಿದಿರತಕ್ಕದಕ್ಕೆ ಚೌಡರಡ್ಡಿ ಅವರುಗಳಿಗೂ ಬಿ.ಡಿ.ಎ ಇಲ್ಲ, ಇದಕ್ಕೆ ನಾನು ಏನು ಹೇಳಬೇಕು; ನಿಮ್ಮ ಮಂತ್ರಿಮಂಡಲದಲ್ಲಿ ಮಾನ್ಯ ಧರ್ಮಸಿಂಗ್‌ರವರು 12 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ, ಪಾಪ ಅವರಿಗೆ ಸಮಾಜ ಕಲ್ಯಾಣ ಇಲಾಖೆಯನ್ನು ಕೊಟ್ಟಿದ್ದೀರಿ, ಮಾನ್ಯ ಫೋರ್ಪಡೆಯವರ ಮೇಲೆ ನಮಗೆ ಗೌರವ ಇದೆ, ಅವರಲ್ಲಿ ಅಚಲವಾದ ವಿಶ್ವಾಸವಿದೆ, ಅವರಿಗೆ ರೂರಲ್ ಡೆವಲಪ್‌ಮೆಂಟ್‌ನ್ನು ಕೊಟ್ಟಿದ್ದೀರಿ, ಬಹುಶಃ ಅವರಿಗೆ ಬಿಟ್ಟು ಬೇರೆ ಯಾರಿಗೇ ಆದರೂ ಸಹ ಈ ಖಾತೆಯನ್ನು ಕೊಟ್ಟಿದ್ದರೆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಚುನಾವಣೆಯಾಗುತ್ತಿದ್ದದು ಎರಡು ವಿಧಾನ ಸಭೆ ಮತ್ತು ಪಾರ್ಲಿಮೆಂಟ್ ಚುನಾವಣೆ ಆದ ಮೇಲೆಯೇ. ಫೋರ್ಪಡೆಯವರಿಗೆ ಏಕೆ ಹಣಕಾಸಿನ ಇಲಾಖೆಯನ್ನು ಕೊಡಲಿಲ್ಲ, ಈಗ ಏನಾಗಿದೆ ಎಂದರೆ ಗೃಹಇಲಾಖೆಯಿಂದ ಪಾಪ ರಮಾನಾಥರೈರವರನ್ನು ಕಳಿಸಬೇಕಾಗಿದೆ. ನಂಜನಗೂಡಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರನ್ನು ಸಸ್‌ಪೆಂಡ್ ಮಾಡಿದ್ದು ಏಕೆ ಎಂದು ಕೇಳಿದರು ರಾಮನಾಥರೈರವರು ನನಗೆ ಮುಖ್ಯಮಂತ್ರಿಗಳು ಇಲ್ಲಿಗೆ ಕಳಿಸಿದ್ದಾರೆ, ನೀವು ಈ ಸರ್ಕಲ್ ಇನ್ಸ್‌ಪೆಕ್ಟರನ್ನು ಸಸ್‌ಪೆಂಡ್ ಮಾಡಿ ಎಂದು ಕೇಳುತ್ತಿದ್ದೀರಿ ಆದ್ದರಿಂದ ಅವರನ್ನು ಸಸ್‌ಪೆಂಡ್ ಮಾಡಿದೆ ಎಂದು ಹೇಳುತ್ತಾರೆ. ಆ ಕಾರಣದಿಂದಲೆ ಸರ್ಕಲ್ ಇನ್ಸ್‌ಪೆಕ್ಟರ್‌ನ್ನು ಸಸ್‌ಪೆಂಡ್ ಮಾಡುವುದು? ಮೈಸೂರು ಜಿಲ್ಲೆಗೆ ಹಿರಿಯ ನಾಯಕರಾದ ರಾಜಶೇಖರಮೂರ್ತಿಯವರು ಇರಲಿಲ್ಲವೇ ಅವರಿಗೆ ಏಕೆ ಅಧಿಕಾರವನ್ನು ಕೊಟ್ಟು ನಂಜನಗೂಡಿಗೆ ಕಳಿಸಲಿಲ್ಲ? ಅವರು ಅಲ್ಲಿಗೆ ಹೋಗಿಬಂದುದು ಬೇರೆ ವಿಚಾರ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಏನೂ ಇಲ್ಲದೆಯೇ ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ, ಇನ್ನು ನೀವು ಸ್ವಲ್ಪ ಬೆಂಕಿಯನ್ನು ಏಕೆ ಹಾಕುತ್ತಿದ್ದೀರಿ? ಇಲ್ಲಿ ತೊಂದರೆ ಏನಾಗಿದೆ ಎಂದರೆ, ಮುಖ್ಯಮಂತ್ರಿಗಳು ಪ್ರಾಮುಖ್ಯವಾದ ಇಲಾಖೆಗಳನ್ನು ಏಕೆ ಇಟ್ಟು ಕೊಂಡಿದ್ದಾರೆಂದರೆ: ಮೊದಲನೆಯದಾಗಿ ಈ ತಿಂಗಳು ಮುಗಿಯುತ್ತಿದ್ದಾಗೆ ಕ್ಯಾಬಿನೇಟನ್ನು ವಿಸ್ತರಣೆ ಮಾಡಬೇಕಾಗಿದೆ, ಪ್ರಮುಖವಾದ ಇಲಾಖೆಗಳನ್ನು ಕೊಡುವುದಕ್ಕೆ ನಂಬಿಕಸ್ತರು ಇಲ್ಲ, ಇಂಥ ನಂಬಿಕಸ್ತರನ್ನು ಕ್ಯಾಬಿನೇಟ್‌ಗೆ ತೆಗೆದುಕೊಂಡು ಅವರಿಗೆ ಪ್ರಮುಖವಾದ ಇಲಾಖೆಯನ್ನು ಕೊಡುವವರಿದ್ದಾರೆ, ಅದಕ್ಕಾಗಿ ಬಹುಶಃ ಈ ರೀತಿ ಕೊಟ್ಟಿರಬೇಕು.

ಈಗ ನೋಡಿ ಡಾ.ಪರಮೇಶ್ವರ್‌ರವರಿಗೆ ಪರಿಶಿಷ್ಟಜಾತಿಯವರೆಂದು ಒಳ್ಳೆಯ ಇಲಾಖೆ ಕೊಟ್ಟಿದ್ದಾರೆ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ಸೀನಿಯರ್ ಲೀಡರ್ ನಾಗೇಗೌಡರು, ಅವರಿಗೆ ಪಾಪ ತೆಗೆದುಕೊಂಡು ಹೋಗಿ ಬಿಟ್ಟು ಆ ಇಲಾಖೆಯನ್ನು ಕೊಟ್ಟಿದ್ದಾರೆ.

ಶ್ರೀಕೆ.ಎನ್.ನಾಗೇಗೌಡ:-ಏನೋ ಒಂದು ಜಾಪಾಳ ಮಾತ್ರೆ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:-ಮಾನ್ಯ ರಾಮಸ್ವಾಮಿಯವರು ನಮ್ಮ ಅಸೆಂಬ್ಲಿಯಲ್ಲಿ ಸರ್ವಜ್ಞರಿದ್ದ ಹಾಗೆ. ನನಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ಕೊನೆಪಕ್ಷ ಅವರು ರೆಸ್‌ಪಾಂಡ್ ಮಾಡುತ್ತಾರೆ. ನಾವು

ಹೇಳಿದಕ್ಕೆಲ್ಲ ರೆಸ್‌ಪಾಂಡ್ ಮಾಡುತ್ತಾರೆ. ಒಪ್ಪಿಕೊಳ್ಳುತ್ತೇನೆ ನಾನು ಅದರೆ ಅವರಿಗೆ ಎಂಥ ಪೋರ್ಟ್‌ಫೋಲೀಯೋ ಕೊಟ್ಟಿದ್ದಾರೆ, ಎಲ್ಲ ಹೈಕೋರ್ಟಿನ ಕಡೆ ತೋರಿಸಬೇಕು. ಎಲ್ಲ ಚೀಫ್ ಜೆಸ್ಟೀಸ್‌ರನ್ನು ಕೇಳಿಬಿಟ್ಟು ಮಾಡುತ್ತೇನೆ, ಅಥವಾ ಬೇರೆಮಂತ್ರಿಗಳನ್ನೂ ಕೇಳಿ ಬಿಟ್ಟು ಹೇಳುತ್ತೇನೆಂದು ಮಾಡುತ್ತೇನೆ, ಅಥವಾ ಮಾನ್ಯ ವೀರಪ್ಪ ಮೊಯಲಿಯವರನ್ನು ಕೇಳಿಬಿಟ್ಟು ಹೇಳುತ್ತೇನೆಂದು ಹೇಳುವುದು ಇಷ್ಟೇ ಅವರ ಉತ್ತರ. ನಿಮಗೇತಕ್ಕೆ ಕೊಡಬಾರದು ಒಂದು ಇಂಪಾರ್ಟೆಂಟ್ ಪೋರ್ಟ್‌ಫೋಲಿಯೋ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸರ್ವಜ್ಞ ಎಂಬುದಕ್ಕೆ ಒಂದು ನೆನಪು ಬಂದಿದೆ. ಆವಾಗಲು ಹೀಗೆ ಹೇಳಿ ಪಾಪ ಮಾನ್ಯ ಲಕ್ಷೀಸಾಗರ್‌ರವರನ್ನು.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇಲ್ಲ ಮಾನ್ಯ ಖರ್ಗೆಯವರು ಹೆಸರನ್ನು ಹೇಳಬೇಕೆಂದಿದ್ದೆ. ಒಬ್ಬ ಜಾಲಪ್ಪನವರು ಎಲ್ಲ ಇಲಾಖೆಯನ್ನು ನೋಡುತ್ತಿದ್ದರು. ಆ ಇಲಾಖೆ ಎ.ಪಿ.ಎಂ.ಸಿ. ಕಿತ್ತು ಹಾಕಿಬಿಟ್ಟಿದ್ದಾರೆ. ಮಾರ್ಕೆಟಿಂಗ್ ಕಿತ್ತು ಹಾಕಿ ಬಿಟ್ಟಿದ್ದಾರೆ. ಶುಗರ್ ಇಲಾಖೆ ಅನ್ನುವುದೇ ಇಲ್ಲ. ಅದನ್ನು ಕಿತ್ತುಹಾಕಿಬಿಟ್ಟಿದ್ದಾರೆ. ಅಲ್ಪ ಸ್ವಲ್ಪ ಇತ್ತು ಟೆಕ್ಸ್‌ಟೈಲ್ಸ್ ಅದನ್ನು ಕಿತ್ತಿದ್ದಾರೆ. ಇನ್ನು ಏನು ಉಳಿದಿದೆ.

(ಗೊಂದಲ)

ನಿಮ್ಮ ಮುಖ್ಯಮಂತ್ರಿಗಳು ಅವರು ಪರರನ್ನು ನಂಬುವುದಿಲ್ಲ, ತಮ್ಮನ್ನು ನಂಬುವುದಿಲ್ಲ. ಕೊನೆಗೆ ಅವರು ಕೇಳುತ್ತಾರೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ನಾವೆಲ್ಲ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್.ನಾಗೇಗೌಡ:- ಮಾನ್ಯ ಸಿಂಧ್ಯರವರು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ತಾವು ಬಹಳ ಚೆನ್ನಾಗಿ ಮಾತನಾಡತಕ್ಕಂಥ ಸದಸ್ಯರು. ವಿರೋಧಪಕ್ಷದ ಉಪನಾಯಕರಾಗಿ, ಸಾಮರ್ಥ್ಯವಾಗಿ ವಿರೋಧಪಕ್ಷದ ನಾಯಕರಾಗಿ ತಾವು ಕೆಲಸ ಮಾಡುತ್ತಿದ್ದೀರಿ. ತಾವು ದಯವಿಟ್ಟು ನಮ್ಮ ಪಕ್ಷಕ್ಕೆ ಬರಬೇಕು.

ಶ್ರೀ ಆರ್.ವಿ.ದೇಶಪಾಂಡೆ:- ನಾನು ಮಾತನಾಡುತ್ತಾ ಸೆನ್‌ಸಿಟೀವ್ ಎಂದು ಒಂದು ಪದವನ್ನು ಉಪಯೋಗ ಮಾಡಿದೆ. ಎಲ್ಲೆಲ್ಲಿ ಸರ್ಕಾರಕ್ಕೆ ಆದಾಯ ಬರಬೇಕಾಗಿದ್ದರೆ, ಎಲ್ಲೆಲ್ಲಿ ಪಾರ್ಟಿಗೆ ಆದಾಯ ತರಬಹುದು ಅಲ್ಲಿ 4-5 ಮಿನಿಸ್ಟರ್ ಏತಕ್ಕೆ ಬೇಕು. ಪಾಪ ಕೆಲವು ಮಿನಿಸ್ಟರ್‌ಗಳು They are crying for files. Due to hunger, they are starving for files.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಇದು ಸೌಜನ್ಯವೂ ಅಲ್ಲ, ಸವಿಯು ಅಲ್ಲ. ಏತಕ್ಕೆಂದರೆ ನಾವೆಲ್ಲರು ಸಮಾಧಾನವಾಗಿದ್ದೇವೆ. ಸಂತೋಷವಾಗಿದ್ದೇವೆ. ಒಟ್ಟಾಗಿ ಕೆಲಸ **ಮಾಡುತ್ತಿ**ದ್ದೇವೆ. ನಿಮಗೇನು ಕಷ್ಟಬಂತು. ನಾವ್ಯಾರು ಕಂಪ್ಲೈಂಟ್ ಮಾಡಿಲ್ಲ. ನಿಮಗೆ ಏತಕ್ಕೆ ಸಂಕಟ ಬಂದು**ಬಿಟ್ಟಿದೆಯ**ಲ್ಲ. ಅದು ಏನು:? ನಾವೆಲ್ಲ ಒಂದು ಮನೆಯವರಾಗಿರುವುದಕ್ಕೆ ಸಂಕಟ ಬಂದ ಹಾಗೆ ಇದೆಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಅಲ್ಲಿ ನಿಮ್ಮ ಪರವಾಗಿ ಮಾತನಾಡಲಿಕ್ಕೆ ಯಾರು ಇಲ್ಲ ನಾವು ಇಲ್ಲಿ ಕುಳಿತು ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದೇವೆ. ಹೇಳುವುದಕ್ಕೆ ನಮ್ಮದೇನು ಆಗಬೇಕು. ನಿಮ್ಮ ಪರವಾಗಿ ಯಾರು ಇಲ್ಲವಲ್ಲ. ನಾವು ಹೇಳಬೇಕಲ್ಲ. ಪರಿಸ್ಥಿತಿ ನಿಮ್ಮದು ಹಾಗಾಗಿದೆ. ಅದಕ್ಕೆ ನಿಮಗೆ ಸಹಾಯ ಮಾಡುತ್ತಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ:- ಅರ್ಬನ್ ಡೆವಲಪ್‌ಮೆಂಟ್‌ಇನ್‌ಕ್ಲೂಡಿಂಗ್ ಬಿ.ಡಿ.ಎ.ಇವತ್ತು ಎಷ್ಟು ಅದಕ್ಕೆ ಮಿನಿಸ್ಟರ್‌ಗಳನ್ನು ಮಾಡಿದ್ದೀರಿ. ನೀವು ಕೋ-ಅಪರೇಷನ್‌ನಲ್ಲಿ ಇರುವವರು, ಇವರು ಹೇಳಿದ ಹಾಗೆ ಜಾಲಪ್ಪನವರು ಒಬ್ಬರಿದ್ದರು. ಇವತ್ತು ಏನು ಪರಿಸ್ಥಿತಿ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ:- ಎಷ್ಟುಸಾರಿ ಹೇಳುತ್ತೀರಾ? ಕೋಆಪರೇಷನ್, ಕೋಆಪರೇಷನ್ ಎಂದು.

ಶ್ರೀ ಆರ್.ವಿ.ದೇಶಪಾಂಡೆ:- ನಾನು ಹೇಳುತ್ತೇನೆ ಹೌಸಿಂಗ್ ಮಿನಿಸ್ಟರ್, ಕ್ಯಾಬಿನೇಟ್ ರ್ಯಾಂಕ್ ಮಿನಿಸ್ಟರ್, ನಾನು ಚಾಲೆಂಜ್ ಕೊಡುತ್ತೇನೆ. Ask him if he is getting one file. If the Housing Minister gets one file, I am prepared for any game. ಏತಕ್ಕೆ ಇಷ್ಟು ಜನ ಮಂತ್ರಿಗಳು, ಇಷ್ಟು ದೊಡ್ಡ ಮಿನಿಸ್ಟರಿ ಮಾಡಿಕೊಂಡು ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿಕೊಂಡು ಅವರಿಗೂ ಸಮಾಧಾನವಿಲ್ಲ,. ಇವರಿಗೂ ಅಸಮಾಧಾನ. ಕೆಲವು ಮಿನಿಸ್ಟರ್ ಈಗಾಗಲೇ ನಿಮ್ಮ ಗಮನಕ್ಕೆ ತಂದಿದ್ದೇನೆ. ನಾನು ಹೇಳಿದೆ ಹೌಸಿಂಗ್ ಮಿನಿಸ್ಟರ್‌ಗೆ ಒಂದು ಮಾತನ್ನು ಕಾಂಪ್ರಮೈಸ್ ನಡೆಯುತ್ತಿದೆ, 5ಲಕ್ಷ ರೂಗಳನ್ನು ಕೊಟ್ಟ ದಾರಿ ಕೇಸ್ ಎಂದು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ನಂಬಲಿಲ್ಲ. ಏನು ಹೇಳುತ್ತಿದ್ದೀರಿ, ಸಾದ್ಯವೇ ಇದು ಎಂದು....Is it not an admission that he has taken dowry? What action the Chief Minister has taken against him? I want to know from the chief minister. ಇವತ್ತು ವರ್ತೂರು ಕ್ಷೇತ್ರದ ಬಗ್ಗೆ ಅನ್ಯಾಯವಾಗಿದೆ ಎಂದು ಹೇಳಿದ್ದೇನೆ. ಮುಖ್ಯ ಮಂತ್ರಿಗಳು ಪ್ರೊಟೆಕ್ಟ್ ಮಾಡುತ್ತಿದ್ದಾರೆ. ಎಷ್ಟು ದಿನ ಮಾಡುತ್ತಾರೆಂದು ನಾನು ನೋಡಿತ್ತೇನೆ. I will prove it in this House that there is illegal allotment of sites. There is injustice. I will prove that there is illegal allotment in Varthur Constituency. Give me some time. The Chief Minister is defending the Minister. Let him defend. ಎಷ್ಟು ದಿನ ಡಿಫೆಂಡ್ ಮಾಡುತ್ತಾರೆ, ಎಷ್ಟು ಜನರನ್ನು ರಿಫೆಂಡ್ ಮಾಡುತ್ತಾರೆ? ಅವರು ಅಧಿಕಾರದಲ್ಲಿರುವವರೆಗೆ ಮಾಡಬಹುದು. After that he cannot defend. If he wants to go with such type of Ministers, he will never get good name. ನಿಮಗೆ ನಿಜವಾಗಿ ನಾನು ಹೇಳುತ್ತಿದ್ದೇನೆ, ಸ್ವಚ್ಛ ಆಡಳಿತ ಕೊಡುತ್ತೇವೆ, ಒಳ್ಳೆಯ ಆಡಳಿತ ಕೊಡುತ್ತೇವೆ, ಎಂದು ಇದೆಲ್ಲ ಮಾಡುವುದು ಇದ್ದರೆ I request the Chief Minister to prune the Ministery immediately in the interests of the State, and in the interest of exchequer and the people of the State. I have no right. ಎಷ್ಟು ದಿನ ಕಾದು ನೋಡಬೇಕೆಂಬುದು ಅವರಿಗೆ ಬಿಟ್ಟ ಪ್ರಶ್ನೆ. I am talking in the interests of the State. The Chief Minister may ask, who are you to tele me this. I can tell, as Opposition Leader of the State, in the interest of the State, in the State's exchequesr's interest, to prune the Ministry. ಇಷ್ಟೊಂದು ದೊಡ್ಡ ಗಾತ್ರದ ಮಿನಿಸ್ಟ್ರೀ ಈ ರಾಜ್ಯಕ್ಕೆ ಅವಶ್ಯಕತೆ ಇಲ್ಲ. ಏಕೆಂದರೆ ಮಂತ್ರಿಗಳಿಗೆ ಕೆಲಸ ಇಲ್ಲದಿದ್ದರೆ ಅದರ ಅವಶ್ಯಕತೆ ಇರುವುದಿಲ್ಲ. ಹಾಗಾಗಿ ಇವತ್ತು ಅಡ್ಮಿನಿಸ್ಟ್ರೇಷನ್ ಸಂಪೂರ್ಣವಾಗಿ ಕೊಲ್ಯಾಪ್ಸ್ ಆಗಿದೆ. There is no control over the administration. ಯಾವ ರೀತಿ ಮುಖ್ಯ ಮಂತ್ರಿಗಳು ಇದನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ಗೊತ್ತಿಲ್ಲ. ಅವರೇ ಇದಕ್ಕೆ ಉತ್ತರ ಕೊಡಬೇಕು. ಬಾಂಬೆಯಲ್ಲಿ ಬಾಂಬ್ ಬ್ಲಾಸ್ಟ್ ಆಯಿತು; ಆಗ ಒಂದು ಸುದ್ದಿ ಬಂತು. ಆಗ ಏನು

ಮಾಡಬೇಕು ಪೊಲೀಸ್ ಅಧಿಕಾರಿಗಳು? R.D.X. has come to Hubli and Bangalore. There are competent Police officers. I donot say 'no' ಅಲ್ಲಿ ಬಾಂಬ್ ಬ್ಲಾಸ್ಟ್ ಆಗುವುದಕ್ಕೆ What was the modus operandi? Car and Scooter Parking ಇತ್ತು. ಮುಖ್ಯವಾದ ಸ್ಟಾಲ್‌ಗಳು ಇದ್ದವು. ಸ್ಟಾಕ್ ಎಕ್ಸ್ ಚೇಂಜ್ ಇತ್ತು, ಏರ್ ಇಂಡಿಯ ಬಿಲ್ಡಿಂಗ್ ಇತ್ತು. ಅಲ್ಲೇನೋ ಇತ್ತು; ಆದರೆ ಇಲ್ಲಿಯು ಅದೇನೆ? ಇಲ್ಲಿ ಏನು ಮಾಡಿದರು ಅಂದರೆ, ಎಲ್ಲಿ ಪಾರ್ಕಿಂಗ್ ಇದೆ ಅಲ್ಲಿ ಪಾರ್ಕಿಂಗ್ ಮಾಡಕೂಡದು ಎಂದು ಮಾಡಿದರು. What is this. Do you mean to say that the modus operandi that was operated in Bombay will be operated in Bangalore? Some intelligency, some thought has to be given. Modus operandi which is already used in Bombay cannot be used in Bangalore. They will come with some other plans. ಅದರ ಬಗ್ಗೆ ಏನು ಚಿಂತನೆ ಇಲ್ಲ, ವಿಚಾರ ಇಲ್ಲ. ಬಾಂಬೆಯಲ್ಲಿ ಏನಾಯಿತು ಅದರ ಬಗ್ಗೆ ಇಲ್ಲಿ ಕ್ರಮ ಕೈಗೊಳ್ಳಬೇಕಾದರೆ ನೀವು ಏತಕ್ಕೆ ಮುಖ್ಯ ಮಂತ್ರಿಗಳಾಗಿ ಇರಬೇಕು? Why the Chief Minister is required? ಸಬ್ ಇನ್‌ಸ್ಪೆಕ್ಟರ್ ಮಾಡುತ್ತಾರೆ. ಕಾರ್ ಪಾರ್ಕಿಂಗ್ ಮಾಡಬೇಡಿ ಎಂದು ಹೇಳುತ್ತಾರೆ. ಇದರಿಂದ ಎಲ್ಲಾ ಕಡೆ ಎಷ್ಟು ಜನರಿಗೆ ಕಷ್ಟವಾಗಿದೆ. ತೊಂದರೆಯಾಗಿದೆ ಎಂಬುದನ್ನು ವಿಚಾರ ಮಾಡಿದ್ದೀರಾ? ಅವಶ್ಯಕತೆ ಇದ್ದರೆ, ಇನ್‌ಫಾರ್ಮೇಷನ್ ಇದ್ದರೆ ಮಾಡಿ. You do anything you want. But you have to give some thoughts , ಸ್ವಲ್ಪ ವಿಚಾರ ಮಾಡಿ Same type of modus operandi cannot be implemeted in all parts of the country. ಇದರ ಬಗ್ಗೆ ನಿಮ್ಮಲ್ಲಿ ಚಿಂತನೆ ಇಲ್ಲ. ಏಕೆಂದರೆ ಟೈಂ ಇಲ್ಲ ನಿಮಗೆ ಚಿಂತನೆ ಮಾಡುವುದಕ್ಕೆ. ಹಾಗಾಗಿ ಪೊಲೀಸ್ ಇಲಾಖೆ ಮೇಲೆ ಸಂಪೂರ್ಣವಾಗಿ ಒಡಿತ ಹೋಗಿದೆ. ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್ ಅನ್ನು ಎಷ್ಟು ಜನರನ್ನು ನೀವು ಅರೆಸ್ಟ್ ಮಾಡಿದ್ದೀರಿ? ಬಾಂಬೆ ಬ್ಲಾಸ್ಟ್ ಆದ ಮೇಲೆ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಸಹ ಅದನ್ನೇ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂಬ ಸುದ್ದಿ ಬಂತು. How many-anti-social people have been arrested, I want to know; not single one. ಆ್ಯಂಟಿ ಸೋಷಿಯಲ್ ಜನ ಯಾರೂ ಸಿಕ್ಕಿಲ್ಲ.

I am subject to correction.

The Memon brothers; who have left the country, who are responsible for the Blasts, I was told that their licence for weapons were renewed in Hubli. This is the information I have. I am subject to correction. Memon Brother's Arms licence were issued in Hubli. It is racket. You have to think about that. You have to think over the matter. ಬಾಂಬೆಯಲ್ಲಿ ಈ ಪ್ರಕಾರ ಆಯಿತು. ಅದೇ ಪ್ರಕಾರ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಸಾಧ್ಯ ಆಗುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ನಿಮ್ಮ ಇಂಟಲಿಜೆನ್ಸಿ ಇಲಾಖೆಯವರನ್ನು ಉಪಯೋಗಿಸಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ಎಂಬುದು ಎಲ್ಲೂ ಕಂಡುಬರುತ್ತಿಲ್ಲ. ಪೋಲೀಸ್ ಇಲಾಖೆಯ ಬಗ್ಗೆ ಒಂದೆರಡು ಸಲಹೆಯನ್ನು ಕೊಡುತ್ತೇನೆ. ಪೋಲೀಸ್ ಇಲಾಖೆ ಎಷ್ಟು ಎಫೆಕ್ಟೀವ್ ಆಗಿ ಕೆಲಸ ಮಾಡಬೇಕು ಆ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವರಿಗೆ ಸಹ ಸರಿಯಾಗಿ ಬಡ್ಜೆಟರಿ ಸಪೋರ್ಟ್ ಇಲ್ಲ. ಪೋಲೀಸ್ ಸ್ಟಾಫ್ ಇಲ್ಲ, ವೈರ್‌ಲೆಸ್ ಸೆಟ್ಟುಗಳು ಇಲ್ಲ, ವೆಹಿಕಲ್ಸ್ ಇಲ್ಲ. ಹಾಗಾಗಿ ಎಫೆಕ್ಟೀವ್ ಆಗಿ ಕೆಲಸ ಮಾಡಲಿಕ್ಕೆ ಪೋಲೀಸ್ ಇಲಾಖೆಗೆ ಸರಿಯಾದ

ಫೆಸಿಲಿಟೀಸ್ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಈ ಇಲಾಖೆ Result-oriented ಇರಬೇಕಾಗುತ್ತದೆ. ಇವತ್ತು ಬ್ಯಾಂಕಿನಲ್ಲಿ ಒಂದು ಟ್ರೆಜರಿ ಇರುತ್ತದೆ. ಅದಕ್ಕೆ ಒಂದು ಡಬಲ್ ಲಾಕರ್ ಇರುತ್ತದೆ. It is difficult to go and commit robbery also. But your Department is a open treasury; any-body can come in and anybody can go. Similarly forest department is also an open treasury. Anybody can come and go. ಇವತ್ತು ಒಂದು ಟೀಕ್‌ವುಡ್ ಮರ-ಏನಿದೆ, ಅದಕ್ಕೆ ಒಂದು ಕ್ಯೂಬಿಕ್ ಮೀಟರ್‌ಗೆ 30 ಸಾವಿರ 40 ಸಾವಿರ 50 ಸಾವಿರವರೆಗೆ ಅದರ ಬೆಲೆ ಇದೆ. ಅದನ್ನು ಪ್ರೊಟೆಕ್ಟ್ ಮಾಡಬೇಕಾದರೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ವೈರ್‌ಲೆಸ್ ಸೆಟ್ಸ್ ಇಲ್ಲ; ವೆಹಿಕಲ್ಸ್ ಇಲ್ಲ. ಇಲ್ಲ ಆದಾಯ ತೆಗೆದುಕೊಳ್ಳಬೇಕು, ಆದಾಯ ಹೆಚ್ಚು ಮಾಡಲಿಕ್ಕೆ ಅರಣ್ಯ ಸಂರಕ್ಷಣೆ ಮಾಡಲಿಕ್ಕೆ ಸಹ ತಾವು ಹೆಚ್ಚಿನ ಗಮನವನ್ನು ಕೊಡಬೇಕು. ಹೋಮ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಿದ್ದೇನೆ. ತಮಗೂ ಒಂದು ಸಲಹೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಮತ್ತೊಂದು ಇಲಾಖೆ ಇದೆ. ಅದು ಆರೋಗ್ಯ ಇಲಾಖೆ. ಆರೋಗ್ಯ ಇಲಾಖೆಯಲ್ಲಿ ಏನಾಗಿದೆ ಅಂದರೆ ಎಂ.ಎಲ್.ಎ. ಪ್ಲೀಸ್ ಮಾಡಲಿಕ್ಕೆ ಅಥವಾ ಯಾರನ್ನೋ ಪ್ಲೀಸ್ ಮಾಡಲಿಕ್ಕೆ We are going to sanction hospitals--ಇದು ಸರಿಯಲ್ಲ. ಇದ್ದ ಹಾಸ್ಪಿಟಲ್‌ಗಳಿಗೆ ಡಾಕ್ಟರ್‌ಗಳು ಇಲ್ಲ ನರ್ಸ್‌ಗಳು ಇಲ್ಲ ಅಟೆಂಡರ್ಸ್ ಇಲ್ಲ. Please try to build up infrastructure facilities in these hospitals. ಎಷ್ಟೋ ಆಸ್ಪತ್ರೆಗಳಿಗೆ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ಡಾಕ್ಟರ್‌ಗಳು ಇಲ್ಲ, ನರ್ಸ್ ಇಲ್ಲ ಯಾವುದೂ ಇಲ್ಲ. ನಮ್ಮ ಯಲ್ಲಾಪುರದಲ್ಲಿ ಆಸ್ಪತ್ರೆ ಮಾಡಿದ್ದೇವೆ ಬಿಲ್ಡಿಂಗ್ ಬಹಳ ಬ್ಯೂಟಿಫುಲ್ ಆಗಿದೆ. ಆ ತರಹ ಆಸ್ಪತ್ರೆ ಕನ್‌ಸ್ಟ್ರಕ್ಷನ್ ಆಗಿದೆ. ಅಲ್ಲಿ ಧೂಳು ತೆಗೆಯಲಿಕ್ಕೆ ಒಬ್ಬ ಸಿಪಾಯಿ ಇಲ್ಲ. ಧೂಳನ್ನು ಡಾಕ್ಟರುಗಳೇ ಹೊಡೆದುಕೊಳ್ಳಬೇಕು. ಕಾರವಾರ ಮತ್ತು ಯಲ್ಲಾಪುರಗಳಲ್ಲಿ 5 ವೆಹಿಕಲ್ಸ್‌ಗಳು ಇವೆ. ಅಲ್ಲಿ ಡ್ರೈವರ್‌ಗಳು ಇಲ್ಲ. ಡ್ರೈವರ್ ತಗೆದುಕೊಳ್ಳುವುದಕ್ಕೆ ನಮಗೆ ಪರ್ಮಿಷನ್ ಇಲ್ಲವೆಂದು ಹೇಳುತ್ತಾರೆ. ಹಾಗಾಗಿ ಹೊಸದಾಗಿ ಹಾಸ್ಪಿಟಲ್‌ಗಳನ್ನು ಮಂಜೂರು ಮಾಡುವುದು ಬೇಡವೆಂದು ನಾನು ಹೇಳುವುದಿಲ್ಲ. ನೀವು ಕಾರ್ಯಕ್ರಮವನ್ನು ಮಾಡಿ ಮಾಡುವುದಕ್ಕೆ ಮುಂಚೆ ಅದಕ್ಕೆ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಕೊಡಿ. ಬೇಕಾದ ಡಾಕ್ಟರ್‌ಗಳನ್ನು ನರ್ಸ್‌ಗಳನ್ನು ಮೆಷಿನರಿಗಳನ್ನು ಕೊಡಿ. ಅದೆಲ್ಲ ವ್ಯವಸ್ಥೆಯನ್ನು ಮಾಡಿ. ಕೆಲವು ಆಸ್ಪತ್ರೆಗಳಲ್ಲಿ ಎಕ್ಸ್‌ರೇ ಮೆಷಿನರಿ ಇಲ್ಲ. ಕೆಲವು ಆಸ್ಪತ್ರೆಗಳಲ್ಲಿ ಬ್ಲಡ್ ಇರುವುದಿಲ್ಲ. ಎಲ್ಲಾ ಆಸ್ಪತ್ರೆಗಳಿಗೆ ಬೇಸಿಕ್ ಆಗಿ ಏನೇನು ಬೇಕು ಅದನ್ನು ಕೊಟ್ಟು ಕೆಲಸ ಮಾಡಿ ಆಮೇಲೆ ಕೆಲಸ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ವೆಹಿಕಲ್‌ಗಳು ಏನು ಖಾಲಿ ಬಿದ್ದಿವೆ ಅವುಗಳಿಗೆ ಬೇಕಾದ ಡ್ರೈವರ್‌ಗಳನ್ನು ಆದಷ್ಟು ಬೇಗ ಅಪಾಯಿಂಟ್ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ವ್ಯವಸ್ಥೆಯಾಗಬೇಕು. ಏಕೆಂದರೆ ಗಾಡಿಗಳನ್ನು ಹಾಗೆಯೇ ನಿಲ್ಲಿಸಿದರೆ ಕೆಟ್ಟು ಹೋಗುತ್ತವೆ. Brand new vehicles are looking like old vehicles. ಫ್ಯಾಮಿಲಿ ಪ್ಲಾನಿಂಗ್ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಆ ದೃಷ್ಟಿಯಲ್ಲಿ ನಾವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ನಾವು 45 ವರ್ಷಗಳಿಂದ ಸಾಕಷ್ಟು ಪ್ರಗತಿಯನ್ನು ಮಾಡಿದ್ದೇವೆ. ಎಲ್ಲ ರಂಗಗಳಲ್ಲಿ ಸರ್ಕಾರ ಗಮನ ಕೊಟ್ಟಿದೆ. ಕೃಷಿ ರಂಗದಲ್ಲಿ, ಕೈಗಾರಿಕಾ ರಂಗದಲ್ಲಿ ಎಲ್ಲ ರಂಗಗಳಲ್ಲಿ ಪ್ರಗತಿಯಾಗಿದೆ. ಆದರೆ ಎಲ್ಲಾ ಪ್ರಗತಿ has been eaten away by the increasing population. ಹೆಚ್ಚಿನ ಇಂಪಾರ್ಟೆನ್ಸನ್ನು ಕೇಂದ್ರ ಸರ್ಕಾರ ಕೊಡುತ್ತಿಲ್ಲ. ಆ ಲಾಭವನ್ನು ಪಡೆದುಕೊಂಡು ಹೆಚ್ಚಿನ ಪ್ರಾಶಸ್ತ್ಯವನ್ನು ನಮ್ಮ ಸರ್ಕಾರ ಕೊಡಬೇಕು. ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಾದ ರಾಯಚೂರು, ಬಳ್ಳಾರಿ, ಗುಲ್ಬರ್ಗಾ ಈ ಜಿಲ್ಲೆಗಳಲ್ಲಿ more stress should be given. ಫ್ಯಾಮಿಲಿ ಪ್ಲಾನಿಂಗ್ ಅಂಕಿ ಅಂಶಗಳ ಪ್ರಕಾರ They are weak compared to

other parts of the State. ಆ ದೃಷ್ಟಿಯಲ್ಲಿ ನಿಮ್ಮ ಇಲಾಖೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಷ್ಟೂ ಮಾನ್ಯ ಧರ್ಮಸಿಂಗ್ ಸಾಹೇಬರು ಒಳ್ಳೆಯ ಕೆಲಸ ಮಾಡಿದ್ದಾರೆ. He has constituted a Committee of verification for checking bogus caste certificates. ಬಹಳ ಸಂತೋಷ, ಅಭಿನಂದನೆ ಸಲ್ಲಿಸುತ್ತಿದ್ದೇನೆ. ಆದರೆ ಏನಾಗಿದೆ ಅಂದರೆ ನಿಮ್ಮ ಇಲಾಖೆಯಲ್ಲಿ ಬಹಳ ಹಣ ಪೋಲಾಗುತ್ತಿದೆ. ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಬಡಜನರಿಗೆ ಹಿಂದುಳಿದ ಜನಾಂಗದವರಿಗೆ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಸಾಕಷ್ಟು ಅನುಕೂಲ ಮಾಡಲಿಕ್ಕೆ ನಿಮ್ಮ ಡಿಪಾರ್ಟ್‌ಮೆಂಟ್‌ನಿಂದ ಸಹಾಯ ಇದೆ. ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿರಬಹುದು. ಮಾನಿಟರಿಂಗ್ ವ್ಯವಸ್ಥೆ ಮಾಡಿದ್ದೀರಿ. ಮೂರ್ನಾಲ್ಕು ಕಡೆ ಮಾಡಿದ್ದಾರೆ. ಬೆಳಗಾಂ, ಗುಲ್ಬರ್ಗ ಇಲ್ಲಿ ಮಾಡಿದ್ದಾರೆ. ಬೆಳಗಾಂನಲ್ಲಿ ಶೇಕಡ 18ರಷ್ಟು ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ತಮಗೆ ತಿಳಿಸಿದ್ದೇವೆ. ಎಲ್ಲ ಕಡೆ 18 ಪರ್ಸೆಂಟ್ ಹಣ ಇಟ್ಟಿದ್ದು ಅದು ಖರ್ಚಾಗುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಖರ್ಚುಮಾಡಬೇಕಾದ ಹಣವನ್ನು ಖರ್ಚುಮಾಡುವುದಿಲ್ಲ. ಖರ್ಚು ಮಾಡದೆ ಪುನಃ ವಾಪಸು ರೆಮಿಟ್ ಮಾಡುತ್ತಾರೆ. ಮಾನಿಟರಿಂಗ್ ಮಾಡಿ ಹಣವನ್ನು ಯಾವ ವರ್ಗದವರ ಸಲುವಾಗಿ ಇಟ್ಟಿದ್ದಾರೆ ಅದರ ಉಪಯೋಗವಾಗುವ ವ್ಯವಸ್ಥೆ ನಿಮ್ಮ ಕಡೆಯಿಂದ ಆಗಬೇಕು. ಮತ್ತೊಂದು ಏನಾಗಿದೆ ಅಂದರೆ ಈ ಇಲಾಖೆ ಬಹಳ ದೊಡ್ಡ ಇಲಾಖೆ. ನಿಮ್ಮ ಇಲಾಖೆಯ ಅಧಿಕಾರಿಗಳು ಆರ್ಥಿಕವಾಗಿ ಸಂಪನ್ನರಾಗಿರುವ ಜನಗಳ ಒತ್ತಡಕ್ಕೆ ಮಣಿದು ಅವರಿಗೆ ಬೇಕಾದ ಕೆಲವು ಆರ್ಡರ್‌ಗಳನ್ನು (MR. SPEAKER IN THE CHAIR) ಮಾಡುತ್ತಾರೆ. ನೀವು ಆರ್ಡರ್‌ಗಳನ್ನು ಕಳುಹಿಸಿದರು ಅದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ. ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಇಲಾಖೆ ಏನಿದೆ ಈ ಇಲಾಖೆಯಿಂದ ಎಷ್ಟು ಕೆಲಸವಾಗಬೇಕು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಆಗುತ್ತಿಲ್ಲ. ಹಾಗಾಗಿ ನಿಮಗೆ ನಾನು ಸಲಹೆ ಮಾಡುತ್ತಿದ್ದೇನೆ. A separate cell of the department of Backward Classes and Minorities be formed for checking, investigating complaints or grievances, in respect of any authority, involved in action, wilful failure or omisssion, cause deliberate delays, incorrect implementation of administrative recommendations or decisions or orders passed by you. ಇದನ್ನು ತೆಗೆದು ಓದಿ ಯಾವ ಆರ್ಡರ್ ಏನಾಗಿದೆ ಏನು ಇಂಪ್ಲಿಮೆಂಟ್ ಆಗುತ್ತಿದೆ ಅದು ಗೊತ್ತಿಲ್ಲ. ಇಲ್ಲಿ ಲೀಗಲ್ ಆಕ್ಟಿವಿಟೀಸ್ ನಡೆಯುತ್ತದೆ. ಮಾನಿಟರಿಂಗ್ ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಿದ್ದೀರಿ. ಉದಾಹರಣೆಗೆ High level authority for the Scheduled Caste and Scheduled tirbe. ಆ ತರಹ ಹೈಲೆವೆಲ್ ಅಥಾರಿಟಿಯನ್ನು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ಮಾಡಿ. ನಿಮಗೆ ಎಷ್ಟು ಸಾರಿ ಹೇಳಬೇಕೋ ಗೊತ್ತಾಗುವುದಿಲ್ಲ.ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಬಗ್ಗೆ ರೆಡ್ಡಿ ಕಮಿಷನ್ ಬಗ್ಗೆ ರಿಪೋರ್ಟ್ ಏನಿದೆ ಅದನ್ನು ಇಂಪ್ಲಿಮೆಂಟ್ ಮಾಡುತ್ತೇನೆಂದು ವೀರೇಂದ್ರ ಪಾಟೀಲ್‌ರವರು ಹೇಳಿದರು. ರಿಪೋರ್ಟ್ ಬಂದ ಮೇಲೆ ನಾನು ಇಂಪ್ಲಿಮೆಂಟ್ ಮಾಡುತ್ತೇನೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆ ಮಾಡುತ್ತೇನೆಂದು ಹೇಳುತ್ತಾ ಬಂದರು. ಮುಖ್ಯಮಂತ್ರಿಯಾದ ಮೇಲೆ ಹೇಳುತ್ತಾ ಹೋದರೂ ಆಗಲಿಲ್ಲ. ಈಗ ಮೊಯಿಲಿಯವರು ಅದೇ ಹೇಳುತ್ತಾ ಇದ್ದಾರೆ. ಕ್ಯಾಬಿನೆಟ್ ಸಬ್ ಕಮಿಟಿ ಮಾಡುತ್ತೇವೆಂದರೆ ಎಷ್ಟು ದಿವಸಗಳಲ್ಲಿ ಕ್ಯಾಬಿನೆಟ್ ಸಬ್ ಕಮಿಟಿ ಮಾಡುತ್ತೀರಿ. ಎಷ್ಟು ದಿವಸಗಳಲ್ಲಿ ರಿಪೋರ್ಟ್ ಅನ್ನು ಇಂಪ್ಲಿಮೆಂಟ್ ಮಾಡುತ್ತೀರಿ? ಬ್ಯಾಕ್‌ವರ್ಡ್ ಕ್ಲಾಸ್‌ನವರ ಏಳಿಗೆ ಆಗಬೇಕು ಸಾಮಾಜಿಕವಾಗಿ ಆರ್ಥಿಕವಾಗಿ ಎಜುಕೇಶನ್‌ನಲ್ಲಿ ಅವರು ಮುಂದೆ ಬರಬೇಕು ಎನ್ನುವ ಇಚ್ಛೆ ಇದ್ದರೆ ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಿ. ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾವು ಏನು ಮಾತನಾಡಿದ್ದೇವೆ-ಸಮಯಾಭಾವದಿಂದ We have not been able to do justice to any of the departments. However, I have tried to give some suggestions. It is for you to try and implement them. Thank you very much.